ಸಂಚಿಕೆ
೧೬
ಮೇ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ
೧೬
ಮೇ, ೨೦೧೮

# ಬೃಂದಾವನ ವಾಣಿ

## ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಈ ಸಂಚಿಕೆಯಲ್ಲಿ....


| | | | |
|---|---|---|---|
| ಅಭಿಮಾನಿ ತಂಡದ ನುಡಿ | ೦೨ | ಕೆಮೆರಾ ಕಣ್ಣಿನಿಂದ | ೧೨ |
| ಧರ್ಮವಾಣಿ | ೦೩ | ಅಮ್ಮ | ೧೪ |
| ಹಿನ್ನೋಟ | ೦೫,೧೩ | ಕಿಶೋರ ವಾಣಿ | ೧೫ |
| ಕವಿ ನಮನ | ೦೬ | ಕ್ರೀಡಾವಾಣಿ | ೧೬ |
| ಪರಿಚಯ | ೧೦ | ನಾವು ನೋಡಿದ ಸಿನಿಮಾ | ೧೬ |
| ರಾಜ್ ನಮನ | ೧೧ | ಹಾಸ್ಯ | ೧೭ |
| | | ಕಥೆ | ೧೯ |



ಸಂಪಾದಕ ವರ್ಗ



ಸತ್ಯ ಪ್ರಸಾದ್



ಭಾಸ್ಕರ ತೈಲಗೇರಿ



ಅನಿಲ್ ಭಾರಧ್ವಾಜ



ಉಮಾ ಮೂರ್ತಿ



ಲಕ್ಷ್ಮಿ ಕೊಲಾಲ್



ಪ್ರಶಾಂತ ಎಂ.



ಅಮೂಲ್ಯ ಕಟ್ಟೀಮನಿ


ಮುಖಪುಟ ಚಿತ್ರ
ನಗರ ಕೋಟೆ
ಕೊಡಚಾದ್ರಿ ದಾರಿಯಲ್ಲಿ
(ಹೊಸನಗರದಿಂದ ೧೭ಕಿ.ಮೀ)

ಸಂಪಾದಕೀಯ ಪುಟ ಚಿತ್ರ:
ಕುಪ್ಪಳ್ಳಿ ಮನೆ @ ಲಾಲಬಾಗ್

ಚಿತ್ರ ಕೃಪೆ : ಅಂತರ್ಜಾಲ

### ಸಂಪಾದಕ ವರ್ಗದಿಂದ......


**ಬೃಂ**ದಾವನ ವಾಣಿಯ ಸಮಸ್ತ ಓದುಗ ಮಿತ್ರರ ಮುಂದೆ ಮತ್ತೊಂದು ಸಂಚಿಕೆ ತರಲು ತುಂಬಾ ಸಂತಸವಾಗುತ್ತಿದೆ. ನೀವೆಲ್ಲಾ ಈ ಸಂಚಿಕೆಯನ್ನು ಓದಿ ಆನಂದಿಸುವಿರೆಂಬ ನಂಬಿಕೆಯಿದೆ.

ಬೃಂದಾವನ ಸಂಸ್ಥೆಯ ಅಭಿಮಾನಿ ತಂಡದ ಸಾರಥ್ಯದಲ್ಲಿ ಏಪ್ರಿಲ್ ೨೮ ರಂದು ಯುಗಾದಿ ಮತ್ತು ವಸಂತೋತ್ಸವ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ನಡೆಯಿತು. ಹಿರಿಯ ನಟಿ ಹರಿಣಿಯವರು ಮುಖ್ಯ ಅತಿಥಿಯಾಗಿ ಆಗಮಿಸಿ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು.

ಕರ್ನಾಟಕದಲ್ಲಿ ಒಂದು ತಿಂಗಳಿನಿಂದ ಚುನಾವಣೆಯ ಬಿಸಿಯಿತ್ತು. ಅಬ್ಬರದ ಪ್ರಚಾರ, ಕೆಸರೆರಚಾಟಕ್ಕೆಲ್ಲ ಕೊನೆ ಬಿದ್ದು ಚುನಾವಣೆಯು ಮುಗಿದಿದೆ. ಈಗ ಎಣಿಕೆ ಕಾರ್ಯ ಮುಗಿದು ಫಲಿತಾಂಶವು ಬಂದಿದೆ. ಕರ್ನಾಟಕದ ಜನತೆ ಯಾವ ಪಕ್ಷಕ್ಕೂ ಬಹುಮತ ಕೊಡದೆ ಅತಂತ್ರ ಸ್ಥಿತಿಗೆ ಬರುವಂತೆ ಮಾಡಿದ್ದಾರೆ. ಯಾರೇ ಮುಖ್ಯಮಂತ್ರಿಯಾಗಲಿ, ಅವರಿಗೆ ಮುಂಗಡವಾಗಿ ಶುಭಾಶಯ ಕೋರಿ ಮುಂದಿನ ಐದು ವರ್ಷ ಯಾವುದೇ ಹಗರಣಗಳಿಲ್ಲದೆ "ಅಭಿವೃದ್ಧಿ" ಎಂಬ ಧ್ಯೇಯೋದ್ದೇಶದಿಂದ ಜನಪರ ಆಡಳಿತ ಕೊಡುವರೆಂದು ಆಶಿಸೋಣ.

ಚುನಾವಣೆಯ ನಂತರ ಮತ್ತೊಂದು ಚರ್ಚೆಯ ವಿಷಯ ಐಪಿಎಲ್. ಬೆಂಗಳೂರನ್ನು ಪ್ರತಿನಿಧಿಸೋ ಆರ್.ಸಿ.ಬಿ ಸುಮಾರು ಪಂದ್ಯಗಳಲ್ಲಿ ಸೋತು "ಈ ಸಲ ಕಪ್ ನಮ್ಮದೇ" ಅನ್ನೋ ಘೋಷಣೆಯನ್ನು "ಮುಂದಿನ ಸಲ ಕಪ್ ನಮ್ಮದೇ" ಗೆ ಬದಲಾಯಿಸಬೇಕಿದೆ. ಈಗ ಕೊನೆಯ ಸ್ಥಾನಕ್ಕೆ ಆರ್.ಸಿ.ಬಿ ತಂಡ ಭಾರಿ ಪೈಪೋಟಿ ನಡೆಸಿದೆ. ಕರ್ನಾಟಕದ ಯಾರೊಬ್ಬ ಆಟಗಾರನಿರದಿದ್ದರೂ "ನಮ್ಮ ಆರ್.ಸಿ.ಬಿ" ಅಂತ ಯಾಕಾದರೂ ಕರಿತೀವೋ ಗೊತ್ತಿಲ್ಲ. ಮುಂದಿನ ವರ್ಷದಲ್ಲಾದರೂ ಕರ್ನಾಟಕದ ಉತ್ತಮ ಆಟಗಾರರನ್ನು ತಂಡದಲ್ಲಿ ಸೇರಿಸಿಕೊಂಡು ಕಪ್ ತಮ್ಮದಾಗಿಸಿಕೊಳ್ಳುತ್ತಾರೆಂದು ಭಾವಿಸೋಣ.

ಕನ್ನಡದ ಕಟ್ಟಾಳು, ನಮ್ಮೆಲರ ಪ್ರೀತಿಯ ಎಚ್. ವೈ. ರಾಜಗೋಪಾಲ್ ಏಪ್ರಿಲ್ ೨ ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಕನ್ನಡ ಸಾಹಿತ್ಯ ಮತ್ತು ಸಂಗೀತದಲ್ಲಿ ಬಹಳ ಆಸಕ್ತಿ. ಕನ್ನಡ ಸಾಹಿತ್ಯ ರಂಗ, ಪ್ರಸ್ತಾಪ ಮತ್ತು ಶ್ರುತಿ ಎಂಬ ಸಂಸ್ಥೆಗಳನ್ನು ಸ್ಥಾಪಿಸಿ ಬೆಳಸಿದರು. ಅವರಂತಹ ಸಜ್ಜನ, ಸರಳ, ಸಹೃದಯಿ ವ್ಯಕ್ತಿಯನ್ನು ಕಾಣುವುದು ಅತಿ ವಿರಳ. ನವೆಂಬರ್ ೨೦೧೬ ಬೃಂದಾವನ ವಾಣಿ ಸಂಚಿಕೆಯಲ್ಲಿ "ವ್ಯಕ್ತಿ-ಪರಿಚಯ" ಅಂಕಣದಲ್ಲಿ ಒಂದು ಸುಧೀರ್ಘ ಸಂದರ್ಶನವನ್ನು ಪ್ರಕಟಿಸಿದ್ದೆವು. ಎಚ್. ವೈ. ರಾಜಗೋಪಾಲ್ ರವರಿಗೆ ಬೃಂದಾವನ ವಾಣಿಯ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.



ಈ ಸಂಚಿಕೆಯಲ್ಲಿ ಕಥೆ, ಕವನ, ಹಾಸ್ಯ, ವಸಂತೋತ್ಸವದ ಬಗ್ಗೆ ವರದಿ, ಲೇಖನಗಳಿವೆ. ನಮ್ಮ ಅಣ್ಣಾವ್ರ ಬಗ್ಗೆ ಇಬ್ಬರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಶ್ರೀಯುತ ಆರ್. ಕೆ. ಪದ್ಮನಾಭ ಬಗ್ಗೆ ಅವರ ಪ್ರಥಮ ಶಿಷ್ಯೆ ಲೇಖನ ಬರೆದಿದ್ದಾರೆ. ಅನಕೃ ಮತ್ತು ಕೆಎಸ್ಎನ್ ಬಗ್ಗೆ ಲೇಖನಗಳಿವೆ. ಕಿಶೋರವಾಣಿಯಲ್ಲಿ ನಮ್ಮ ಮುದ್ದು ಪುಟಾಣಿಗಳು ತಮ್ಮ ತಮ್ಮ ಹವ್ಯಾಸಗಳನ್ನು ಬರಹ ಮತ್ತು ಚಿತ್ರಗಳ ಮೂಲಕ ಹಂಚಿಕೊಂಡಿದ್ದಾರೆ. ಮೊದಲ ಬಾರಿಗೆ ವಾಣಿಗೆ ಲೇಖನ ಬರೆದ ಹೊಸ ಬರಹಗಾರರಿಗೆ ಆದರದ ಸ್ವಾಗತ.

ಈ ಸಂಚಿಕೆಯನ್ನು ಓದಿ, ನಿಮ್ಮ ಅಭಿಪ್ರಾಯ ತಿಳಿಸಿವುದನ್ನ ಮರೆಯಬೇಡಿ.

ಮುಂದಿನ ಸಂಚಿಕೆಯಲ್ಲಿ ಸಿಗೋಣ.

*-ಭಾಸ್ಕರ ತೈಲಗೇರಿ*


Copyright © KCO – Brindavana

ಸಂಚಿಕೆ
೧೬
ಮೇ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅಭಿಮಾನಿ ತಂಡದ ನುಡಿ

*ಮಣ್ಣು, ನೀರು, ಪೋಷಣೆ ಸರಿಯಾಗಿದ್ದರೆ, ಬೀಜವೊಂದು ಬೃಹತ್ ಮರವಾಗದಿರುವುದೇ??*



**ನ್ಯೂ** ಜೆರ್ಸಿ ಕನ್ನಡ ಸ್ನೇಹಿತರಿಗೆಲ್ಲ ಪ್ರೀತಿ ಪೂರ್ವಕ ವಂದನೆಗಳು.

ಚಳಿಗಾಲ ಮುಗಿದು ನ್ಯೂ ಜೆರ್ಸಿ ಹಸಿರು ಉಡುಗೆ ಉಟ್ಟು ಕಂಗೊಳಿಸುತ್ತಿದ್ದಾಳೆ. ಪಕ್ಷಿಗಳ ಕಲರವ ಮತ್ತೆ ಕಿವಿಗಳನ್ನು ತುಂಬುತ್ತಿವೆ. ನಮ್ಮ ಮನೆಯ ಮುಂದಿರುವ ಹಿರಿಯ ಅಮೇರಿಕನ್ ದಂಪತಿಗಳಾದ ಮೈಕ್ ಮತ್ತು ಡೊರಥಿಗೆ ಗಾರ್ಡನಿಂಗ್ ಎಂದರೆ ಎಲ್ಲಿಲ್ಲದ ಆಸಕ್ತಿ. ಗಂಡ ಹೆಂಡತಿ ಏನಾದರೂ ಮಾಡುತ್ತಲೇ ಇರುತ್ತಾರೆ. ಮನೆಯ ಮುಂದಿರುವ ಹಚ್ಚ ಹಸಿರು ಲಾನ್, ಸುಂದರ ಹೂವಿನ ಗಿಡಗಳು, ಬೃಹತ್ತಾಗಿ ಬೆಳೆದು ನಿಂತ ಎರಡು ಪೈನ್ ಮರಗಳು, ಅವರ ಪರಿಶ್ರಮಕ್ಕೆ ಸಾಕ್ಷಿ.

ರಸ್ತೆಗೆ ಬಂದು ನಿಂತಿದ್ದ ನನ್ನನ್ನು ನೋಡುತ್ತಾ ಮೈಕ್ ಹೇಳಿದ "ಗುಡ್ ಮಾರ್ನಿಂಗ್ ಈ ಸಲ ಪಕ್ಷಿಗಳು ಹೆಚ್ಚಾಗಿ ಕಾಣ್ತಾ ಇದ್ದಾವೆ ಅಲ್ವ. ರಾಬಿನ್ ಹಕ್ಕಿಗಳು ಹೆಚ್ಚಾದಷ್ಟು ನನಗೆ ಖುಷಿ," ಮುಂದುವರಿಯುತ್ತಾ ಅವುಗಳು ಮನೆ ಮಾಡಿದ್ದ ಬೃಹತ್ ಪೈನ್ ಮರವನ್ನು ಮುಖವೆತ್ತಿ ನೋಡುತ್ತಾ ಹೇಳಿದ, "ಈ ಮರ ನಲವತ್ತು ವರ್ಷಗಳ ಹಿಂದೆ ನೆಟ್ಟಿದ್ದು ನಾನು, ಡೊರಥಿ ಹೊಸದಾಗಿ ಮದುವೆಯಾಗಿ ಈ ಮನೆಗೆ ಬಂದಾಗ. ಹೇಗೆ ಬೆಳೆದು ನಿಂತಿದೆ ನೋಡಿ". ಅವನ ಮಾತಿನಲ್ಲಿ ನಲವತ್ತು ವರ್ಷ ಶ್ರಮ ಪಟ್ಟು ಬೆಳೆಸಿದ ಅಭಿಮಾನವಿತ್ತು, ಮುಖದಲ್ಲಿ ಸಾರ್ಥಕತೆ ಕಾಣುತ್ತಿತ್ತು. ಮಣ್ಣು, ನೀರು, ಪೋಷಣೆ ಸರಿಯಾಗಿದ್ದರೆ ನಲವತ್ತು ವರ್ಷದ ಹಿಂದೆ ನೆಟ್ಟ ಬೀಜ ಇಂದು ಬೃಹತ್ ಮರವಾಗುವದರಲ್ಲಿ ಅಚ್ಚರಿ ಏನಿದೆ? ಪೈನ್ ಮರಕ್ಕೆ ಮನಸ್ಸಿನಲ್ಲೇ ವಂದಿಸಿದೆ. ಪೋಷಿಸಿದ ಮೈಕ್ ದಂಪತಿಗಳು ರೋಲ್ ಮಾಡಲ್ ಆದರು.

ಇದೇ ಏಪ್ರಿಲ್ ೨೮ರ ಬೃಂದಾವನ ವಸಂತೋತ್ಸವ ಹಬ್ಬದಲ್ಲಿ ಭಾಗವಹಿಸಿ ಉತ್ತೇಜಿಸಿದ ನಿಮಗೆಲ್ಲ ಅಭಿಮಾನಿ ತಂಡದ ಹಾರ್ದಿಕ ಅಭಿನಂದನೆಗಳು. ಈ ಅಭಿಮಾನವೇ, ಅಭಿಮಾನಿ ತಂಡಕ್ಕೆ ಸ್ಪೂರ್ತಿ. ಈ ಸಲದ ವಸಂತೋತ್ಸವ ಹಬ್ಬದಲ್ಲಿ ಬೃಂದಾವನದ ಮೂರೂ ಕನ್ನಡ ಶಾಲೆಯ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು ೯೦ ನಿಮಿಷಗಳ ಕಾರ್ಯಕ್ರಮ. ಒಂದಕ್ಕಿಂತ ಒಂದು ಮುಂದು. ಅಮೇರಿಕದಲ್ಲಿ ಬೆಳೆಯುತ್ತಿರುವ ಕನ್ನಡ ಮಕ್ಕಳು ಇಷ್ಟು ಸುಂದರ ಸಾಂಸ್ಕತಿಕ ಕಾರ್ಯಕ್ರಮಗಳನ್ನ ನಡೆಸಿ ಕೊಡಬಹುದೆನ್ನುವುದೇ ಊಹಿಸಲು ಅಸಾಧ್ಯ. ಕಣ್ಣಿಗೆ ಕಾಣುವ ದೇವರು, ತಾಯಿಯ ಪ್ರಾಮುಖ್ಯತೆ ಬಿಂಬಿಸಿದರೆ, ಯಥಾ ಗುರು ತಥಾ ಶಿಷ್ಯ ಎಲ್ಲರನ್ನು ನಕ್ಕು ನಗಿಸಿತು. ಮುದುಕಿಯ ಹುಂಜ, ಜಗತ್ತು ಯಾರಿಗೂ ಕಾಯುವುದಿಲ್ಲ ಎನ್ನುವ ಸಂದೇಶ ಮತ್ತೆ ಮನವರಿಕೆ ಮಾಡಿ ಕೊಟ್ಟಿತು. ಕಣ್ಣು ಕಟ್ಟುವಂತಹ ಪ್ರಾಪ್ಸಗಳು, ಮಕ್ಕಳೆಲ್ಲ ನಾಟಕದ ಭಾಗಗಳನ್ನು ಅಭಿನಯಿಸುವುದರ ಜೊತೆಗೆ, ಹಾಡಿ ನರ್ತಿಸಿದ್ದು ಇವರು ನಮ್ಮ ಮಕ್ಕಳೇನಾ? ಎನ್ನುವಂತೆ ಮಾಡಿತು. ಶ್ರಮವಹಿಸಿ ಅಭ್ಯಾಸ ಮಾಡಿದ ಮಕ್ಕಳಿಗೆ, ಅವರಿಗೆ ಮಾರ್ಗದರ್ಶನ ನೀಡಿದ ಗುರುಗಳಿಗೆ, ಪೋಷಕರಿಗೆ ನಾವೆಲ್ಲಾ ಆಭಾರಿ.

ನಮ್ಮ ಬೃಂದಾವನ ಕನ್ನಡ ಕಲಿಸೋಣ ಶಾಲೆಗಳನ್ನು, ಅಂದಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಮುಖ್ಯಮಂತ್ರಿ ಚಂದ್ರುರವರು ನ್ಯೂ ಜೆರ್ಸಿಯಲ್ಲಿ ಉದ್ಘಾಟನೆ ಮಾಡಿದಾಗ ಅದಿನ್ನೂ ಕನಸು. ನಾಲ್ಕು ವರ್ಷಗಳಲ್ಲಿ ಸಾಧಿಸಿದ್ದು ಹೆಮ್ಮೆ ತಂದರೂ, ಮುಂದಿರುವ ಗುರಿ ಸಾಕಷ್ಟು ದೂರವಿದೆ. ಆದರೆ ಅಂದಿನ ಬೀಜ ಇಂದು ಗಿಡವಾಗಿದ್ದು, ಮುಂದೊಂದು ದಿನ ಹೆಮ್ಮರವಾಗುವುದರಲ್ಲಿ ಸಂದೇಹವಿಲ್ಲ.

ಮೊನ್ನೆಯ ವಸಂತೋತ್ಸವ ಕಾರ್ಯಕ್ರಮದಲ್ಲಿ ನಮ್ಮ ಯುವ ಬೃಂದಾವನ ತಂಡದವರು ಮತ್ತೊಂದು ಹೊಸ ಕಾರ್ಯಕ್ರಮವನ್ನು ಹುಟ್ಟು ಹಾಕಿದರು. "ಡಿಸ್ಕವರ್ - ಜಗತ್ತಿನ ಜ್ಞಾನ ಭಂಡಾರಕ್ಕೆ ಪ್ರಾಚೀನ ಭಾರತದ ಕೊಡುಗೆ" - ನಮ್ಮ ಮಕ್ಕಳು, ಯುವಕ ಯುವತಿಯರಿಗಾಗಿ ಸಿದ್ಧ ಪಡಿಸಿದ ವಿಶೇಷ ಕಾರ್ಯಕ್ರಮವಿದು. ಇದರ ಮುಖ್ಯ ಉದ್ದೇಶ ಜಗತ್ತೆಲ್ಲ ಅಚ್ಚರಿ ಪಡುವ, ಪ್ರಾಚೀನ ಭಾರತದ - ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಕಾಸ್ಮೋಲಾಜಿ, ಗಣಿತ ಕ್ಷೇತ್ರಗಳಲ್ಲಿನ ಕೊಡುಗೆಯ ಬಗ್ಗೆ ನಮ್ಮ ಯುವ ಜನಾಂಗಕ್ಕೆ ಸಾಕಷ್ಟು ತಿಳುವಳಿಕೆ ಮೂಡಿಸುವುದು. ಕಳೆದ ವರ್ಷ ಡಾ.ಎಂ.ಜಿ. ಪ್ರಸಾದ್ ರವರೊಂದಿಗೆ ಬಾಸ್ಟನ್ ಕನ್ನಡ ಸಾಹಿತ್ಯ ರಂಗದ ಕಾರ್ಯಕ್ರಮದಲ್ಲಿ ಭಾಗವಹಿಸಲು, ಜೊತೆಯಾಗಿ ಕಾರಿನಲ್ಲಿ ಹೋಗುವ ಅವಕಾಶ ಸಿಕ್ಕಿತು. ಎಂಟು ಗಂಟೆಗಳ ಕಾಲ ದಾರಿಯುದ್ದಕ್ಕೂ ಮಾತುಗಳು, ವಿಷಯ ವಿನಿಮಯ. ಡಾ.ಪ್ರಸಾದ್ ರವರಂತಹ ಜ್ಞಾನ ಭಂಡಾರದ ಜೊತೆ ಹೊತ್ತು ಕಳೆದಾಗ ಫಲಿತಾಂಶ ಸಿಕ್ಕದಿದ್ದೀತೆ? ಇಂದಿನ ಡಿಸ್ಕವರ್ ಕಾರ್ಯಕ್ರಮದ ಸ್ಪೂರ್ತಿಯೇ ಅಂದಿನ ಡಾ.ಪ್ರಸಾದರವರೊಂದಿಗಿನ ಸಂಭಾಷಣೆ ಮತ್ತು ನಂತರದ ಅವರ ಮಾರ್ಗದರ್ಶನ. ಜಗತ್ತೆಲ್ಲ ಬೆರಗು ಮೂಡಿಸಿರುವ ನಮ್ಮ ಪ್ರಾಚೀನ ಭಾರತದ ಜ್ಞಾನ ಭಂಡಾರವನ್ನು ನಮ್ಮ ಮಕ್ಕಳು ಹೆಮ್ಮೆಯಿಂದ ಇತರರೊಂದಿಗೆ ಹಂಚಿಕೊಳ್ಳಲಿ, ಮುಂದೊಂದು ದಿನ ಇಂದಿನ ಡಿಸ್ಕವರ್ ಹೆಮ್ಮರವಾಗಲಿ.

ಇನ್ನಿಷ್ಟು ಉದಾಹರಣೆಗಳನ್ನು ಈ ಸಂದರ್ಭದಲ್ಲಿ ನೆನೆಯಲೇ ಬೇಕು. ಹದಿನೈದು ವರ್ಷದ ಹಿಂದಿನ ಮಾತು, ನ್ಯೂ ಜೆರ್ಸಿ ಕೃಷ್ಣ ವೃಂದಾವನದ ಉಗಮವಾಗಿದ್ದು ಒಂದು ಸಣ್ಣ ಮನೆಯಲ್ಲಿ. ಇಂದು ಕೃಷ್ಣ ವೃಂದಾವನ ಎಲ್ಲ ಭಕ್ತರ ಸಂಗಮ ಸ್ಥಳ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಕೇಂದ್ರ ಬಿಂದು. ಇಂದಿನ ಯಶಸ್ಸಿಗೆ ಉಡುಪಿ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮಿಗಳ ಶ್ರೀರಕ್ಷೆ, ಶ್ರೀ ಯೋಗೇಂದ್ರ ಭಟ್ ರವರ ನೇತೃತ್ವದಲ್ಲಿ, ಅನೇಕ ಭಕ್ತಾದಿಗಳ ಮತ್ತು ಸ್ವಯಂ ಸೇವಕರ ಸಂಪೂರ್ಣ ಪರಿಶ್ರಮವಿದೆ. ಹದಿನೈದು ವರ್ಷಗಳ ಈ ಪರಿಶ್ರಮ ಕೃಷ್ಣ ವೃಂದಾವನದಂತಹ ಹೆಮ್ಮರವಾಗದಿರಲು ಸಾಧ್ಯವೇ.

ಇಷ್ಟು ಹೇಳಿದಾಗ ಬೃಂದಾವನ ಕನ್ನಡ ಸಂಘದ ಉಗಮದ ಬಗ್ಗೆ ಹೇಳದಿದ್ದರೆ ಆದೀತೆ? ಹದಿನೈದು ವರ್ಷಗಳ ಹಿಂದೆ ಹಲವು ಕನ್ನಡ ಸ್ನೇಹಿತರೆಲ್ಲ ಸೇರಿ ಮನೆಯಲ್ಲಿ ಪ್ರಾರಂಭಿಸಿದ ಸಂಸ್ಥೆ ಇಂದು ನ್ಯೂ ಜೆರ್ಸಿಯ ಸಾವಿರಕ್ಕೂ ಹೆಚ್ಚು ಕನ್ನಡಿಗರ ಅಂಗ ಸಂಸ್ಥೆಯಾಗಿ ಬೆಳೆದಿದ್ದು ಒಂದು ಪವಾಡವೇ ಸರಿ. ಇದರ ಹಿಂದೆ ಸಾಕಷ್ಟು ಕನ್ನಡ ಪ್ರೇಮಿಗಳ ಪರಿಶ್ರಮವಿದೆ.

ಇಲ್ಲಿರುವ ನಮ್ಮ ಮಕ್ಕಳು ಒಂದಲ್ಲ ಒಂದು ಶಾಸ್ತ್ರೀಯ ವಿದ್ಯೆ ಕಲಿಯುತ್ತಲೇ ಇದ್ದಾರೆ. ಕಳೆದ ಹದಿನೈದು ವರ್ಷಗಳಲ್ಲಿ ನಮ್ಮ ಸಂಗೀತ, ನೃತ್ಯ ಗುರುಗಳು ಅಕ್ಕರೆಯಿಂದ ನಮ್ಮ ಮಕ್ಕಳಿಗೆ ಪಾಠಗಳನ್ನು ಹೇಳುತ್ತಾ ಬಂದಿದ್ದಾರೆ. ಎಷ್ಟೇ ಶ್ರಮವಾದರೂ ತಪ್ಪದೇ ಮಕ್ಕಳನ್ನು ಎಲ್ಲಾ ಪಾಠಗಳಿಗೆ ಕರೆದೊಯ್ಯುವ ತಂದೆ-ತಾಯಂದಿರಿದ್ದಾರೆ. ತಮ್ಮ ಬಿಡುವಿಲ್ಲದ ಶಾಲಾ ಚಟುವಟಿಕೆಗಳ ಜೊತೆಗೆ, ಈ ವಿದ್ಯೆಗಳನ್ನು ಶ್ರಮಪಟ್ಟು ಕಲಿಯುತ್ತಿರುವ ಈ ಮಕ್ಕಳಿಗೊಂದು ದೊಡ್ಡ ನಮನ. ಇನ್ನು ಹಲವು ವರ್ಷಗಳಲ್ಲಿ ಈ ಮಕ್ಕಳೆಲ್ಲ ತಮ್ಮ ಶಾಸ್ತ್ರೀಯ ಕೌಶಲ್ಯದಲ್ಲಿ ಸಾಕಷ್ಟು ಪ್ರಗತಿ ಸಾಧಿಸುವುದರಲ್ಲಿ ಸಂದೇಹವಿಲ್ಲ.

ಮಣ್ಣು, ನೀರು, ಪೋಷಣೆ ಮತ್ತು ಪರಿಶ್ರಮವಿದ್ದಾಗ ಬೀಜಗಳೆಲ್ಲ ಹೆಮ್ಮರವಾಗುವುದು ಖಂಡಿತ ಅಲ್ಲವೇ ?!!

ನಿಮ್ಮ ಅಭಿಮಾನಿ,

*ಡಾ. ಅಶೋಕ್ ಕಟ್ಟಿಮನಿ*

ಅಭಿಮಾನಿ ತಂಡದ ಪರವಾಗಿ

ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ


Copyright © KCO – Brindavana

ಸಂಚಿಕೆ
೧೬
ಮೇ, ೨೦೧೮



# ಸನಾತನ ಧರ್ಮದಲ್ಲಿ ಸಂವಾದಗಳ ವೈಶಿಷ್ಟ್ಯತೆ




ಡಾ|| ಎಂ.ಜಿ.ಪ್ರಸಾದ್

**ಪೀಠಿಕೆ**

ಸಂವಾದ ಎಂದರೆ ಪ್ರಧಾನವಾಗಿ ಇಬ್ಬರು ವ್ಯಕ್ತಿಗಳ ಮಧ್ಯೆ ನಡೆಯುವ ವಿಚಾರ ಅಥವಾ ಚರ್ಚೆ. ಸಂವಾದದಲ್ಲಿ ಒಬ್ಬರು ಮಾತನಾಡುತ್ತಿರುವಾಗ ಮತ್ತೊಬ್ಬರು ಕೇಳುತ್ತಿರುತ್ತಾರೆ. ಅಂದರೆ ಇಲ್ಲಿ ಸ್ವಾರಸ್ಯಕರ ವಿಷಯವೇನೆಂದರೆ, ಸಂವಾದದಲ್ಲಿ ಕಿವಿಯಿಂದ ಕೇಳುತ್ತಿರುವ ಶ್ರೋತೃವು ಮಾತನಾಡುತ್ತಿರುವವನನ್ನು ಯಾವುದಾದರೊಂದು ಪ್ರಶ್ನೆಯನ್ನು ಕೇಳಿರಬೇಕು. ನಾವು ದಿನ ನಿತ್ಯದ ಸಾಮಾನ್ಯ ಉದಾಹರಣೆಯನ್ನು ತೆಗೆದುಕೊಂಡರೆ ಇಬ್ಬರು ಸಂಧಿಸಿದಾಗ ಒಬ್ಬರು ಇನ್ನೊಬ್ಬರನ್ನು ಏನಾದರೂ ಪ್ರಶ್ನೆ ಕೇಳುತ್ತಾರೆ. ಆ ಪ್ರಶ್ನೆ "ಹೇಗಿದ್ದೀರಾ?" ಎಂದಾದರೂ ಇರಬಹುದು ಅಥವಾ "ನಿಮ್ಮ ವಾರಾಂತ್ಯದ ದಿನಗಳು (weekend) ಹೇಗಿತ್ತು? ಎಂದೂ ಇರಬಹುದು. ಹೀಗೆ ಬಹುತೇಕ ಸನ್ನಿವೇಶಗಳಲ್ಲಿ ಪ್ರಶ್ನೆ ಮತ್ತು ಅದರ ಉತ್ತರ ಎರಡೂ ಸೇರಿದಾಗ "ಸಂವಾದ" ಎಂಬ ರೂಪವನ್ನು ತಾಳುತ್ತದೆ.

**ಪ್ರಶ್ನೆಯ ಸ್ತರಗಳು**

ಮನುಷ್ಯನಿಗೆ 'ಪ್ರಶ್ನೆ' ಎನ್ನುವುದು ಹುಟ್ಟಿನಿಂದ ಸಹಜವಾಗಿ ಬಂದಿರುವ ಗುಣ ಎನ್ನಬಹುದು. ಏಕೆಂದರೆ ಮಾತು ಬಂದಾಗಿನಿಂದಲೇ ಮಕ್ಕಳಿಗೆ ಪ್ರಶ್ನೆಗಳು ಏಳುತ್ತವೆ. ಇದರ ಪರಿಚಯ ಎಲ್ಲರಿಗೂ ಇದೆ. ಹಾಗೆಯೇ ದೊಡ್ಡವರಾಗುತ್ತಾ ಪ್ರಶ್ನೆಗಳು ಕಡಿಮೆಯಾಗುವುದೋ ಏನೋ ಎಂದೆನಿಸುತ್ತದೆ. ಆದರೆ ವಯಸ್ಸಾಗುತ್ತಿರುವಂತೆ ಪ್ರಶ್ನೆ ಮಾಡುವುದನ್ನು ಬಿಡಬಾರದು. ಏಕೆಂದರೆ ಪ್ರಶ್ನೆ ಮಾಡುವುದನ್ನು ನಿಲ್ಲಿಸಿದರೆ ಕುತೂಹಲ ಶಕ್ತಿಯು ಮಂದವಾಗಬಹುದು. ಖ್ಯಾತ ಪತ್ರಿಕೋದ್ಯಮಿ Bill Moyers ಹೇಳುವಂತೆ, ಸೃಜನಶೀಲ ಶಕ್ತಿ ಬೆಳೆಯುವುದಕ್ಕೆ ಪ್ರಶ್ನಾತ್ಮಕ ದೃಷ್ಟಿ ಅಂದರೆ ಪ್ರಶ್ನೆ ಮಾಡುವುದು ಅಗತ್ಯ. ಪ್ರಪಂಚವನ್ನು ವಿಸ್ಮಯಕಾರಿ ದೃಷ್ಟಿಯಿಂದ ನೋಡಿದಾಗ ಸಹಜವಾಗಿ ಪ್ರಶ್ನೆಗಳು ಏಳುತ್ತವೆ. ಪ್ರಶ್ನೆಗಳು ಎದ್ದಾಗ ಉತ್ತರವನ್ನು ಹುಡುಕುತ್ತಾ ಉತ್ತರವಿರುವವರ ಬಳಿಗೆ ಮನುಷ್ಯನು ಹೋಗುತ್ತಾನೆ. ಆದ್ದರಿಂದಲೇ ಮನುಷ್ಯನು ಕೇವಲ ಕುಹಕತೆಯಿಂದಾಗಲೀ ಅಥವಾ ಬೇಕಾಬಿಟ್ಟಿಯಾಗಿ ಪ್ರಶ್ನೆ ಕೇಳದೆ ಆಳವಾದ ಕುತೂಹಲ ದೃಷ್ಟಿಯಿಂದ ಮತ್ತು ಪೂರ್ಣ ಆಸಕ್ತಿಯಿಂದ ಕೇಳಬೇಕು. ಆಗ ಪ್ರಶ್ನೆಗೆ ಉತ್ತರವೂ ಸಿಗುವುದಲ್ಲದೆ, ಜ್ಞಾನವೂ ಹೆಚ್ಚುತ್ತದೆ.



ಮನುಷ್ಯನಿಗೆ ಪ್ರಶ್ನೆಗಳು ಯಾವ ಸ್ತರದಲ್ಲಿ ಬರುತ್ತವೆ ಎನ್ನುವುದನ್ನು ಸಮಗ್ರವಾಗಿ ವಿಚಾರ ಮಾಡಿದರೆ, ಮೂರು ಸ್ತರಗಳು ಎನ್ನಬಹುದು. ಆ ಮೂರು ಸ್ತರಗಳೇ ಇಂದ್ರಿಯ ಸ್ತರ, ದೈವಿಕ ಸ್ತರ ಮತ್ತು ಆಧ್ಯಾತ್ಮಿಕ ಸ್ತರ. ಮನುಷ್ಯನು ಹುಟ್ಟಿದಾಗಿನಿಂದ ಜ್ಞಾನೇಂದ್ರಿಯಗಳು-ಅಂದರೆ ಕಿವಿ, ಕಣ್ಣು, ಮೂಗು, ನಾಲಿಗೆ ಮತ್ತು ಚರ್ಮ(ಸ್ಪರ್ಶ) ಇವುಗಳ ಅನುಭವದ ಮೂಲಕ ಹುಟ್ಟುವ ಪ್ರಶ್ನೆಗಳೇ ಇಂದ್ರಿಯ ಪ್ರಪಂಚದ ಪ್ರಶ್ನೆಗಳು. ನಂತರ ಮನಸ್ಸು ಹಾಗೂ ಬುದ್ಧಿಯ ಮೂಲಕ ನಿಸರ್ಗದಲ್ಲಿ ಕಾಣುತ್ತಿರುವ ಹಾಗೂ ಪ್ರಕಾಶಿಸುತ್ತಿರುವ ಶಕ್ತಿಗಳ ಅನುಭವ-ಬೀಸುವ ಗಾಳಿಯ ಹಿಂದಿರುವ ಶಕ್ತಿ, ಹರಿಯುವ ನೀರಿನ ಹಿಂದಿರುವ ಶಕ್ತಿ ಇತ್ಯಾದಿ. 'ದೈವಿ' ಎನ್ನುವ ಪದ 'ದಿವ್ -ಪ್ರಕಾಶ' ಎನ್ನುವುದರಿಂದ 'ಪ್ರಕಾಶಿಸುವುದು' ಎಂದಾಗಿದೆ. ಅದನ್ನೇ ದೈವಿಕ ಪ್ರಪಂಚ ಎನ್ನುವುದು. ನಂತರ ಮನಸ್ಸು ಹಾಗೂ ಬುದ್ಧಿಯನ್ನು ಮೀರಿ ದೈವಿಕ ಮತ್ತು ಆಧ್ಯಾತ್ಮಿಕ ಪ್ರಪಂಚಗಳೊಳಕ್ಕೆ ಅತೀಂದ್ರಿಯ ಯೋಗ ಮಾರ್ಗಗಳ ಮೂಲಕ ಹೋದಾಗ ಬರುವ ಪ್ರಶ್ನೆಗಳು ಮತ್ತು ಅವುಗಳ ಉತ್ತರಗಳು. ಸಹಜವಾಗಿ ಪ್ರತಿಯೊಬ್ಬ ಮನುಷ್ಯನಿಗೂ ಪ್ರಶ್ನೆ ಮಾಡುವುದು ಹುಟ್ಟಿನಿಂದ ಬಂದ ಹಕ್ಕು. ಆದ್ದರಿಂದಲೇ ಮನುಷ್ಯನು ವಿದ್ಯಾ ವ್ಯವಸಾಯದಲ್ಲಿ ಚೆನ್ನಾಗಿ ಕೃಷಿ ಮಾಡಿ, ಆ ಮಾರ್ಗದಲ್ಲಿ ಮುಂದುವರಿಯಬೇಕಾದರೆ ಪ್ರಶ್ನೆ ಮಾಡುವ ಶಕ್ತಿಯನ್ನು ಬಲಹೀನ ಮಾಡಿಕೊಳ್ಳಬಾರದು.

ಶ್ರೀಮದ್ಭಗವದ್ಗೀತೆಯ ೧೦ನೆಯ ಅಧ್ಯಾಯವಾದ ವಿಭೂತಿಯೋಗದಲ್ಲಿ ಸಂವಾದದ ಬಗ್ಗೆ ಒಂದು ಸುಂದರವಾದ ಮಾತಿದೆ. ಶ್ರೀಕೃಷ್ಣನು ಎಲ್ಲೆಡೆಯೂ ಇದ್ದರೂ ವಿಶೇಷವಾಗಿ ಎಲ್ಲೆಲ್ಲಿ ಅವನನ್ನು ನೋಡಬಹುದೆಂದು ಹೇಳಿದ್ದಾನೆ. "ವಾದಃ ಪ್ರವದತಾಮಹಮ್ " ಎಂದರೆ "ಪರಸ್ಪರ ಚರ್ಚೆ ಮಾಡುವವರಲ್ಲಿ ನಾನು ವಾದವೇ ಆಗಿದ್ದೇನೆ" ಎನ್ನುತ್ತಾನೆ ಶ್ರೀಕೃಷ್ಣ. ಇದರ ವಿವರಣೆ ಏನೆಂದರೆ, ಚರ್ಚೆಯಲ್ಲಿ ಮೂರು ವಿಧ. ಅವುಗಳೇ ಜಲ್ಪ, ವಿತಂಡಾ ಮತ್ತು ವಾದ ಅಥವಾ ಸಂವಾದ. ಇಲ್ಲಿ ಜಲ್ಪ ಎಂದರೆ ಇಬ್ಬರು ಪರಸ್ಪರ ಮಾತನಾಡಿಕೊಳ್ಳುವಾಗ ಒಬ್ಬನು ಹೇಗಾದರೂ ಮಾಡಿ ಇನ್ನೊಬ್ಬನನ್ನು ಮಾತಿನಲ್ಲಿ ಗೆಲ್ಲಬೇಕು ಎಂಬ ಉದ್ದೇಶದಿಂದ ಮಾತನಾಡುವುದು. ವಿತಂಡಾ ಎಂದರೆ ಪರಸ್ಪರ ಚರ್ಚೆಯಲ್ಲಿ ಒಬ್ಬನು ತನ್ನ ಪಕ್ಷವನ್ನು ಸಮರ್ಥಿಸಿಕೊಳ್ಳದೆ ಮತ್ತೊಬ್ಬರ ಪಕ್ಷವನ್ನು ಖಂಡಿಸುವುದು. ಈ ಜಲ್ಪ ಹಾಗೂ ವಿತಂಡಾಗಳಲ್ಲಿ ಸ್ವಪ್ರತಿಷ್ಠೆ ಹಾಗೂ ಪರರ ಖಂಡನೆ ಇರುವುದರಿಂದ ಶ್ರೀಕೃಷ್ಣನು ಜಲ್ಪ ಹಾಗೂ ವಿತಂಡಾದಲ್ಲಿ ತಾನು ಇಲ್ಲವೆಂದಿದ್ದಾನೆ. ಕೊನೆಯದಾದ ವಾದ ರೂಪವಾದ ಚರ್ಚೆಯಲ್ಲಿ ತತ್ವ ನಿರ್ಣಯವೇ ಗುರಿಯಾದ್ದರಿಂದ ಅಲ್ಲಿ ಇಬ್ಬರೂ ಪರಸ್ಪರ ಗೌರವಾದರಗಳಿಂದ ಪ್ರಶ್ನೋತ್ತರಗಳನ್ನು ನಡೆಸುತ್ತಾರೆ. ಇಬ್ಬರೂ ತತ್ವ ನಿರ್ಣಯಕ್ಕೆ ಬರದಿದ್ದರೆ ತತ್ವವನ್ನು ತಿಳಿದವರ ಬಳಿ ಹೋಗಿ ತತ್ವವನ್ನು ತಿಳಿಯುತ್ತಾರೆ. ಆದ್ದರಿಂದ ಅಂತಹ ತತ್ವ ನಿರ್ಣಾಯಕವಾದ ವಾದ ಅಥವಾ ಸಂವಾದವೇ ತಾನು ಎನ್ನುತ್ತಾನೆ ಶ್ರೀಕೃಷ್ಣ. ಆದ್ದರಿಂದಲೇ ಶ್ರೀಮದ್ಭಗವದ್ಗೀತೆಯನ್ನು ಶ್ರೀ ಕೃಷ್ಣಾರ್ಜುನ ಸಂವಾದ ಎಂದೂ, ಉಪನಿಷತ್ತುಗಳ ಸಾರ ಎಂದೂ ಹೇಳಿದೆ.

**ಉಪನಿಷತ್ತುಗಳಲ್ಲಿ ಸಂವಾದಗಳು :**

ನಮ್ಮ ಸನಾತನ ಧರ್ಮದ ಅಡಿಪಾಯವಾದ ಸಾಹಿತ್ಯವೇ ಪ್ರಸ್ಥಾನತ್ರಯ. ಅವುಗಳೇ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಶ್ರೀಮದ್ಭಗವದ್ಗೀತೆ. ಇದರಲ್ಲಿ ಉಪನಿಷತ್ತುಗಳು ಅನೇಕಾನೇಕ ಋಷಿಗಳ ದಿವ್ಯ ಹಾಗೂ ಅತೀಂದ್ರಿಯ ಅನುಭವಗಳ ಆಧಾರದ ಮೇಲೆ ಅಪೌರುಷೇಯ ಸ್ಥಿತಿಯಿಂದ ಹೊರ ಹೊಮ್ಮಿದ ವಾಕ್ ಸ್ರೋತಸ್ಸುಗಳು. ಬ್ರಹ್ಮಸೂತ್ರಗಳು ಮಹರ್ಷಿ ವೇದವ್ಯಾಸರಿಂದ ಉಪನಿಷತ್ ಸಾಹಿತ್ಯಕ್ಕೆ ಹೊಂದುವ ವೇದಾಂತ ತತ್ವಗಳನ್ನು ನೀಡಲು ರಚಿತವಾದ ಸೂತ್ರರೂಪದಲ್ಲಿರುವ ಸಾಹಿತ್ಯ. ಶ್ರೀಮದ್ಭಗವದ್ಗೀತೆ ಉಪನಿಷತ್ತುಗಳ ಸಾರವನ್ನು ನೀಡುವ-ಮಹಾಭಾರತವೆಂಬ ಸಾಗರದಲ್ಲಿನ ದಿವ್ಯರತ್ನ. 'ಉಪನಿಷತ್' ಎಂಬ ಪದದಲ್ಲಿಯೇ ಸ್ವಾರಸ್ಯವಿದೆ. ಉಪನಿಷತ್ ಎಂಬ ಪದವು 'ಉಪ' ಎಂದರೆ ಹತ್ತಿರ 'ನಿ' ಎಂದರೆ ಕೆಳಗೆ 'ಸತ್' ಎಂದರೆ ಕುಳಿತು ಸತ್ಯದ ಬಳಿಗೆ ಕರೆದೊಯ್ಯುವ ತತ್ವಗಳನ್ನು ಜ್ಞಾನಿಯಾದ ಗುರುವನ್ನು ಪ್ರಶ್ನೆಗಳನ್ನು ಕೇಳಿ ಸಂವಾದ ರೂಪಿನಲ್ಲಿ ತಿಳಿದುಕೊಳ್ಳುವುದು.

(ಮುಂದಿನ ಪುಟಕ್ಕೆ...)


Copyright © KCO – Brindavana

(...ಹಿಂದಿನ ಪುಟದಿಂದ)

ವಿಶ್ವಾದ್ಯಂತ ಸಾಹಿತ್ಯದಲ್ಲಿ ಪ್ರಶ್ನೋತ್ತರ ಸಂವಾದ ಸಾಹಿತ್ಯ ಬಹಳವಾಗಿ ಇದ್ದರೂ, ಅತಿ ಪ್ರಾಚೀನವಾದ ಉಪನಿಷತ್ತುಗಳಲ್ಲಿ ಪ್ರಶ್ನೋತ್ತರ ಸಂವಾದಗಳು ಹಾಸುಹೊಕ್ಕಾಗಿವೆ. ಇದರ ಜೊತೆಗೆ ಇತಿಹಾಸಗಳಾದ ರಾಮಾಯಣ ಹಾಗೂ ಮಹಾಭಾರತ ಗ್ರಂಥಗಳಲ್ಲಿಯೂ ಸಂವಾದಗಳು ತುಂಬಿವೆ. ಪ್ರಧಾನವಾಗಿ ಉಪನಿಷತ್ತುಗಳಲ್ಲಿ ಒಬ್ಬ ಶಿಷ್ಯನು ಅಥವಾ ಅನೇಕ ಶಿಷ್ಯರು ತಮ್ಮ ಜ್ಞಾನವೃದ್ಧಿಗಾಗಿ ಆಚಾರ್ಯರ ಬಳಿ ಬಂದು ಶ್ರದ್ಧೆ, ಭಕ್ತಿ ಹಾಗೂ ವಿನಯದಿಂದ ಪ್ರಶ್ನೆಯನ್ನು ಕೇಳಿ ಉತ್ತರ ಪಡೆಯುತ್ತಾರೆ. ನಂತರ ಉತ್ತರಗಳನ್ನು ಪ್ರಯೋಗಕ್ಕೆ ತಂದು ಮತ್ತಷ್ಟು ಆಳವಾದ ಪ್ರಶ್ನೆಗಳನ್ನು ಕೇಳಿ ಸಂವಾದ ಮುಂದುವರೆಯುತ್ತದೆ. ಆದ್ದರಿಂದಲೇ ಉಪನಿಷತ್ತಿನ ಸಂವಾದಗಳು ನಮ್ಮನ್ನು ತತ್ವಗಳ ಆಳಕ್ಕೆ ಕರೆದೊಯ್ದು ಅನುಭವಗಮ್ಯವಾಗುತ್ತವೆ.

ಉದಾಹರಣೆಗೆ ತೈತ್ತಿರೀಯೋಪನಿಷತ್ತಿನಲ್ಲಿ ಶಿಷ್ಯ ಹಾಗೂ ಮಗನೂ ಆದ ಭೃಗುವು ತನ್ನ ತಂದೆ ಹಾಗೂ ಆಚಾರ್ಯನಾದ ವರುಣನನ್ನು "ಆಚಾರ್ಯರೇ ನನಗೆ ಬ್ರಹ್ಮನ ಬಗ್ಗೆ ತಿಳಿಯ ಹೇಳಿ" ಎಂದು ಶ್ರದ್ಧಾ ಪೂರ್ವಕವಾಗಿ ಕೇಳಿದನು. ಅದಕ್ಕೆ ಆಚಾರ್ಯನಾದ ವರುಣನು "ಅನ್ನ, ಪ್ರಾಣ, ಕಣ್ಣು, ಕಿವಿ, ಮನಸ್ಸು ಹಾಗೂ ಮಾತು ಇವುಗಳು ಬ್ರಹ್ಮಜ್ಞಾನ ಪಡೆಯುವುದಕ್ಕೆ ಸಾಧನಗಳು" ಎಂದು ಹೇಳಿ ಮುಂದುವರೆಸುತ್ತಾ, "ಯಾವುದರಿಂದ ಎಲ್ಲ ಭೂತಗಳು (ವಸ್ತುಗಳು) ಹುಟ್ಟುತ್ತವೆಯೋ, ಯಾವುದರಿಂದ ಎಲ್ಲವೂ ಜೀವಿಸುತ್ತವೆಯೋ, ಯಾವುದರಲ್ಲಿ ಎಲ್ಲವೂ ಲೀನವಾಗುತ್ತವೆಯೋ, ಅದನ್ನು ಆಶಿಸು. ಅದೇ ಬ್ರಹ್ಮ" ಎಂದನು. ಇಲ್ಲಿ ಶಿಷ್ಯ ಭೃಗು ಕೇಳಿದ ಪ್ರಶ್ನೆಗೆ ಆಚಾರ್ಯ ವರುಣನು ಶಿಷ್ಯನ ಸಾಧನೆಗೆ ಬೇಕಾದ ಸಾಧನಗಳನ್ನು ತೋರಿಸಿ, ಪಡೆಯಬೇಕಾದ ಬ್ರಹ್ಮವಸ್ತುವಿನ ಲಕ್ಷಣಗಳನ್ನು ಹೇಳಿ ದಿಗ್ದರ್ಶನವನ್ನು ಮಾಡಿದನು. ನಂತರ ಶಿಷ್ಯ ಭೃಗುವು ತಪಸ್ಸನ್ನಾಚರಿಸಿ ಅನ್ನದಲ್ಲಿ ಬ್ರಹ್ಮವಸ್ತುವಿನ ಲಕ್ಷಣಗಳಿಗೆ ಸಾಮ್ಯತೆಯನ್ನು ಕಂಡುಕೊಂಡು, ಅನ್ನವೇ ಬ್ರಹ್ಮ ಎಂದು ಅರಿತರೂ ಅದು ಪೂರ್ಣವಾದ ಉತ್ತರವೆಂದು ಸಮಾಧಾನವಾಗಲಿಲ್ಲ. ಮತ್ತೆ ಶಿಷ್ಯ ಭೃಗುವು ಆಚಾರ್ಯರ ಬಳಿ ಬಂದು ಬ್ರಹ್ಮನ ಬಗ್ಗೆ ತಿಳಿಹೇಳಿ ಎಂದು ಪುನಃ ಕೇಳಿದನು. ಆಗ ಆಚಾರ್ಯ ವರುಣನು ಶಿಷ್ಯ ಭೃಗುವಿಗೆ "ತಪಸ್ಸಿನಿಂದ ಬ್ರಹ್ಮವಸ್ತುವನ್ನು ಅರಿಯಲು ಇಚ್ಚಿಸು. ತಪಸ್ಸೇ ಬ್ರಹ್ಮ" ಎಂದು ಹೇಳಿದನು. ಆಚಾರ್ಯರ ಆದೇಶದಂತೆ ಭೃಗು ತಪಸ್ಸನ್ನಾಚರಿಸಿ ಪ್ರಾಣವು ಬ್ರಹ್ಮವಸ್ತುವಿನ ಲಕ್ಷಣಗಳನ್ನು ಹೊಂದಿದೆ ಎಂದು ಅರಿತರೂ ಸಮಾಧಾನವಾಗದೆ ಪುನಃ ಆಚಾರ್ಯ ವರುಣನ ಬಳಿಗೆ ಹೋಗಿ ಮಾರ್ಗದರ್ಶನ ಪಡೆದು ತಪಸ್ಸನ್ನು ಮುಂದುವರೆಸಿ ಕ್ರಮವಾಗಿ ಮನಸ್ಸು, ನಂತರ ವಿಜ್ಞಾನ, ನಂತರ ಕೊನೆಯದಾಗಿ ಆನಂದವು ಬ್ರಹ್ಮವಸ್ತುವಿನ ಲಕ್ಷಣಗಳನ್ನು ಹೊಂದಿವೆ ಎಂಬ ಅನುಭವಾತ್ಮಕ ಜ್ಞಾನವನ್ನು ಪಡೆದನು. ಈ ಶಿಕ್ಷಣ ಕ್ರಮದಲ್ಲಿ ಶಿಷ್ಯನ ಶ್ರದ್ಧೆ ಹಾಗೂ ಸಾಧನೆಯ ಪ್ರಾಮುಖ್ಯತೆ ಬಹಳ ಹೃದಯಂಗಮವಾಗಿ ನಿರೂಪಿತವಾಗಿದೆ. ಇದೆ ರೀತಿ ಅನೇಕ ಪ್ರಶ್ನೋತ್ತರ ಸನ್ನಿವೇಶಗಳು ಉಪನಿಷತ್ತುಗಳಲ್ಲಿ ತುಂಬಿವೆ. ಆಚಾರ್ಯರು ಉಪನಿಷತ್ತುಗಳಲ್ಲಿ ಶಿಷ್ಯರುಗಳ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವಾಗ ಅಲಂಕಾರಿಕವಾದ ದೃಷ್ಟಾಂತಗಳನ್ನು ನೀಡುತ್ತಾರೆ. ಉದಾಹರಣೆಗೆ ಶಿಷ್ಯನಾದ ನಚಿಕೇತನಿಗೆ ಆಚಾರ್ಯನಾದ ಯಮರಾಜನು ಬಹಳ ಗೂಢವಾದ ತತ್ವವನ್ನು ಈ ಕೆಳಗಿನ ರೂಪಕದ ಮೂಲಕ ನೀಡಿದ್ದಾನೆ.

"ದೇಹದ ಒಳಗಿರುವ ಆತ್ಮನನ್ನು ರಥಿಯೆಂದು ತಿಳಿ. ದೇಹವೇ ರಥ. ಬುದ್ಧಿಯೇ ರಥದ ಸಾರಥಿ. ಮನಸ್ಸೇ ಲಗಾಮು. ಇಂದ್ರಿಯಗಳೇ ಕುದುರೆಗಳು. ಇಂದ್ರಿಯದ ವಿಷಯಗಳೇ ದಾರಿ. ಮನಸ್ಸು, ಇಂದ್ರಿಯ ಹಾಗೂ ದೇಹದೊಡನೆ ಆತ್ಮನು ಒಂದುಗೂಡಿದಾಗ ಅವುಗಳ ಮೂಲಕ ವಿಷಯಗಳನ್ನು ಅನುಭವಿಸುತ್ತಾನೆ."

ಉಪನಿಷತ್ತುಗಳಲ್ಲಿ ಅಪಾರವಾದ ಮತ್ತು ಅಮೂಲ್ಯವಾದ ಸಂವಾದಗಳು ತುಂಬಿಕೊಂಡಿವೆ. ಪ್ರಶ್ನೋಪನಿಷತ್ ಮತ್ತು ಕೇನೋಪನಿಷತ್ ಗಳ ಹೆಸರನಲ್ಲೇ ಪ್ರಶ್ನೆಯ ಅಂಕಿತವಿದೆ. ಜೀವನದಲ್ಲಿ-ಜೀವ, ಜಗತ್ತು ಹಾಗೂ ಈಶ್ವರ ಎಂಬ ತತ್ವ ತ್ರಯಗಳ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಸಾಧನೆ ಮಾಡಬೇಕು ಎನ್ನುವ ಸಾಧಕ ಹಾಗೂ ಸಾಧಕಿಯರೆಲ್ಲರೂ ಉಪನಿಷತ್ತುಗಳನ್ನು ಆಶ್ರಯಿಸಬೇಕು.

**ಶ್ರೀ ಕೃಷ್ಣಾರ್ಜುನ ಸಂವಾದ**

ಶ್ರೀಮದ್ಭಗವದ್ಗೀತೆ ವಿಶ್ವ ಸಾಹಿತ್ಯದಲ್ಲಿ ಅತಿ ವಿಶಿಷ್ಟವಾದ ಸ್ಥಾನವನ್ನು ಪಡೆದಿರುವ ಗ್ರಂಥಗಳಲ್ಲಿ ಮಹತ್ತಾದುದು ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಪ್ರತಿ ಅಧ್ಯಾಯದ ಕೊನೆಯಲ್ಲಿ ಹೇಳಿರುವಂತೆ ಶ್ರೀಮದ್ಭಗವದ್ಗೀತೆಯು ಒಂದು ಉಪನಿಷತ್ತು, ಬ್ರಹ್ಮವಿದ್ಯೆ, ಯೋಗಶಾಸ್ತ್ರ ಮತ್ತು ಕೃಷ್ಣಾರ್ಜುನರ ಸಂವಾದ. ಈ ವಿಶಿಷ್ಟವಾದ ಸಂವಾದದಲ್ಲಿ ಮಹಾವೀರನೂ, ಮಹಾ ಭಕ್ತನೂ ಆದ ಅರ್ಜುನನು ಮನೋವ್ಯಾಕುಲಗೊಂಡು ವಿವಶನಾಗಿ ಸರ್ವಜ್ಞನಾದ ಪರಮಾತ್ಮ ಶ್ರೀ ಕೃಷ್ಣನನ್ನು ಕೇಳಿದ ಪ್ರಶ್ನೆಗಳು ಮತ್ತು ಆ ಪ್ರಶ್ನೆಗಳಿಗೆ ಜಗದ್ಗುರು ಶ್ರೀ ಕೃಷ್ಣನಿಂದ ಬಂದ ಉತ್ತರಗಳು ಮತ್ತು ಅದಕ್ಕೆ ಸಂಬಂಧಿಸಿದ ತತ್ವಗಳು ತುಂಬಿವೆ. ಏಳುನೂರು ಶ್ಲೋಕಗಳನ್ನೊಳಗೊಂಡ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ ಅರ್ಜುನನ ಪ್ರಶ್ನೆಗಳ ರೂಪದಲ್ಲಿರುವ ಶ್ಲೋಕಗಳನ್ನು ನಾವು ಕ್ರೋಢೀಕರಿಸಿ ನೋಡಿದರೆ ಸುಮಾರು ೨೦ ಪ್ರಶ್ನೆಗಳನ್ನಾಗಿ ರೂಪಿಸಬಹುದು. ಈ ಪ್ರಶ್ನೆಗಳು ಗಹನವಾದುವು. ಜೀವನದಲ್ಲಿ ಪ್ರಗತಿಯನ್ನು ಸಾಧಿಸಬೇಕೆನ್ನುವ ಎಲ್ಲರಿಗೂ ಬರಬಹುದಾದ ಪ್ರಶ್ನೆಗಳಂತಿವೆ.

ಉದಾಹರಣೆಗೆ ಅರ್ಜುನನು ೬:೩೩-೩೪ ನೇ ಶ್ಲೋಕಗಳಲ್ಲಿ ಹೇಳುತ್ತಾನೆ "ಮಧುಸೂದನ, ಮನಸ್ಸು ಬಹಳ ಚಂಚಲವಾದದ್ದು. ನೀನು ಹೇಳುತ್ತಿರುವ ಅಚಲವಾದ ಸ್ಥಿತಿ ಕಾಣುತ್ತಿಲ್ಲ. ಗಾಳಿಯನ್ನು ಹೇಗೆ ನಿಗ್ರಹಿಸುವುದು ಕಷ್ಟವೋ ಹಾಗೆಯೇ ಮನೋನಿಗ್ರಹವೂ ಕಷ್ಟವಾದುದು." ಅರ್ಜುನನ ಈ ಮಾತಿಗೆ ಜಗದ್ಗುರುವಾದ ಶ್ರೀಕೃಷ್ಣನು ಬಹಳ ನೇರವಾದ, ಸರಳವಾದ ಉತ್ತರವನ್ನು ನೀಡಿದುದಲ್ಲದೆ ಸಾಧನಾಮಾರ್ಗವನ್ನೂ ನೀಡಿದ್ದಾನೆ. ಶ್ರೀಕೃಷ್ಣನು ಅರ್ಜುನನು ಹೇಳಿದ್ದನ್ನು ಒಪ್ಪಿ, ಮನೋನಿಗ್ರಹವು ಕಷ್ಟವೆಂದು ಹೇಳಿದುದಲ್ಲದೆ ಮನೋನಿಗ್ರಹವನ್ನು 'ಅಭ್ಯಾಸ' ಹಾಗೂ 'ವೈರಾಗ್ಯ' ಎಂಬ ಎರಡು ಬಲವಾದ ಸಾಧನಗಳಿಂದ ಸಾಧಿಸಬೇಕೆಂದು ಹೇಳಿರುವುದು ಸಾಧಕರೆಲ್ಲರಿಗೂ ಮಾರ್ಗದರ್ಶಿಯಾಗಿದೆ.

**ಸಾರಾಂಶ**

ಸನಾತನ ಧರ್ಮದ ಸಾಹಿತ್ಯದಲ್ಲಿನ ಸಂವಾದಗಳು ನಮಗೆ ಸಾಧನಾ ಸ್ಫೂರ್ತಿಯನ್ನು ನೀಡುವುದಲ್ಲದೆ ಸಾಧನೆಯಲ್ಲಿ ಮುಂದುವರೆಯುವುದಕ್ಕೆ ಅತಿ ಸಹಾಯಕ. ಇಂತಹ ಸಂವಾದಗಳನ್ನು ಓದಿ, ನಂತರ ಮನನ ಮಾಡಿ ಮತ್ತು ಇಂತಹ ತತ್ವಗಳನ್ನು ತಿಳಿದ ಸಹೃದಯರ ಜೊತೆ ಸಂವಾದ ನಡೆಸಿ ತತ್ವಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಂಡರೆ ಸಾಧನೆಯಲ್ಲಿ ಪ್ರಗತಿ ಉಂಟಾಗುತ್ತದೆ. ನಮ್ಮ ಋಷಿಗಳು ತಮ್ಮ ಅಪಾರವಾದ ಸಾಧನೆಯಿಂದ ತತ್ವಗಳನ್ನು ಕಂಡುಹಿಡಿದು ಸರ್ವಸಾಧಕರ ಹಿತಕ್ಕಾಗಿ ಕರುಣೆಯಿಂದ ನಮಗೆ ನೀಡಿದ್ದಾರೆ. ನಾವೆಲ್ಲರೂ ಪರಮಾತ್ಮನ ಕೃಪೆಯಿಂದ ಇಂತಹ ಸಾಹಿತ್ಯವನ್ನು ಅನುಸಂಧಾನ ಮಾಡಿ ಮಹಾತ್ಮರಾದ ಋಷಿಗಳಿಗೆ ಕೃತಜ್ಞತೆ ಅರ್ಪಿಸೋಣ

●


Copyright © KCO – Brindavana

ಸಂಚಿಕೆ
೧೬
ಮೇ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *ಬೃಂದಾವನ ವಸಂತೋತ್ಸವ*



ಅನಿಲ್ ಭಾರಧ್ವಾಜ

**ಏ**ಪ್ರಿಲ್ ೨೮, ೨೦೧೮, ನ್ಯೂ ಜೆರ್ಸಿ - ಬೃಂದಾವನ ಕನ್ನಡ ಕೂಟದ ವತಿಯಿಂದ ವಸಂತೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮಧ್ಯಾಹ್ನ ೧:೩೦ ಘಂಟೆಯಿಂದ ಸುಮಾರು ರಾತ್ರಿ ಹತ್ತರವರೆಗೆ ಅಭಿಮಾನಿ ತಂಡದವರು ಭರ್ಜರಿ ಮನೋರಂಜನಾ ಕಾರ್ಯಕ್ರಮದ ಸಾಲುಗೂಡಿಸಿದ್ದರು.

ಬೃಂದಾವನ ಕನ್ನಡ ಶಾಲೆಯ ಮಕ್ಕಳು ವಿಘ್ನೇಶ್ವರನ ಪ್ರಾರ್ಥನೆ, ಸಂಕೇತ ಗೀತೆ ಮತ್ತು ರಾಷ್ಟ್ರಗೀತೆಗಳಿಂದ ಕಾರ್ಯಕ್ರಮ ಶುರುಮಾಡಿದರು. ತದನಂತರ ಜೋಯಿಸರಿಂದ ಪಂಚಾಂಗ ಶ್ರವಣ ಮತ್ತು ಬೇವು-ಬೆಲ್ಲದ ವಿತರಣೆ ಆಯಿತು. ಅವರು ಎಲ್ಲ ರಾಶಿಗಳ ಫಲಾಫಲಗಳು, ಯೋಗಗಳನ್ನು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು. ಯುಗಾದಿ ಹಬ್ಬದ ಆಚರಣೆಯಲ್ಲದೆ, ಆ ದಿನದ ವಸ್ತು ವಿಶೇಷ ತಾಯಿಯನ್ನು ಆರಾಧಿಸುವುದಾಗಿತ್ತು. ಅದಕ್ಕೆ ಪೂರಕವಾಗಿ ಕನ್ನಡ ಚಿತ್ರರಂಗದ ಹೆಸರಾಂತ ಹಿರಿಯ ನಟಿ ಹರಿಣಿಯವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಪಸ್ಥಿತರಾಗಿದ್ದರು.

ಎಂದಿನಂತೆ ಹಲವು ಬೃಂದಾವನ ಕನ್ನಡ ಶಾಲೆಯ ಮಕ್ಕಳು ವಿವಿಧ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಸೌತ್ ಬ್ರನ್ಸ್ವಿಕ್ ಶಾಲೆಯ ಮಕ್ಕಳು 'ಯಥಾ ಗುರು ತಥಾ ಶಿಷ್ಯ' ಎಂಬ ಹಾಸ್ಯ ನಾಟಕವನ್ನು ಮಾಡಿದರು. ಮಕ್ಕಳು ಉಪಾಧ್ಯಾಯರು ಕೇಳಿದ ಪ್ರಶ್ನೆಗಳಿಗೆ ಬುದ್ಧಿವಂತಿಕೆಯ ಹಾಗು ಹಾಸ್ಯಕರವಾದ ಉತ್ತರಗಳನ್ನು ಕೊಟ್ಟು ಸಭಿಕರಿಗೆ ನಗು ಹಾಗೂ ತಪಾಸಣಾಧಿಕಾರಿಗೆ ಆಘಾತವನ್ನೇ ನೀಡಿದರು. ಎಡಿಸನ್ ಶಾಲೆಯ ಮಕ್ಕಳು 'ಮಲ್ನಾಡಿನ್ ಮೂಲೆನಾಗೆ' ಹಾಡಿಗೆ ಸುಂದರವಾದ ನೃತ್ಯ ರೂಪಕ ಅಳವಡಿಸಿದ್ದರು. ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು ಹಿಂದಿನ ಸಮಾರಂಭಗಳಲ್ಲಿ ನೀಡಿದಂತೆ ಈ ಬಾರಿಯೂ ಅದ್ದೂರಿಯಾದ ನಾಟಕ 'ಕಣ್ಣಿಗೆ ಕಾಣುವ ದೇವರು' ಯನ್ನು ನೀಡಿದರು. ನಲವತ್ತಕ್ಕೂ ಹೆಚ್ಚಿನ ಮಕ್ಕಳು ವಿವರಯುಕ್ತವಾದ ವೇಷ-ಭೂಷಣಗಳನ್ನು ಧರಿಸಿ, ಹಾಡು, ನಾಟ್ಯಗಳೊಂದಿಗೆ ತಾಯಿಯ ನಿಸ್ವಾರ್ಥ ಪ್ರೀತಿಯನ್ನು ಆಧಾರಿಸಿದ, ಹೀರಾಬಾಯಿಯ ಕಥೆಯನ್ನು ಮನಮುಟ್ಟುವಂತೆ ಹೇಳಿ ಸಭಿಕರ ಶ್ಲಾಘನೆಗೆ ಪಾತ್ರರಾದರು.

ವಿಶೇಷವಾಗಿ, ನಾಟಕಕ್ಕೆ ಮಾಡಿದ್ದ ರಂಗಸಜ್ಜಿಕೆ ಮತ್ತು ಪರಿಕರಗಳಿಗೆ ನೆರೆದ ಸಭಿಕರು ಅತ್ಯಂತ ಮೆಚ್ಚುಗೆ ಸೂಚಿಸಿದರು.

ಅಲ್ಲದೆ ದೊಡ್ಡವರಿಂದ ಒಂದೆರಡು ಹಾಸ್ಯ ನಾಟಕಗಳು ಇದ್ದವು. ಮಲ್ಲಿ ಸಣ್ಣಪ್ಪನವರ್ ಅವರ ತಂಡ ಅಮೇರಿಕಾ ಕನ್ನಡ ಸಂಘಗಳಲ್ಲಿ ನಡೆಯುವ ಭಿನ್ನಮತಗಳು ಮತ್ತು ಘರ್ಷಣೆಗಳನ್ನು ಆಧಾರಿಸಿ ವೈಶಿಷ್ಟ್ಯಪೂರ್ಣ ನಗೆನಾಟಕ ಪ್ರದರ್ಶಿಸಿದರು. ಅದರಲ್ಲೂ, ಮಲ್ಲಿ ಸಣ್ಣಪ್ಪನವರ್ ಅವರ ಅಜ್ಜಿಯ ಪಾತ್ರ ಮತ್ತು ಉತ್ತರ ಕರ್ನಾಟಕ ಶೈಲಿಯ ಅವರ ಹಾಸ್ಯದ ಮಾತುಗಳು ಎಲ್ಲರನ್ನು ನಕ್ಕುನಲಿಸಿತು.

ಅತ್ತಕಡೆ, ಉಪಹಾರ ಗೃಹದಲ್ಲಿ ಜೋಳದ ರೊಟ್ಟಿ, ಲಾಡು ಸಹಿತವಾದ ಪುಷ್ಕಳವಾದ ಊಟ ಅತಿಥಿಗಳ ಉದರವನ್ನು ತೃಪ್ತಿಗೊಳಿಸಿತು. ಯುವ ಬೃಂದಾವನದ ಮಕ್ಕಳ ಸ್ವಯಂಸೇವಾ ಮನೋಭಾವ ಊಟದ ವ್ಯವಸ್ಥೆಯಲ್ಲಿ ಎದ್ದು ತೋರುತ್ತಿತ್ತು.

ಮುಖ್ಯ ಅತಿಥಿಗಳಾದ ಹರಿಣಿಯವರ ಬಗ್ಗೆ ಚೊಕ್ಕವಾಗಿ ಪರಿಚಯವಾದ ನಂತರ, ಅವರಿಗೆ ಸನ್ಮಾನ ನಡೆಯಿತು. ಅವರ ಬೆಳ್ಳಿತೆರೆಯ ಅನುಭವಗಳನ್ನು ಹಂಚಿಕೊಂಡ ಹರಿಣಿಯವರು, ನೆರೆದಿದ್ದ ಜನರು ಭಾರತ ದೇಶದ ಅಭಿಮಾನ ಮತ್ತು ತಾಯಿ-ತಂದೆಯರ ಪೋಷಣೆ ಮರೆಯಬಾರದೆಂದು ಕಳಕಳಿಯಿಂದ ವಿನಂತಿಸಿದರು. ಹರಿಣಿಯವರ ಸರಳ ಮತ್ತು ಸಜ್ಜನಿಕೆಯ ಸ್ವಭಾವ ನೆರೆದವರಿಗೆ ಬಹಳ ಖುಷಿ ಕೊಟ್ಟಿತು.

ಕೊನೆಯದಾಗಿ ರಸ-ಸಂಜೆ ಕಾರ್ಯಕ್ರಮ ಸಿಂಹಾದ್ರಿಯವರ ಮುಂದಾಳತ್ವದಲ್ಲಿ ಸ್ಥಳೀಯ ಕಲಾವಿದರಿಂದ ಹಮ್ಮಿಕೊಳ್ಳಲಾಗಿತ್ತು. ಕಳೆದ ವರ್ಷಗಳ ಚೆನ್ನದಂಥ ಹಾಡುಗಳನ್ನು ಸುಮಧುರವಾಗಿ ಅವರ ತಂಡದವರು ಹಾಡಿದರು. 'ಐಸಿಂಗ್ ಆನ್ ದಿ ಕೇಕ್' ಎನ್ನುವ ಹಾಗೆ ರಸಸಂಜೆ ಕಾರ್ಯಕ್ರಮ, ಬೆಂಗಳೂರಿನಿಂದ ಬಂದಿದ್ದ ಹಿನ್ನೆಲೆ ಗಾಯಕರು ಹಾಗೂ ಮ್ಯೂಸಿಕ್ ಐಡಲ್ ಗಳಾದ ದೀಕ್ಷಾ ರಾಮಕೃಷ್ಣ ಮತ್ತು ಧನುಷ್ ಜಗದೀಶ್ ಅವರ ಜಬರ್ದಸ್ತ್ ಹಾಡುಗಳಿಂದ ಅಂತಿಮಗೊಂಡಿತು. ಬಹಳ ಹುರುಪಿನಿಂದ ಹಾಡುಗಳನ್ನು ಹಾಡಿದ ಅವರು, ಸಭಿಕರು ಚಪ್ಪಾಳೆ ತಟ್ಟಿ, ಮುಂದೆ ಬಂದು ಕುಣಿದು ಕುಪ್ಪಳಿಸುವಂತೆ ಮಾಡಿದರು.







ಚಿತ್ರ ಕೃಪೆ : ಗಿರೀಶ್ ಹೊಂಗಲ್


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಕವಿ ನಮನ


## ಆ ಕಾಲದ ಗಂಧ ಪಸರಿಸುವ 'ಡೊಮಿನಿಯನ್ ಜನನ'



ಕಾವ್ಯ ಕಡಮೆ ನಾಗರಕಟ್ಟೆ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಕೆಎಸ್‌ಎನ್, ಮೂವತ್ತೆರಡು ವರುಷದ ತರುಣ. ಹದಿಹರೆಯದ ಕುಡಿಮೀಸೆ ಮಾಗಿದ್ದರೂ ಮಧ್ಯವಯಸ್ಸಿನ ಗಾಂಭೀರ್ಯವೂ, ಜಗತ್ತನ್ನೇ ತಲೆಯ ಮೇಲೆ ಹೊತ್ತ ಜವಾಬ್ದಾರಿಯೂ ತಾಗದ ಆ ಜೀವನೋತ್ಸಾಹ ಪುಟಿಯುವ ವಯಸ್ಸಿನಲ್ಲೇ ಕೆಎಸ್‌ಎನ್ 'ಡೊಮಿನಿಯನ್ ಜನನ'ದಂಥ ಅಪೂರ್ವ ಕವಿತೆ ಬರೆದದ್ದು. ಈ ಪದ್ಯದ ಕಾಯ ಎಷ್ಟು ದಟ್ಟವಾಗಿದೆಯೋ ಆತ್ಮವೂ ಅಷ್ಟೇ ದಿಟ್ಟವಾದುದು.

ಸ್ವಾತಂತ್ರ್ಯ ದೊರೆತ ಆ ಮಧ್ಯರಾತ್ರಿ ಇಡೀ ದೇಶದ ಜನರು ತಮ್ಮದೇ ವಿಶಿಷ್ಟ ರೀತಿಯಲ್ಲಿ ಆ ಕ್ಷಣವ ಸಂಭ್ರಮಿಸಿದಂತೆ ಕೆಎಸ್ನ ಅವರೊಳಗಿನ ಕವಿ ಈ ಪದ್ಯ ಬರೆಯುವ ಮೂಲಕ ಆ ಹೊತ್ತಿನ ಭಾವೋದ್ವೇಗಕ್ಕೆ ಶಬ್ದ ಕೊಟ್ಟಿದ್ದೇ ಈ ಕವಿತೆಯಾಗಿದೆ. ಭಾರತವೆಂಬ 'ಡೊಮಿನಿಯನ್' ಜನನವಾದಾಗ ಪ್ರೀತಿಯಿಂದಲೇ ಬ್ರಿಟನ್ನನ್ನು ಬೀಳ್ಕೊಡುವ ಪದ್ಯ ಇದು.



ಚಕ್ರವರ್ತಿನಿಯಲ್ಲ ನೀನಿನ್ನು ಗ್ರೇಟ್ ಬ್ರಿಟನ್- ಇಂಡಿಯದ ಗೆಳತಿ ಎನ್ನುತ್ತ ಉದಯವಾಗುತ್ತಲೇ ಉಳಿದ ರಾಷ್ಟ್ರಗಳಿಗೆ ಸರಿಸಮವಾದ ನವದೇಶದ ಕುರಿತು ಕವಿ ಹೆಮ್ಮೆ ಪಡುತ್ತಾರೆ. ಅದೇ ಕ್ಷಣ ಸ್ವಾತಂತ್ರ್ಯ ಸಿಕ್ಕ ದಿನವೇ ನೆಲ ಹರಿದು ಎರಡು ದೇಶಗಳಾಗಿ ತುಂಡಾದದ್ದರ ಕುರಿತು ವಿಷಾದವನ್ನೂ ಪಡುತ್ತಾರೆ. ನಿಮ್ಮವರೇ ಬೇರೆಯಾಗಲು ಬಯಸಿದರು ಎಂಬ ಬ್ರಿಟನ್ನಿನ ವಾದಕ್ಕೆ ಬಯಸಿದ್ದವು ನಿನ್ನ ಅಧಿಕಾರ ಮುಗಿಯಲಿ ಎಂದು ಎನ್ನುವ ಪ್ರತಿವಾದ ಹಾಕುತ್ತಾರೆ. ಇಷ್ಟರ ಮೇಲೆಯೂ ಪಾಲಾದ ಭೂಮಿ ಮತ್ತೆ ಕೂಡುವ ಗಳಿಗೆ ಬಂದೀತೆಂಬ ಆಶಾವಾದ ತೋರುತ್ತಾರೆ. ಬರುವುದು ನಾಳೆ; ಕೂಡುವುದು ನಾಡು ಎನ್ನುತ್ತ ಭವಿಷ್ಯದ ಕುರಿತು ಅದಮ್ಯ ನಂಬಿಕೆಯಿಡುತ್ತಾರೆ.

ನರಸಿಂಹಸ್ವಾಮಿಯವರು ಧರ್ಮವೆಂಬ ಮಾನವ ನಿರ್ಮಿತ ಹುಚ್ಚುತನವ ಒಂದೇ ಮಾತಿನಲ್ಲಿ ಹೇಗೆ ಅಲ್ಲಗಳೆಯುತ್ತಾರೆ ಎಂಬುದನ್ನು ಈ ಸಾಲಿನಲ್ಲಿ ಗಮನಿಸಬಹುದು- ಇಂಡಿಯದ ತೋರಿಕೆಯ ಎರಡು ಗಣಿತದ ಕುರುಡು, ನಿಜಭಾಗ್ಯ ಹಂಚಿಕೆಯ ಕೈಗೆ ಮೀರಿಹುದು. ಚಕ್ರವರ್ತಿನಿಯಾಗಿದ್ದ ಗ್ರೇಟ್ ಬ್ರಿಟನ್ ಇಂಡಿಯದ ಗೆಳತಿಯಾದ ತರುವಾಯ ಇಷ್ಟು ವರ್ಷ ಹೊತ್ತ ಹೊರೆಯೆಲ್ಲ ಮಾಯವಾಗಿ ಸಿರಿಮುಡಿಗೆಲ್ಲ ಒಂದೇ ಗುಲಾಬಿಯ ಮುಡಿಯುವ ಪ್ರತಿಮೆಯಲ್ಲಿಯೇ ಆಧುನಿಕತೆಯ ರೂಪಕವಿದೆ. ಇಂಥ ಕ್ಷಣಗಳು ಪದ್ಯದುದ್ದಕ್ಕೂ ನಮಗೆ ನಾನಾ ರೀತಿಗಳಲ್ಲಿ ಕಾಣಿಸುವವು. ಕವಿತೆಯುದ್ದಕ್ಕೂ ದೇಶವನ್ನು 'ಇಂಡಿಯ' ಎಂದೇ ಕರೆದಿರುವುದೂ ಇಂಥದೇ ಆಧುನಿಕತೆಯ ತುಡಿತಕ್ಕೆ ಹಿಡಿದ ಇನ್ನೊಂದು ಕನ್ನಡಿ ಎಂಬುದು ನನ್ನ ಅನಿಸಿಕೆ.

ಭಾರತವು ನೂರು ಬಗೆಯ ಬೇನೆ-ಬೇಗೆಗೆ ಬಳಲಿ ಸೊರಗಿದ್ದ ದಿನಗಳಲ್ಲಿ ಇಲ್ಲಿನ ಬಿಸಿಲ ತೀರದಲ್ಲಿ ತನ್ನ ಪಲ್ಲಕ್ಕಿಯನ್ನಿಳಿಸಿ ನಡೆದು ಬಂದ ಬ್ರಿಟಾನಿಯಳನ್ನು ಕವಿ ಕೇಳುತ್ತಾರೆ- ಆಹ್ವಾನವಿತ್ತೇ ಆ ಮೌನದಲಿ? ಎಂದು. ಹಾಗೆಯೇ ಮುಂದುವರೆದು ಭಾರತದ ಆ ದಿನಗಳ ಅಸಹಾಯಕತೆಗೂ ಕನ್ನಡಿ ಹಿಡಿಯುತ್ತಾರೆ- ಅಶ್ರದ್ಧೆಯಿತ್ತು ಅಂದಿನ ಅಂಧಕಾರದಲಿ ಎನ್ನುತ್ತ. ಅಲ್ಲದೇ ಬ್ರಿಟಾನಿಯಳನ್ನು ಬರಿಗೈಯಲ್ಲಿ ಎದುರಿಸಿ ಗೆದ್ದ ಭಾರತದ ಬಗ್ಗೆ ಅವರಿಗೆ ಹಿಡಿಸಲಾಗದಷ್ಟು ಹೆಮ್ಮೆಯೂ ಇದೆ. ಬ್ರಿಟನ್ನಿಗೆ ವೀಳ್ಯವನ್ನಿತ್ತು ಆದರಿಸಿ ಕಳುಹಿಸಿದ ಇಂಡಿಯ ತನ್ನ ನಾಡಿನ ರಾಜ್ಯ ಸೂತ್ರಗಳೊಟ್ಟಿಗೆ ಏರಿದ ರವಿರಥವೇ ಬ್ರಿಟನ್ನಿನ ಸಿರಿತನದ ಪಲ್ಲಕ್ಕಿಗಿಂತ ಅಮೂಲ್ಯವಾಗಿ ಅವರಿಗೆ ಕಾಣಿಸುತ್ತದೆ. ಇಂಡಿಯದ ಸ್ವಾತಂತ್ರ್ಯವ ಕಂಡು ಕಲಿಯುಗದ ಕಣ್ಣು ಕೂಡ ಹನಿದುಂಬಿ ಬೆರಗಾಗಿಹುದೆಂದು ನುಡಿಯುತ್ತಾರೆ.

ಸುಪ್ರಭಾತದ ಸಕಲ ಸೌಭಾಗ್ಯವೂ ನಿಮಗಿರಲೆಂದು ಆಶಿಸುತ್ತಲೇ ಬ್ರಿಟನ್ನನ್ನು ಬೀಳ್ಕೊಟ್ಟು ಕೊನೆಯಲ್ಲಿ ಭಾರತಕ್ಕೆ ಮತ್ತು ಗಾಂಧೀಜಿಯವರಿಗೆ ಜಯಘೋಷ ಅರ್ಪಿಸುತ್ತಾರೆ.

'ಡೊಮಿನಿಯನ್ ಜನನ' ಕವಿತೆಯು ನರಸಿಂಹಸ್ವಾಮಿಯವರಿಂದ ಬರೆಸಿಕೊಂಡ ಅತ್ಯುತ್ತಮ ಪದ್ಯ ಹೌದೋ ಅಲ್ಲವೋ ಎಂಬ ಬಗ್ಗೆ ನಾನಿಲ್ಲಿ ಮಾತನಾಡಲಾರೆ. ಆ ಕುರಿತು ಮಾತನಾಡುವ ಅರ್ಹತೆಯೂ ಈ ಚಿಕ್ಕ ವಯಸ್ಸಿನಲ್ಲಿ ನನಗೆ ಇಲ್ಲ ಎಂಬುದೇ ನನ್ನ ನಂಬಿಕೆ. ಆದರೆ 'ಡೊಮಿನಿಯನ್ ಜನನ'ವು ಕೆಎಸ್‌ಎನ್ ಎಲ್ಲ ಪ್ರೇಮಕವಿತೆಗಳ ಮಧ್ಯೆ, ಭಾವುಕ ಹೃದಯದ ಕವಿ ಮನಸ್ಸೊಂದು ತನ್ನೊಳಗೆ ಸುಪ್ತವಾಗಿದ್ದ ರಾಷ್ಟ್ರಪ್ರೇಮಕ್ಕೆ ಸ್ಪಂದಿಸಿದ ಅಪ್ಪಟ ಕವಿತೆಯಾಗಿದೆ ಎಂಬ ಭಾವವನ್ನು ಮಾತ್ರ ಪ್ರಾಮಾಣಿಕವಾಗಿ ಹಂಚಿಕೊಳ್ಳುವೆ.

ಅಷ್ಟೇ ಅಲ್ಲದೇ, 1947 ರಲ್ಲಿ ನಾಲ್ಕನೆಯ ಕ್ಲಾಸು ಓದುತ್ತಿದ್ದ ನನ್ನ ಅಜ್ಜಿ, ಮಧ್ಯರಾತ್ರಿ ಕಳೆದ ನಂತರ ಆ ದಿನ, ಖಾರಾ- ಪೇಡೆಯ ಪೊಟ್ಟಣ ಹಂಚಿ ಇಂದು ನಮಗೆ ಸ್ವಾತಂತ್ರ್ಯ ಬಂತು ಎಂದಿದ್ದರಮ್ಮ ಎಂದು ಹೇಳುವ ಒಂದೇ ಮಾತಿನ ತಂತುವಿನಿಂದ ದೇಶಕ್ಕೆ ಸ್ವಾತಂತ್ರ್ಯ ದೊರೆತ ಆ ಕ್ಷಣಕ್ಕೆ ಬೆಸೆದುಕೊಂಡಿರುವ ನನ್ನನ್ನು, ಕೆಎಸ್‌ಎನ್ 'ಡೊಮಿನಿಯನ್ ಜನನ'ದಂಥ ಕವಿತೆ, ಹೂಬಳ್ಳಿಯೆಲ್ಲ ಉಕ್ಕಾದ ಆ ದಿನಗಳ ಕುರಿತು ರೋಮಾಂಚಗೊಳ್ಳುವಂತೆ ಮಾಡುತ್ತದೆ, ಆ ಕಾಲದ ಗಂಧವನ್ನು ನನ್ನೊಳಗೂ ಪಸರಿಸುತ್ತದೆ ಎಂದು ಮಾತ್ರ ವಿನಮ್ರಳಾಗಿ ನುಡಿಯಬಲ್ಲೆ.

●



## ಕವನ

ಶೋಭಾ ಕುಲ್ಕರ್ಣಿ



### ಕ್ಷಮಯಾ ಧರಿತ್ರಿ

ಮನುಜ ಕುಲದ ಸಂತಾಪಕಿ ನಾ
ಸ್ಪಂದಿಸುತ್ತಿಲ್ಲೆಂದವರ್ಯಾರು?
ಜನಕ ಸುತೆ ಜಾನಕಿಯನು
ನನ್ನೊಡಲಲ್ಲಿ ಕರೆದುಕೊಳ್ಳಲಿಲ್ಲವೇ?

ಯುಗಯುಗಗಳ ಯುದ್ಧದಾ ಆಟದಿ
ಪ್ರಾಣ ತೆತ್ತವರು ಕೋಟಿ ಕೋಟಿ
ಅಪ್ಪಿಕೊಳ್ಳಲಿಲ್ಲವೇ ನಾ ಆ ನತದೃಷ್ಟರನ್ನ
ನರಳಿದನೇ? ಕೆರಳಿದನೇ?
ಎಲ್ಲಕ್ಕೂ ಹಾಡಿಹೆನು ಮೌನಗೀತೆ.

ಬಹುರತ್ನ ಹಿರಣ್ಯಮಯಿ ವಸುಂಧರೆ
ನಾ ಬರಿಗೈಯ ಸುಧಾಮರನ್ನೂ ಹೊತ್ತಿರುವೆ
ಪ್ರೀತಿಯ ಸಾಗರದಿ, ದ್ವೇಷವಾ ಬಡವಾಗ್ನಿ
ಆದರೂ ಮಾಸಿಲ್ಲ ನನ್ನ ಮುಖದ ಮಂದಹಾಸ.

ಅಣು ಕಿರಣ ವಿಕಾರಣಗಳ ಹಾಲಾಹಲ ಉಂಡು
ನಾನಾಗಿರುವೆ ನಂಜುಂಡ
ಮಾನವಿಲ್ಲದಿದ್ದರೂ ಸಹಿಸುತಲಿರುವೆ ;
ಕ್ಷಮಯಾ ಧರಿತ್ರಿ ಎಂಬ ಪಟ್ಟ ಕಟ್ಟಿರುವೆಯಲ್ಲ ಎನಗೆ !

ಗುಡುಗು ಸಿಡಿಲು ಸೌಧಾಮಿನಿಯರ ವಿಕಟಹಾಸ
ಇಡಬೇಧಿಸಿ ಬೆಳಗುತಿರುವನು ಬಾನಲಿ ರವಿ ನಿನಗಾಗಿ
ಇಂದು ನಿನ್ನ ಭಾರವ ಹೊತ್ತಿರುವ ನಾ,
ಕೊಡಲಾರೆ ನಾಳೆಯ ಭರವಸೆ


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

*ಆಡು ಮುಟ್ಟದ ಸೊಪ್ಪಿಲ್ಲ, ಅನಕೃ ಮಾಡದ ಕನ್ನಡ ಸೇವೆಯಿಲ್ಲ*

# ಕವಿ ನಮನ



ಅಹೀಶ್ ಭಾರದ್ವಾಜ

**ಅ.ನ.ಕೃ**(ಅರಕಲಗೂಡು ನರಸಿಂಗರಾಯ ಕೃಷ್ಣರಾಯರು) ಕರ್ನಾಟಕ ಕಂಡ ಅಪ್ರತಿಮ ಬರಹಗಾರ, ಕನ್ನಡಪರ ಹೋರಾಟಗಾರ ಹಾಗು ವಾಗ್ಮಿ. ಸರಿಸುಮಾರು ೧೯೩೦ರಿಂದ ಹಿಡಿದು ೧೯೭೧ರ ತನಕ ನಾಲ್ಕು ದಶಕಗಳ ಕಾಲ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ, ಕನ್ನಡ ಪರ ಚಳುವಳಿಗೆ ತಮ್ಮನ್ನೇ ಮುಡುಪಾಗಿಟ್ಟಿದ್ದ ಅನಿಭಿಶಿಕ್ತ ದೊರೆ. ಅನಕೃ ಅಂದ ಕೂಡಲೇ ಸಾಮಾನ್ಯವಾಗಿ ಎಲ್ಲರಿಗೂ ನೆನಪಿಗೆ ಬರುವುದು ಅವರ ಜನಪ್ರಿಯ ಕಾದಂಬರಿ "ಸಂಧ್ಯಾರಾಗ", ಆದರೆ ಅನಕೃರವರು ರಚಿಸಿದ ಕನ್ನಡ ಸಾಹಿತ್ಯದ ಕೃತಿಗಳ ಪಟ್ಟಿಯನ್ನು ನೋಡಿದರೆ ಬೆರಗಾಗುತ್ತೀರಿ, ೮೦,೦೦೦ ಪುಟಕ್ಕೂ ಮೀರಿದ ಸುಮಾರು ೨೫೦ಕ್ಕೂ ಹೆಚ್ಚು ಕೃತಿಗಳು. ಅದರಲ್ಲಿ ೧೦೦ಕ್ಕೂ ಹೆಚ್ಚು ಕಾದಂಬರಿಗಳು, ಹತ್ತು ಹಲವಾರು ನಾಟಕಗಳು, ಕಥಾಸಂಕಲನಗಳು, ವಿಮರ್ಶೆಗಳು, ಜೀವನಚರಿತ್ರೆಗಳು, ಪ್ರಬಂಧಗಳು ಹೀಗೆ ಹಲವಾರು ಸಾಹಿತ್ಯ ಪ್ರಕಾರಗಳಿಂದ ಕೂಡಿದ್ದು ಈ ಶತಮಾನ ಕಂಡ ಶ್ರೇಷ್ಟ ಕನ್ನಡ ಸಾಹಿತಿ, ಕಾದಂಬರಿ ಸಾರ್ವಭೌಮ. ನವೋದಯವೆಂದು ಗುರುತಿಸಲ್ಪಡುವ ಸಾಹಿತ್ಯದ ಕಾಲಘಟ್ಟದಲ್ಲಿ ಮಹತ್ವದ ಸಾಹಿತಿಯಾಗಿದ್ದ ಅನಕೃರವರು ೧೯೪೫ರ ಸುಮಾರಿಗೆ ರಷ್ಯಾದೇಶದಲ್ಲಾಗಿದ್ದ ಪ್ರಗತಿಶೀಲ ಸಾಹಿತ್ಯ ಚಳುವಳಿಗಳಿಂದ ಪ್ರೇರಣೆಗೊಂಡು ಕನ್ನಡಸಾಹಿತ್ಯದಲ್ಲಿ ಅಲ್ಲಿಯವರೆಗೂ ಹೆಚ್ಚಾಗಿ ನಿಸರ್ಗ, ಆಕಾಂಕ್ಷೆ, ಹೆಣ್ಣು, ನಾಡು, ಹಾಗು ಭಾವುಕತೆ, ಉತ್ಪ್ರೇಕ್ಷೆ, ರಮ್ಯತೆ, ಛಂದೋವೈವಿಧ್ಯತೆಯಂತಹ ವೈಶಿಷ್ಟ್ಯಗಳಿಂದ ಕೂಡಿದ್ದ ಸಾಹಿತ್ಯ ಸಂಪ್ರದಾಯದಿಂದ ದೂರಸರಿದು ವಾಸ್ತವಪ್ರಜ್ಞೆ,ಸಾಮಾಜಿಕ ಕಳಕಳಿ, ಆದರ್ಶಗಳನ್ನೊಳಗೊಂಡ ಪ್ರಗತಿಶೀಲಸಾಹಿತ್ಯದ ಬರವಣಿಗೆಗಳಿಗೆ ಮಂಚೂಣಿಯಾದರು. ಅಲ್ಲಿಯವರೆಗೂ ಆಧುನಿಕ ಕನ್ನಡಸಾಹಿತ್ಯದಲ್ಲಿ ಕಾಣದಿದ್ದ ಒಂದು ಹೊಸ ವಿಚಾರವನ್ನು ಪ್ರಗತಿಶೀಲಸಾಹಿತ್ಯ ತೋರಿಸಿಕೊಟ್ಟಿತು.



ಈ ವಿಚಾರವನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲಿನ ಸಮಾಜದ ಕೊಳೆಯನ್ನು ತೊಡೆದು ಹಾಕುವ ಛಲದಿಂದ ವೇಶ್ಯಾವಟಿಕೆಗೆ ಸಂಬಂಧಪಟ್ಟ ಬರೆದ ಕೃತಿಗಳು ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು ಮತ್ತು ಕಬ್ಬಿಣದ ಕಾಗೆ. ಈ ಕೃತಿಗಳು ಕನ್ನಡಸಾಹಿತ್ಯ ವಲಯದಲ್ಲಿ ಬಹಳ ರಾದ್ಧಾಂತವನ್ನೇ ಮಾಡಿ ಅನಕೃರವರನ್ನು ಅಶ್ಲೀಲ ಸಾಹಿತಿಯೆಂದು ಜರೆಯುವಂತಾಯಿತು. ಅದಕ್ಕೆ ಅನಕೃರವರ ನೇರ ಉತ್ತರ ಹೀಗಿತ್ತು, "ಸತ್ಯ ಹೇಳುವುದು ಅಶ್ಲೀಲವಾದರೆ ನಾನು ಅಶ್ಲೀಲ ಸಾಹಿತಿ; ಪತಿತೆಗೆ ಮರುಕ ತೋರುವುದು ಅಶ್ಲೀಲವಾದರೆ ನಾನು ಅಶ್ಲೀಲ ಸಾಹಿತಿ; ಬೀದಿಯಲ್ಲಿ ಕ್ಷುದ್ಬಾಧೆಯಿಂದ ವಿವಸ್ತ್ರಳಾಗಿ ಬಿದ್ದಿರುವ ಒಬ್ಬ ಅಸಹಾಯಕ ಹೆಣ್ಣಿಗೆ ವಸ್ತ್ರ ಹೊದಿಸುವುದು ಅಶ್ಲೀಲವಾದರೆ ನಾನು ಅಶ್ಲೀಲ ಸಾಹಿತಿ; ". ಹೀಗೆ ಯಾವುದು ಶ್ಲೀಲ, ಯಾವುದು ಅಶ್ಲೀಲ ಸಾಹಿತ್ಯವೆಂದು ಬಿರುಸಾದ ವಾದ ವಿವಾದಗಳು ನಡೆಯುತ್ತಿದ್ದ ಸಮಯದಲ್ಲಿ, ಹಳೆಗನ್ನಡ, ಹೊಸಗನ್ನಡ ಸಾಹಿತ್ಯಗಳ ಗದ್ಯ, ಪದ್ಯ, ನಾಟಕಗಳಲ್ಲಿ ಬರುವ ಕಾಮ ಪ್ರಚೋದನೆಗೆ ಸಂಬಂಧಪಟ್ಟ ವಿಷಯಗಳನ್ನು ಧೀರ್ಘವಾಗಿ ಸಂಶೋಧನೆ, ಅಧ್ಯಯನ ಮಾಡಿ "ಸಾಹಿತ್ಯ ಮತ್ತು ಕಾಮ ಪ್ರಚೋದನೆ"ಯೆಂಬ ಸಂಶೋಧನಾತ್ಮಕ ಕೃತಿಯನ್ನು ಬರೆದು ತಮ್ಮನ್ನು ದೂಷಿಸುತ್ತಿದ್ದ ಗುಂಪಿನ ಜೊತೆ ಚರ್ಚಿಸಿ, ವಿಮರ್ಶಿಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಂಡಂತಹ ದಿಟ್ಟ, ನೇರ ಬರಹಗಾರ.

ಅನಕೃರವರು ಸಾಹಿತ್ಯ ಪ್ರಪಂಚಕ್ಕೆ ಕಾಲಿಟ್ಟಿದ್ದು ತಮ್ಮ ಹೈಸ್ಕೂಲ್ ದಿನಗಳಲ್ಲೆ. ನಟ ವರದಾಚಾರ್ಯರ ಸವಾಲಿಗೆ "ಮದುವೆಯೋ ಮನೆಹಾಳೋ" ಎಂಬ ನಾಟಕವನ್ನು ಒಂದೇ ರಾತ್ರಿಯಲ್ಲಿ ಬರೆದು ಎಲ್ಲರನ್ನು ಬೆರಗಾಗಿಸಿದ್ದರಂತೆ.

ಹೀಗೆ ಶುರುವಾದ ಅವರ ಕನ್ನಡ ಸಾಹಿತ್ಯದ ನಂಟು, "ಜೀವನಯಾತ್ರೆ" ಯೆಂಬ ಮೊದಲ ಕಾದಂಬರಿಯನ್ನು ಬರೆದು ಉದಯರಾಗ, ಸಂಧ್ಯಾರಾಗ, ಹೆಣ್ಣುಜನ್ಮ, ನಗ್ನ ಸತ್ಯ, ಶನಿಸಂತಾನ, ಸಂಜೆಗತ್ತಲು, ಕಬ್ಬಿಣದ ಕಾಗೆ, ಮಣ್ಣಿನ ದೋಣಿ, ತಾಯಿ ಮಕ್ಕಳು ಹೀಗೆ ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ಕನ್ನಡಸಾಹಿತ್ಯ ಲೋಕಕ್ಕೆ ಪರಿಚಯಿಸಿದರು. ಅಲ್ಲಿಯವರೆಗೂ ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರೀಯ, ಧಾರ್ಮಿಕ, ಪೌರಾಣಿಕ ವಿಷಯಗಳನ್ನಾಧರಿಸಿದ ಕಥಾವಸ್ತುವಿನ ಕೃತಿಗಳೇ ಹೆಚ್ಚು ಬರುತ್ತಿದ್ದು ಜನಸಾಮಾನ್ಯರಿಗೆ ಮನಮುಟ್ಟಲು ಕಷ್ಟವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಅನಕೃರವರ ಕೃತಿಗಳು ಬಹಳ ಸಹಜವಾದ ನಮ್ಮ ಸಮಾಜದ ಸುತ್ತಲಿನ ಆಗುಹೋಗುಗಳ ಕಥಾವಸ್ತುಗಳೇ ಆಗಿದ್ದು, ವಾಸ್ತವಿಕತೆಯನ್ನು ಯತಾವತ್ತಾಗಿ ಓದುಗರ ಮುಂದಿಟ್ಟು ಕನ್ನಡ ಸಾಹಿತ್ಯೋಪಾಸಕರ ಮೆಚ್ಚುಗೆಗೆ ಪಾತ್ರವಾಗಿದ್ದಲ್ಲದೆ, ಜನಸಾಮಾನ್ಯರಿಗೂ ಮೆಚ್ಚುವಂತದಾಗಿತ್ತು.

ಸಮಾಜದ ಕಳಕಳಿಯೇ ಕೇಂದ್ರವಾಗಿದ್ದ ಅವರ ಬರವಣಿಗೆಗಳಲ್ಲಿ ಸಮಾಜದ ಕ್ರೌರ್ಯಗಳನ್ನು ಕಥಾಪ್ರಸಂಗಗಳ ಮೂಲಕ, ಹಾಗೂ ಕೃತಿಗಳ ಮುನ್ನುಡಿಗಳಲ್ಲಿ ಯಥೇಚ್ಛವಾಗಿ ಹೇಳಿದ್ದಾರೆ. ಅವರ ಕೃತಿಗಳಲ್ಲಿ ಪ್ರಸ್ತಾಪಿಸಿರುವ ಕೆಲವು ಸ್ವಾರಸ್ಯಕರ ವಿಚಾರಗಳು ಹೀಗಿವೆ.

"ಜೀವನ ಕೆಲವು ಕಪ್ಪು ಬಿಳುಪುಗಳ ಎರಡು ಗೋಳವಲ್ಲ. ಪಾಪವಿದ್ದಡೆ ಪುಣ್ಯ; ಪುಣ್ಯವಿದ್ದಡೆ ಪಾಪವಿದ್ದೇ ಇರುತ್ತದೆ. ಮರಣದಂಡನೆ ಕಾಯುತ್ತಾ ಕುಳಿತಿರುವ ಖೈದಿಯ ಮುಖ ಜೈಲರನ ಮಗುವನ್ನು ನೋಡಿ ಅರಳುತ್ತದೆ. ಪರಮವಂಚಕಿಯಾದ ಹೆಣ್ಣು ಯಾವುದೋ ಅನಾಥ ಶಿಶುವನ್ನು ಸಾಕಿಕೊಂಡು ಅದಕ್ಕೆ ದೇಹ ತೇಯುತ್ತಾಳೆ. ಲೋಕಕಂಟಕನಾದ ಹಿಟ್ಲರ್ ಗಾಯನ ನೃತ್ಯ ಪ್ರಿಯನಾಗಿದ್ದನಂತೆ. ಕಾಮಾಂಧನಾದ ರಾವಣ ಸೀತಾದೇವಿಯ ಒಲವನ್ನು ಬಯಸಿದನೇ ವಿನಾ ಅವಳ ಮೇಲೆ ಬಲಾತ್ಕಾರ ಮಾಡಲಿಲ್ಲ. ಪ್ರತಿಯೊಂದು ಜೀವದೊಳಗೆ ಸುಪ್ತವಾಗಿರುವ ಈ ಈಶ್ವರೀ ಚೈತನ್ಯವನ್ನು ಅರ್ಥಮಾಡಿಕೊಳ್ಳಬೇಕೆಂದು, ಅದಕ್ಕೆ ತಲೆಬಾಗಬೇಕೆಂದು ನಾನು ಪ್ರಯತ್ನಿಸುತ್ತೇನೆ."

"ಪ್ರಗತಿಶೀಲ ಸಾಹಿತಿ ಇದ್ದುದನ್ನು ಇದ್ದಂತೆ ಹೇಳಬೇಕೆಂದು ಬಯಸುತ್ತಾನೆ. ಕಂಡದ್ದನ್ನು ಕಂಡಂತೆ ವರ್ಣಿಸಲು ಬಯಸುತ್ತಾನೆ. ಸೂರ್ಯಕಿರಣ ದುರ್ಬಲ ದೃಷ್ಟಿಯುಳ್ಳವರಿಗೆ ಹಿಂಸೆ ಕೊಡಬಹುದು. ಇದಕ್ಕೆ ಸೂರ್ಯನನ್ನು ಅಪೇಕ್ಷಿಸುವುದೊಳ್ಳೆಯದೋ-ತಮ್ಮ ದೃಷ್ಟಿಯನ್ನು ಬಲಪಡಿಸಿಕೊಳ್ಳುವುದು ಒಳ್ಳೆಯದೋ? "

'ಹೃದಯವಾದ ' ಬೆಳದಿದೆಯೇ? ಎಲ್ಲರ ತಪ್ಪುಗಳನ್ನು ಖಂಡಿಸಲು ಧಾವಿಸುವ ಮಾನವ ಮನಸ್ಸು ತನ್ನ ತಪ್ಪನ್ನೇ ತೂಗಿನೋಡಲು ಸಿದ್ಧವಾಗಿದೆಯೇ? ನಮ್ಮನ್ನು ನಾವು ಅರ್ಥಮಾಡಿಕೊಳ್ಳೋಣ; ಬುದ್ಧಿಗಿಂತ ಮಿಗಿಲಾದ ಹೃದಯವನ್ನು ಬೆಳೆಸಿಕೊಳ್ಳೋಣ. ವಿಶ್ವವನ್ನು ಉಳಿಸಿ ಅಂತಃಕರಣ-ನಿಷ್ಕಲ್ಮಪ್ರೇಮ-ನಿರುದ್ದಿಶ್ಯಸಾನುಭೂತಿ- ಇದೇ ನಮಗೆ ವಿಶ್ವದರ್ಶನ ಮಾಡಿಸಬಲ್ಲ ಮಹಾಗುರು. "ಸತ್ಯ ಎಷ್ಟೇ ತೀಕ್ಷ್ಣವಾಗಿದ್ದರೂ, ಅಪ್ರಿಯವಾಗಿದ್ದರೂ ಗೌರವಾರ್ಹವಾದುದು ಎನ್ನುವ ತಿಳುವಳಿಕೆ ನಮ್ಮಲ್ಲಿ ಹೆಚ್ಚಬೇಕು.ಸತ್ಯ ಸೂರ್ಯನನ್ನು ಸುವರ್ಣ ಸಂಪುಟದಲ್ಲಿ ಸೆರೆ ಹಾಕಬಾರದು. ಶೋಷಣೆ ಯಾವ ರೂಪದಲ್ಲಿ, ಯಾವ ಪ್ರಮಾಣದಲ್ಲಿ, ಎಲ್ಲಿದ್ದರೂ ಅದನ್ನು ಎದುರಿಸಬೇಕಾದ್ದು ಸಾಹಿತಿಯ ಆದ್ಯ ಕರ್ತವ್ಯ."

(ಮುಂದಿನ ಪುಟಕ್ಕೆ...)


Copyright © KCO – Brindavana

(...ಹಿಂದಿನ ಪುಟದಿಂದ)

ಹೀಗೆ ಕಟುಸತ್ಯವಾದ ವಿಚಾರಗಳನ್ನು ನೇರವಾಗಿ, ಬಹುಪರಿಣಾಮಕಾರಿಯಾಗಿ ಸಾಮಾಜಿಕ ಸಮಸ್ಯೆಗಳನ್ನು ಮನಮುಟ್ಟುವಂತೆ ತಮ್ಮ ಬರವಣಿಗೆಯಲ್ಲಿ ಪ್ರಸ್ತಾಪಿಸುತ್ತಾ ಓದುಗರ ಬದುಕಿಗೆ ಹಿಡಿದ ಕನ್ನಡಿಯೆಂಬಂತೆ ಜನಸಾಮಾನ್ಯರಿಗೆ ತಲುಪುವಲ್ಲಿ ಬಹಳ ಯಶಸ್ಸು ಕಂಡಿದ್ದರು.

೧೯೩೪ರಲ್ಲಿ ಪ್ರಕಟವಾದ ಅನಕೃರವರ ಮತ್ತೊಂದು ಜನಪ್ರಿಯ ಕೃತಿ "ಸಂಧ್ಯಾರಾಗ". ಸಂಧ್ಯಾರಾಗ ಕನ್ನಡದ ಕಾದಂಬರಿ ಲೋಕಕ್ಕೆ ಒಂದು ವಿಶಿಷ್ಟವಾದ ಕೊಡುಗೆ. ಮಧ್ಯಮವರ್ಗದ ಕುಟುಂಬದ ಸುತ್ತ ಹೆಣೆದ ಕಥಾವಸ್ತು, ಹಾಗೆಯೇ ಅದರ ಜೊತೆಯಾಗೇ ಬೆಸೆದುಕೊಂಡು ಹೋಗಿರುವ ಭಾವಾತ್ಮಕನಾದ ಸಂಗೀತಕಾರನ ಕಥಾವಸ್ತು. ಮಧ್ಯಮವರ್ಗದ ಗಂಡ-ಹೆಂಡತಿ, ಮಕ್ಕಳುಗಳ ನಡುವೆ ನಿಜಜೀವನದ ಸಹಜ ವ್ಯಕ್ತಿಗಳಂತೆ ಹೆಣೆದಿರುವ ಪಾತ್ರಗಳು, ಸನ್ನಿವೇಶಗಳು ಅನಕೃರವರ ಸಹಜ ಬರವಣಿಗೆಯ ಕೌಶಲ್ಯವನ್ನು ತೋರುತ್ತದೆ. ಈ ಕಾದಂಬರಿಯಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಕಾಣಬರುವ ಪ್ರೀತಿ ವಾತ್ಸಲ್ಯ, ಸೃಜನಶೀಲತೆ, ಅಹಂಕಾರ, ದ್ವೇಷಗಳ ಸನ್ನಿವೇಶಗಳು ಮಹತ್ವಪೂರ್ಣದಾಗಿದೆ. ಸಂಧ್ಯಾರಾಗ ಕಾದಂಬರಿಯನ್ನು ಗಮನಿಸಿದರೆ ಅನಕೃರವರು ತಮ್ಮ ಬರವಣಿಗೆಯ ಶೈಲಿಯಾದ ಪ್ರಗತಿಶೀಲ ಸಾಹಿತ್ಯದ ಸುತ್ತ ಚಿತ್ರಿಸುವ ಕಾದಂಬರಿಗಳಿಗಿಂತ ಸ್ವಲ್ಪ ಭಿನ್ನವಾದ ಪ್ರೀತಿವಾತ್ಸಲ್ಯ, ಭಾವುಕತೆಯ ಮೌಲ್ಯಗಳು ತೋರುವ ಕಥಾವಸ್ತು ಎದ್ದುತೋರುತ್ತದೆ.

ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಅನಕೃರವರ ಹೆಚ್ಚು ಕೃತಿಗಳಿದ್ದರೂ, ಇತರೆ ಸಾಹಿತ್ಯ ಪ್ರಕಾರಗಳಾದ ನಾಟಕಗಳು, ಕಥಾಸಂಕಲನಗಳು, ಜೀವನಚರಿತ್ರೆ, ವಿಮರ್ಶಾತ್ಮಕ ಗ್ರಂಥಗಳು, ಸಂಪಾದಿತ ಕೃತಿಗಳು, ಪ್ರಬಂಧಗಳು, ಕನ್ನಡ ಪತ್ರಿಕೆಗಳು ಹೀಗೆ ಕನ್ನಡ ಸಾಹಿತ್ಯಕ್ಷೇತ್ರದ ಉದ್ದಗಲಕ್ಕೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಭಾರತೀಯ ಕಲಾದರ್ಶನ, ಭಾರತೀಯ ಸಂಸ್ಕೃತಿ ದರ್ಶನ, ಸಾಹಿತ್ಯ ಮತ್ತು ಯುಗಧರ್ಮ, ಸಾಹಿತ್ಯ ಮತ್ತು ಜೀವನ, ಕನ್ನಡಸಾಹಿತ್ಯ ಮತ್ತು ಸಂಸ್ಕೃತಿ, ಸಾರ್ಥಕ ಸಾಹಿತ್ಯದಂತಹ ವೈಚಾರಿಕ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳನ್ನು ರಚಿಸಿದ್ದಾರೆ. ಅನಕೃರವರು ತಮ್ಮ ಕನ್ನಡಸಾಹಿತ್ಯ ಸೇವೆಯನ್ನು ಪ್ರಾರಂಭಿಸಿದ್ದು ನಾಟಕ ಹಾಗು ಕಥಾಸಂಕಲನಗಳಿಂದಲೇ. ತಮ್ಮ ಮೊದಲನೆಯ ಕಾದಂಬರಿ ಪ್ರಕಟವಾಗುವುದಕ್ಕಿಂತ ಮುಂಚೆಯೇ ೩ ನಾಟಕಗಳನ್ನು, ೨ ಕಥಾಸಂಕಲನಗಳನ್ನು ಬರೆದಿದ್ದರು."ಮಿಂಚು" ೧೯೩೦ರಲ್ಲಿ ಪ್ರಕಟಗೊಂಡ ಅವರ ಮೊದಲ ಕಥಾಸಂಕಲನ. ಈ ಸಂಕಲನದ ಮುನ್ನುಡಿಯಲ್ಲಿ ಅನಕೃರವರು ಹೇಳಿದ ಬಗೆ: "ನಮ್ಮ ಸಮಾಜದಲ್ಲಿ ರಣಲೀಲೆಯನ್ನಾಡುತ್ತಿರುವ ಕ್ರೌರ್ಯದ ಕಾಳನೃತ್ಯವನ್ನು ನೋಡಿ ನೋಡಿ ಬೆಂದ ನನ್ನ ಹೃದಯದ ಭಾವನೆಗಳನ್ನು ಈ ಕಥೆಗಳ ಮೂಲಕ ಹೊರಗೆಡೆವಿದ್ದೇನೆ. ದೀನರ ವಾಣಿ ನಾನಾಗಬೇಕೆಂದು ಇವುಗಳನ್ನು ಬರೆದಿದ್ದೇನೆ. ನನ್ನ ಅಲ್ಪಶಕ್ತಿ ನನ್ನ ಅಕ್ಕತಂಗಿಯರಿಗೆ, ಅಣ್ಣತಮ್ಮಂದಿರಿಗೆ ಎಷ್ಟು ಸಂತಸವನ್ನೀಯುವುದೋ, ಅವರನ್ನು ದುಃಖಾಗ್ನಿಯಲ್ಲಿ ಬಾಡಿಸುವ ಸಮಾಜದ ಹೃದಯದಲ್ಲಿ ಪ್ರೇಮವೃಕ್ಷವನ್ನು ನೆಡಲೆಷ್ಟು ಸಾಮರ್ಥ್ಯ ತೋರುವುದೋ ಹೇಳಲಾರೆ-ಆದರೆ ದುಃಖಿಗಳೊಂದಿಗೆ ದುಃಖಿಸಿ ನನ್ನ ಆತ್ಮ ಮುಂದಡಿಯಿಟ್ಟಿದೆ."

"ಕಿಡಿ" ಕಥಾ ಸಂಕಲನದ ಮುನ್ನುಡಿಯಲ್ಲಿ ಅನಕೃರವರ ಬಗ್ಗೆ ಮಾಸ್ತಿಯವರು ಹೀಗೆ ಹೇಳಿದ್ದಾರೆ: ಕೃಷ್ಣರಾಯರು ತಮ್ಮ ಸುತ್ತಣ ಬಾಳನ್ನು ಕೌತುಕದಿಂದ ನೋಡತಕ್ಕವರು. ಅದರ ಅಂಶಗಳನ್ನು ಕುತೂಹಲವಾಗಿ ಗ್ರಹಿಸಬಲ್ಲವರು. ಅದರಿಂದ ತಮ್ಮ ಮನಸ್ಸಿನಲ್ಲಿ ಹೊಮ್ಮುವ ಭಾವನೆಗೆ ಪ್ರತಿಭೆಯಿಂದ ಆಕಾರಕೊಡಬಲ್ಲವರು. ಇವರ ನಾಟಕಗಳಲ್ಲಿ ಬರುವ ಶಾಸ್ತ್ರಿಗಳು, ಸೋದರಮಾವ, ಸ್ನೇಹಿತರು, ತರುಣರು, ಗುಮಾಸ್ತರು ಇವರೆಲ್ಲಾ ನಿಜವಾದ ವ್ಯಕ್ತಿಗಳು. "ಕಿಡಿ" ಕಥಾ ಸಂಕಲನದ ಮುನ್ನುಡಿಯಲ್ಲಿ ಅನಕೃರವರ ಬಗ್ಗೆ

ಮಾಸ್ತಿಯವರು ಹೀಗೆ ಹೇಳಿದ್ದಾರೆ: ಕೃಷ್ಣರಾಯರು ತಮ್ಮ ಸುತ್ತಣ ಬಾಳನ್ನು ಕೌತುಕದಿಂದ ನೋಡತಕ್ಕವರು. ಅದರ ಅಂಶಗಳನ್ನು ಕುತೂಹಲವಾಗಿ ಗ್ರಹಿಸಬಲ್ಲವರು. ಅದರಿಂದ ತಮ್ಮ ಮನಸ್ಸಿನಲ್ಲಿ ಹೊಮ್ಮುವ ಭಾವನೆಗೆ ಪ್ರತಿಭೆಯಿಂದ ಆಕಾರಕೊಡಬಲ್ಲವರು. ಇವರ ನಾಟಕಗಳಲ್ಲಿ ಬರುವ ಶಾಸ್ತ್ರಿಗಳು, ಸೋದರಮಾವ, ಸ್ನೇಹಿತರು, ತರುಣರು, ಗುಮಾಸ್ತರು ಇವರೆಲ್ಲಾ ನಿಜವಾದ ವ್ಯಕ್ತಿಗಳು. ಜೀವನದ ವ್ಯಕ್ತಿಗಳನ್ನು ಬರಹದಲ್ಲಿ ಹೀಗೆ ತರುವುದು ಹಿರಿಯಶಕ್ತಿ. ಇದರೊಂದಿಗೆ ಇವರ ಲೇಖನದಲ್ಲಿ ನೊಂದವರೊಡನೆ ನೋಯುವ ಕನಿಕರ, ಬಾಳಿನ ಅಲ್ಪತನವನ್ನು ಸಹಿಸದ ಒಂದು ಕೆಚ್ಚು, ಆಶೆಯಿಂದ ಕೂಡಿದ ಮುನ್ನೋಟ, ಮುಂದರಿಯಬೇಕೆಂಬ ಉತ್ಸಾಹ ಇವು ಕಾಣುತ್ತವೆ. ಇವೆಲ್ಲಾ ನಮ್ಮ ಸಾಹಿತ್ಯದಲ್ಲಿ ಅವಶ್ಯವಾಗಿ ಪ್ರಕಾಶವಾಗಬೇಕಾದ ಗುಣಗಳು. ಡಾ. ನರಹಳ್ಳಿ ಬಾಲಸುಬ್ರಮಣ್ಯರವರು ಅನಕೃ ಸಮಗ್ರ ಕಥಾಸಂಕಲನದ ಮುನ್ನುಡಿಯಲ್ಲಿ ಅನಕೃ ಕಥೆಗಳ ಬಗ್ಗೆ ವಿಶ್ಲೇಷಿದ ರೀತಿ ಹೀಗಿದೆ: ಅನಕೃರವರ ಬಹುಪಾಲು ಕಥೆಗಳಲ್ಲಿ "ಹಸಿವು" ಕಥೆಯ ಕೇಂದ್ರಬಿಂದುವಾಗಿರುತ್ತದೆ. ಇದು ಎರಡು ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಒಂದು "ಹೊಟ್ಟೆಯ ಹಸಿವು". ಅನಕೃ ಅವರಲ್ಲಿ ಬಡತನದ ತೀವ್ರತೆ ಪ್ರಕಟಗೊಳ್ಳುವುದು ಬಹುಮಟ್ಟಿಗೆ ಈ ನೆಲೆಯಲ್ಲಿಯೇ. ಇನ್ನೊಂದು "ಲೈಂಗಿಕ ಹಸಿವು". ಇವೆರೆಡೂ ಪ್ರತ್ಯೇಕವಲ್ಲ. ಒಂದಕ್ಕೊಂದು ಪೂರಕವಾವಾಗಿಯೇ ಬರುತ್ತದೆ. ಈ ಹಂತದಲ್ಲಿ ಆದರ್ಶ, ನೈತಿಕತೆ, ಸಹಾನುಭೂತಿ, ಸಾಮಾಜಿಕ ಕಾಳಜಿ ಇವೆಲ್ಲವೂ ಸೇರಿಕೊಳ್ಳುತ್ತವೆ. ಸಾಮಾಜಿಕ ಕಳಕಳಿ, ಸಮಾಜ ಸುಧಾರಣೆಯ ವೈಚಾರಿಕ ತತ್ವಗಳೇ ಅವರ ಕೃತಿಗಳ ಕೇಂದ್ರಬಿಂದುವೆಂದು ಈ ಮೇಲಿನ ಮಾತುಗಳೇ ಸಾಕ್ಷಿ.

ಮೂರು ದಶಕಗಳ ಕಾಲಮಾನದಲ್ಲಿ ಮಿಂಚು, ಕಿಡಿ, ಕಾಮನ ಸೋಲು, ಪಾಪಪುಣ್ಯ, ಕಣ್ಣುಮುಚ್ಚಾಲೆ, ಅಗ್ನಿಕನ್ಯೆ, ಶಿಲ್ಪಿ, ಸಮರ ಸುಂದರಿಯೆಂಬ ಒಟ್ಟು ೬೯ ಕಥೆಗಳುಳ್ಳ ೮ ಕಥಾಸಂಕಲನಗಳನ್ನು ಪ್ರಕಟಿಸಿದ್ದರು. ಸಾಹಿತಿ, ಸಂಗೀತಗಾರ, ಚಿತ್ರಗಾರರ ಸಮಸ್ಯೆಗಳನ್ನು ಬಿಂಬಿಸುವ ಸಂಧ್ಯಾರಾಗ, ಉದಯರಾಗ, ನಟಸಾರ್ವಭೌಮ, ಸಾಹಿತ್ಯರತ್ನದಂತ ಕೃತಿಗಳು, ಧರ್ಮದ ದುರಂತ ಸಾರುವ ಅರಳು ಮರುಳು ಕೃತಿ, ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಎತ್ತಿ ತೋರಿಸುವ ಕಣ್ಣೀರು, ಕಾಲಚಕ್ರ, ಮಂಗಳಸೂತ್ರ, ತಾಯಿಯ ಕರುಳು ಕೃತಿಗಳು, ವಾಮಾಚಾರಕ್ಕೆ ಸಂಬಂಧಪಟ್ಟ ಮುಯ್ಯಿಗೆ ಮುಯ್ಯಿ, ಮಿಶ್ರಜಾತಿ ವಿವಾಹ ಪ್ರಸ್ತಾಪಿಸುವ ಶ್ರೀಮತಿ ಕಾದಂಬರಿ, ಸ್ವಾತಂತ್ರ್ಯಾವೇಶ, ಸ್ವಾತಂತ್ರ್ಯದ ತರುವಾಯದ ಸ್ಥಿತಿಯ ಕುರಿತಾದ ಅಮರ ಆಗಸ್ಟ್, ಹೊಸಲು ದಾಟಿದ ಹೆಣ್ಣು, ಜಾತ್ಯಂಧತೆಯ ಶೋಕಚಕ್ರ ಕಾದಂಬರಿ, ಹೀಗೆ ಎಲ್ಲ ತರನಾದ ಸಾಮಾಜಿಕ ಸಮಸ್ಯೆಗನ್ನೊಳಗೊಂಡ ಕಥಾವಸ್ತುಗಳನ್ನು ತಮ್ಮ ಎಲ್ಲಾ ಕೃತಿಗಳಲ್ಲಿ ಚಿತ್ರಿಸಿ ಕಾದಂಬರಿಯ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ.

ಜೀವನದುದ್ದಕ್ಕೂ ಅನಕೃರವರು ತಮ್ಮನ್ನು ಸಾಹಿತ್ಯಕ್ಷೇತ್ರಕ್ಕಷ್ಟೇ ಸೀಮಿತಗೊಳಿಸಿಕೊಳ್ಳಲಿಲ್ಲ. ಬಹಳ ಉತ್ಕೃಷ್ಟವಾದ ವಾಗ್ಮಿ, ಕನ್ನಡಪರ ಹೋರಾಟಗಾರ, ಹೆಮ್ಮೆಯ ಕನ್ನಡಾಭಿಮಾನಿ. ಯಾವುದೇ ಪದವೀಧರರಾಗಿಲ್ಲದಿದ್ದರೂ ಕೂಡ ನಿರಂತರವಾದ ಓದು, ಅಧ್ಯಯನ, ಸಂಶೋಧನೆಗಳ ಮೂಲಕ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಆಧುನಿಕ ಭಾರತ, ಭಾರತದ ಮೇಲೆ ಹೊರ ದೇಶಗಳ ಪ್ರಭಾವ ಹೀಗೆ ಹಲವಾರು ವಿಷಯಗಳ ಬಗ್ಗೆ ಅವಿರತವಾಗಿ ಮಾತನಾಡುತ್ತಿದ್ದರು, ಜೊತೆಗೆ ಕೇಳುವವರಿಗೆ ಸ್ಫೂರ್ತಿ ತುಂಬುವಂತಹ ವಾಕ್ಚಾತುರ್ಯ.ಅವರ ಭಾಷಣವನ್ನು ಕೇಳಲೆಂದು ಲಕ್ಷಗಟ್ಟಲೆ ಜನ ಸೇರುತ್ತಿದ್ದರಂತೆ! ತಕ್ಕ ಸ್ಥಾನಮಾನ ದೊರಕದ ಕನ್ನಡ ಭಾಷೆಯನ್ನು ತಮ್ಮ ಭಾಷಣಗಳ ಮೂಲಕ ಮೇಲಕ್ಕೆತ್ತುವ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದ್ದರು.

(ಮುಂದಿನ ಪುಟಕ್ಕೆ...)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಆಡು ಮುಟ್ಟದ ಸೊಪ್ಪಿಲ್ಲ, ಅನಕೃ ಮಾಡದ ಕನ್ನಡ ಸೇವೆಯಿಲ್ಲ

(...ಹಿಂದಿನ ಪುಟದಿಂದ)

ಅದಕ್ಕೆ ಅವರು ಪಟ್ಟ ಶ್ರಮ, ಹೋರಾಟಗಳೇ ಇಂದಿನ ಕಾಲಮಾನದಲ್ಲಿ ಕನ್ನಡಭಾಷೆಯು ಸ್ವಲ್ಪಮಟ್ಟಿಗಾದರೂ ತಲೆ ಎತ್ತಿ ನಿಂತಿರುವುದೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಕನ್ನಡ ಭಾಷೆ, ಕಲೆ, ಸಂಸ್ಕೃತಿ, ಜನ ಇವುಗಳ ಮೇಲೆ ಏನಾದರೂ, ಎಲ್ಲಾದರೂ ಧಕ್ಕೆಯಾಗುತ್ತಿದೆ ಎಂದಲ್ಲಿ ತಾವೇ ಮುಂದಾಳತ್ವ ವಹಿಸಿ ಹೋರಾಟ ಮಾಡುವಷ್ಟು ಗಟ್ಟಿಗರು. ಅವರು ಒಮ್ಮೆ ಹೀಗೆ ಹೇಳಿದ್ದುಂಟು: "ಅನಕೃ ಶಬ್ದಕೋಶದಲ್ಲಿ ಅಂಜಿಕೆ ಎನ್ನುವ ಶಬ್ದವೇ ಇಲ್ಲ."

ಕರ್ನಾಟಕ ಏಕೀಕರಣ, ಪ್ರಾಂತಾವಾರು ಸಮಸ್ಯೆ, ಕನ್ನಡ ಮಾಧ್ಯಮ, ಹಿಂದೀ ಭಾಷಾಹೇರಿಕೆ ವಿರೋಧ, ಕನ್ನಡ ಕಲೆ, ಕಲಾವಿದರ ಸಮಸ್ಯೆಯಂತಹ ವಿಚಾರಗಳ ಮುಂದಾಳತ್ವವನ್ನು ತೆಗೆದುಕೊಂಡು ಹೋರಾಡಿದ್ದರು. ಪ್ರಬಲ ರಾಜ್ಯವೆಂದರೆ, "ಬಲಿಷ್ಟ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಬಂಗಾಳ, ತಮ್ಮ ಪ್ರಾಂತೀಯ ವೈಶಿಷ್ಟ್ಯವನ್ನುಳಿಸಿಕೊಂಡು ಏಕತ್ರವಾದ ರಾಷ್ಟ್ರೀಯ ಭಾವನೆಯನ್ನು ಬೆಳಸಿಕೊಳ್ಳಬೇಕು. ದುರ್ಬಲ ಪ್ರಾಂತ್ಯ ಯಾವಾಗಲೂ ರಾಷ್ಟ್ರೀಯತೆಯ ಶತೃವೆಂಬುದನ್ನು ಮರೆಯಬಾರದು. ಆ ದೃಷ್ಟಿಯಿಂದಲೇ ನಾವು ಕನ್ನಡ-ಕನ್ನಡ ಎಂದು ಹಲಬುವುದು. ಕೆಲವರ ಕಣ್ಣಿಗೆ ನಾವು ಸಂಕುಚಿತ ಮನೋಭಾವದವರಾಗಿ ಕಂಡುಬರಬಹುದು. ವಿಧಿಯಿಲ್ಲ. ನನ್ನಂತಹವರು ಕನ್ನಡಕ್ಕೆ ಅನೇಕರಿದ್ದಾರೆ. ಆದರೆ ನನಗಿರುವುದು ಒಂದೇ ಕನ್ನಡ." ಎಂಬುದು ಅವರ ನಿಲುವು.

೫೦-೬೦ರ ದಶಕದಲ್ಲಿ ಅನಕೃರವರು ತೊಡಗಿಸಿಕೊಂಡ ಕನ್ನಡಪರ ಹೋರಾಟ, ಚಳುವಳಿಗಳು ಮುಂದಿನ ದಶಕಗಳಲ್ಲಿ ಎಷ್ಟೋ ಕನ್ನಡಪರ ಚಳುವಳಿಗಳಿಗೆ ಪ್ರೇರಣೆಯನ್ನು ಕೊಟ್ಟಿದೆ. ಇಂದಿನ ಕನ್ನಡಪರ ಹೋರಾಟಗಾರರು ಅನಕೃರವರ ಆದರ್ಶಗಳನ್ನು ಮಾದರಿಯನ್ನಾಗಿಸಿಕೊಂಡಿರುವುದು ಬಹಳ ವಿರಳವೇನೊ? ಹಾಗೆಯೇ ಕನ್ನಡ ಕಲೆ, ಸಿನಿಮಾ ಕ್ಷೇತ್ರಗಳಲ್ಲಿ ಕನ್ನಡಕ್ಕೆ ಸರಿಯಾದ ಸ್ಥಾನಮಾನ ದೊರಕದೆ ಧಕ್ಕೆಯುಂಟಾಗುತ್ತಿದ್ದರೆ, ಹೋರಾಟ, ಚಳುವಳಿಗಳನ್ನು ಹೂಡಿ ಕನ್ನಡಕ್ಕೆ ಸಿಗಬೇಕಾದ ಪ್ರಾಶಸ್ತ್ಯವನ್ನು ದೊರಕಿಸಿಕೊಟ್ಟಂತಹ ನಿದರ್ಶನಗಳು ಸಾಕಷ್ಟಿವೆ. ಬೆಂಗಳೂರಿನ ಪ್ರಸಿದ್ಧ ರಾಮನವಮಿ ಸಂಗೀತೋತ್ಸವದಲ್ಲಿ ಹೆಚ್ಚಾಗಿ ಕನ್ನಡೇತರ ಹಾಡುಗಳು ಹಾಡುತ್ತಾರೆಂದು ಕನ್ನಡವನ್ನು ಕಡೆಗೆಣಿಸಿದ್ದಾರೆಂದು ಪ್ರತಿಭಟಿಸಿ, ಮುಂದಿನ ದಿನಗಳಲ್ಲಿ ಕನ್ನಡ ಕೃತಿಗಳು ಯಾವ ಅಡ್ಡಿ ಆತಂಕಗಳಿಲ್ಲದೆ ಸಂಗೀತಸಭೆಗಳಲ್ಲಿ ಹಾಡುವುದಕ್ಕೆ ನಾಂದಿಯಾದರು. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತಗಳಲ್ಲಿ ಹೆಚ್ಚು ಹೆಚ್ಚು ಕನ್ನಡ ದೇವರನಾಮಗಳು, ವಚನಗಳು ಶುರುವಾದವು. ಕನ್ನಡ ಸಿನಿಮಾಗಳನ್ನು ಪ್ರದರ್ಶಿಸದೇ ಇದ್ದ ಎಷ್ಟೋ ಚಿತ್ರಮಂದಿರಗಳಲ್ಲಿ ವರ್ಷಕ್ಕೆ ೩ ತಿಂಗಳು ಖಡ್ಡಾಯವಾಗಿ ಕನ್ನಡ ಚಿತ್ರವನ್ನು ಪ್ರದರ್ಶಿಸಬೇಕೆಂದು ಚಳುವಳಿ ಹೂಡಿ ಯಶಸ್ವಿಯಾಗಿದ್ದರು. "ಆಡು ಮುಟ್ಟದ ಸೊಪ್ಪಿಲ್ಲ; ಅನಕೃ ಮಾಡದ ಕನ್ನಡ ಸೇವೆಯಿಲ್ಲ;"

ಕನ್ನಡವನ್ನು ಬಹಳ ಅಗಾಧವಾಗಿ ಪ್ರೀತಿಸಿ, ಅಭಿಮಾನಿಸುತ್ತಿದ್ದ ಅವರು ಬೇರೆ ಭಾಷೆಗಳ ಬಗ್ಗೆ ಯಾವತ್ತೂ ನೀಚಭಾವವನ್ನು ತೋರಿದವರಲ್ಲ. ಪರಭಾಷೆಗಳನ್ನು ಗೌರವಿಸಬೇಕು, ದುರಭಿಮಾನ ಕೂಡದು. "ನಮ್ಮ ನಾಡಿನಲ್ಲಿ ಎಲ್ಲರೂ ಇರಲಿ, ಆದರೆ ಅವರು ನಮ್ಮೊಂದಿಗೆ ಹೊಂದಿಕೊಂಡು ಇರಲಿ, ನಮ್ಮ ಮಾತೃಭಾಷೆಯನ್ನು ಮೆಟ್ಟಿ ಮುಂದುವರೆಯುವುದು ತರವಲ್ಲ" ಎಂಬುದಾಗಿತ್ತು ಅನಕೃರವರ ಸಿದ್ಧಾಂತ. ತಮ್ಮ ಜೀವನದುದ್ದಕ್ಕೂ ಕನ್ನಡಸೇವೆಯಲ್ಲೇ ತೊಡಗಿಸಿಕೊಂದಿದ್ದ ಇವರನ್ನು ಪ್ರೀತಿಸುತ್ತಿದ್ದ ಎಷ್ಟು ಜನರಿದ್ದರೋ, ಹಾಗೆಯೇ ನಿಷ್ಟುರರೂ ಇದ್ದರೂ ಯಾರಿಗೂ ಅಂಜದ ಅನಕೃರವರ ನಿಲುವು ಅವರನ್ನು ಎತ್ತರಕ್ಕೆ ಕೊಂಡೊಯ್ದಿತ್ತು. ಒಮ್ಮೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರು ಸಭೆಯಲ್ಲಿ "ನಾನು ತಮಿಳು ಕನ್ನಡಿಗ; ಮಿರ್ಜಾ ಇಸ್ಮಾಯಿಲ್ ಮುಸ್ಲಿಂ ಕನ್ನಡಿಗ; ಆದರೆ ಅ.ನ. ಕೃಷ್ಣರಾಯರು ಅಚ್ಚಕನ್ನಡಿಗರು" ಅಂತ ಹೇಳಿದ್ದುಂಟು.

ಪ್ರಗತಿಶೀಲಸಾಹಿತ್ಯ ಚಳುವಳಿಗಳ ದಿನಗಳಲ್ಲಿ ಅನಕೃರವರ ನಿಕಟವರ್ತಿಗಳಾಗಿದ್ದ ನಿರಂಜನರು ಹೇಳುವಂತೆ "ತಾನು ಜನ್ಮವೆತ್ತಿದ ನಾಡಿಗೆ ಒಬ್ಬ ಸಾಹಿತಿ, ಕಲಾವಿದ, ಶ್ರೀಸಾಮಾನ್ಯ ಕೂಡ ಸಲ್ಲಿಸಬೇಕಾದ ಸೇವೆಯುಂಟು. ಋಣ ತೀರಿಕೆ ಎನ್ನಬಹುದು ಬೇಕಾದರೆ. ಅದನ್ನು ಎಷ್ಟು ಘನತರವಾಗಿ ಮಾಡಿದ್ದಾರೆ ಅನಕೃ! ಒಬ್ಬ ಕೃಷ್ಣರಾಯರು ಸಲ್ಲಿಸಿರುವುದು ನೂರು ಸಾಹಿತಿಗಳ, ನೂರು ಕಲಾವಿದರ, ನೂರುಜನ ನಾಡು ಕಟ್ಟುವವರ ಸಾಲವನ್ನು. ಒಂದು ಜೀವಮಾನದಲ್ಲೇ ಮಾಡಿರುವುದು ಹಲವು ಜನ್ಮಗಳ ಕೆಲಸ."

೬೩ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ ಅನಕೃರವರ ಕೊಡುಗೆ ಅಪಾರ. ಅನಕೃರವರ ಅಂತಿಮದರ್ಶನ ಪಡೆಯಲು ನಾಡಿನಾದ್ಯಂತ ಲಕ್ಷಾಂತರ ಜನ ಸೇರಿದ್ದನ್ನು ಅಲ್ಲಿದ್ದ ಸಾಹಿತಿಯೊಬ್ಬರು ನೋಡಿ "ಸಾಹಿತಿಯೊಬ್ಬನಿಗೆ ಇಂತಹ ಗೌರವ ಸಿಗುವುದಾದರೆ ನಾನು ಸಾಯಲು ಸಿದ್ಧ" ಎಂದು ಹೇಳಿದ್ದುಂಟು.

"ವಿಶ್ವ ಸಿಡಿದೊಡೆಯದಂತೆ ಕಾಪಾಡಬಲ್ಲದು ಮಾನವೀಯತೆಯೊಂದೇ; ಕವಿ ಮಾನವೀಯತೆಯ ಪ್ರವಾದಿ"- ಅನಕೃ



## ಕವನ



ಮಹೇಶ ಸಿರಿ

### ವಸಂತ ಮಾಸ

ಅಚ್ಚ ಹಸಿರ ಹಾಸಿಗೆ ಹಾಸಿತು
ವನ ಗಿರಿಗಳ ಮಡಿಲಲಿ
ಜೀವರಾಶಿ ಉಲ್ಲಾಸದಿ ನಲಿದವು
ಧರೆ ತುಂಬಲು ಸಿರಿಯಲಿ

ಎಲೆ ಮಾವುಮರ ಚಿಗುರಲು
ಕೋಗಿಲೆ ಹಾಡಿತು ಇಂಪಾದ ರಾಗದಲಿ
ಹೂ ಅರಳಿ ಕಂಪನು ಬೀರಲು
ದುಂಬಿ ನೀಡಿತು ಸಂಗೀತ ಮಧುರದಲಿ

ಭಾನು ಕಾರ್ಮೋಡ ಕರಗಿಸಿ ಮಳೆ ಸುರಿಸಲು
ನವಿಲು ನರ್ತಿಸಿತು ಆನಂದದಲಿ
ಎಲ್ಲವು ಸೇರಿ ಸ್ವಾಗತ ಕೋರಿದವು
ವಸಂತ ಮಾಸಕೆ ಕಾಲಿಡುತಲಿ

ರಂಗು ರಂಗಿನಲಿ ರಂಗಾದವೆಲ್ಲವು
ಹೋಳಿಯ ರಂಗಿನಾಟದ ರಂಗಲಿ
ತಂದಿತು ಎಲ್ಲಡೆ ಸಂತಸವು
ಪತಂಗ ಆಕಾಶಕೆ ಏರಿ ಹಾರುತಲಿ

ಹೊಸ ಯುಗಕೆ ಹರುಷವು ನಾಂದಿಯಾಯಿತು
ಋತುಗಳ ರಾಜ ವಸಂತನ ಆಗಮನದಲಿ


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಪರಿಚಯ

### ವಿದ್ವಾನ್ ಶ್ರೀಯುತ ಆರ್.ಕೆ. ಪದ್ಮನಾಭ



ವಿನುತ ಶ್ರೀಧರ

**ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ**

**ವಾದಿರಾಜಗುರೂನ್ ವಂದೇ ಹಯಗ್ರೀವ ದಯಾಶ್ರಯನ್**

ನನ್ನ ಪೂಜ್ಯ ಗುರುಗಳಾದ ಗಾನಕಲಾಭೂಷಣ ವಿದ್ವಾನ್ ಶ್ರೀ. ಆರ್. ಕೆ. ಪದ್ಮನಾಭ ಅವರ ಕಛೇರಿಗಳನ್ನು ಕೇಳಿದವರಿಗೆಲ್ಲಾ ಈ ಮೇಲಿನ ಸಾಲುಗಳು ಚಿರಪರಿಚಿತ. ಇವರ ೪೫ ವರ್ಷಗಳ ಸಂಗೀತದ ಬದುಕಿನಲ್ಲಿ, ಹಿರಿಯರೂ, ಕಿರಿಯರೂ, ಸಂಗೀತ ಬಲ್ಲವರು, ಬಲ್ಲದವರು ಎಂಬ ಭೇದ ಭಾವವಿಲ್ಲದೆ, ಎಲ್ಲರನ್ನೂ ನಗು ನಗುತ್ತಲೇ ಬಹಳ ಆತ್ಮೀಯವಾಗಿ ಮಾತನಾಡಿಸುವ ಈ ಹಸನ್ಮುಖಿ, ಅವರ ಶಿಷ್ಯ ವರ್ಗ ಹಾಗೂ ಜನ ಸಾಮಾನ್ಯರಲ್ಲಿ, "ಆರ್. ಕೆ. ಪಿ ಸರ್" ಎಂದೇ ಜನಪ್ರಿಯರಾಗಿದ್ದಾರೆ.

ಶ್ರೀಮದ್ ವಾದಿರಜ ಸ್ವಾಮಿಗಳು ಇವರ ಆರಾಧ್ಯ ದೈವ. ಅವರ ಪ್ರೇರಣೆಯಿಂದ ಸುಮಾರು ೩೫೦ಕ್ಕೂ ಹೆಚ್ಚು ವೈವಿಧ್ಯಮಯ ಕೃತಿಗಳನ್ನು ರಚಿಸಿ, ರಾಗ ಸಂಯೋಜಿಸಿ, ಅವುಗಳನ್ನು ಹಾಡಿ, ಹಾಡಿಸಿ ದೇಶ ವಿದೇಶಗಳಲ್ಲಿ ಪ್ರಶಂಸೆ ಪಡೆದಿದ್ದಾರೆ. ಇವರ ಕೃತಿಗಳಲ್ಲಿ ಸರಳವಾದ ಕನ್ನಡದ ಸಾಹಿತ್ಯದೊಂದಿಗೆ ಮಧುರವಾದ ಸಂಗೀತ ಹಾಗೂ ಭಕ್ತಿಯ ಸಮ್ಮಿಲನವನ್ನು ಕಾಣಬಹುದು. ಇವರು ತಮ್ಮ ಕೃತಿಗಳನ್ನು ಗೋಷ್ಠಿ ಗಾಯನದಲ್ಲೂ ನೂರಾರು ಜನರು ಸುಲಭವಾಗಿ ಹಾಡುವಂತೆ ರಾಗ ಸಂಯೋಜನೆ ಮಾಡಿರುತ್ತಾರೆ. ಪದ್ಮನಾಭ ದಾಸ ಎಂಬುದು ಇವರ ಅಂಕಿತ.



ಶ್ರೀಯುತ ಪದ್ಮನಾಭನವರು ಜನಿಸಿದ್ದು, ಕಾವೇರಿ ನದಿಯ ದಡದಲ್ಲಿರುವ, ರುದ್ರ ಪಟ್ಟಣ ಎಂಬ ಪುಟ್ಟ ಗ್ರಾಮದಲ್ಲಿ. ಈ ಗ್ರಾಮವು ಹಲವಾರು ಜನಪ್ರಿಯ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರಿಗೆ ಹುಟ್ಟೂರಾಗಿದೆ. ಬಾಲ್ಯದಲ್ಲಿ ಮೈಸೂರಿನ ಶ್ರೀ ನಂಜುಂಡ ಸ್ವಾಮಿ ಹಾಗೂ ಬೆಂಗಳೂರಿನ ಶ್ರೀ ಸೀತಾರಾಮ ಶಾಸ್ತ್ರಿಗಳ ಬಳಿ ಸಂಗೀತಾಭ್ಯಾಸ ಮಾಡಿದರು. ನಂತರ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪದವಿ ಪಡೆದು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸಕ್ಕೆ ಸೇರಿದರು. ಆಗ ಅವರಿಗೆ ಸುಮಾರು ೨೫ ವರ್ಷ. ವಿಜಯ ಕಾಲೇಜ್ ಆಫ್ ಮ್ಯೂಸಿಕ್ ನ ಪ್ರೊಫೆಸರ್. ಹೆಚ್.ವಿ. ಕೃಷ್ಣ ಮೂರ್ತಿಯವರ ಬಳಿ ಉನ್ನತ ಸಂಗೀತಾಭ್ಯಾಸ ಮುಂದುವರೆಸಿದರು. ಕಚೇರಿಗಳನ್ನು ಕೊಡಲು ಪ್ರಾರಂಭಿಸಿದರು. ಅವರ ವಿದ್ವತ್ತು ಹಾಗೂ ಕಂಚಿನ ಕಂಠದ ಗಾಯನ, ಸಂಗೀತ ಪ್ರೇಮಿಗಳನ್ನು ಆಕರ್ಷಿಸುವುದಲ್ಲದೇ, ಮಂತ್ರಮುಗ್ಧರನ್ನಾಗಿಸುತಿತ್ತು.

ಆಗ ಶುರುವಾಗಿದ್ದು ನಮ್ಮ ಗುರುಗಳ ಸಂಗೀತ ಶಿಕ್ಷಣದ ಪಯಣ. ಅವರ ಮಾತಿನಲ್ಲೇ ಹೇಳುವುದಾದರೇ, ನಾನು ಮತ್ತು ನನ್ನ ತಂಗಿ, ಅನಿತ, ಅವರ "ಪ್ರಪ್ರಥಮ ಪ್ರಧಾನ ಶಿಷ್ಯೆಯರು". ಅದು ನಮಗಾಗಿ ಒದಗಿ ಬಂದ ದೊಡ್ಡ ಸೌಭಾಗ್ಯವೆಂದು ಭಾವಿಸಿ ನಮಿಸುತ್ತೇವೆ. ಹೀಗೆ ಸಂಗೀತ ಹೇಳಿಕೊಡುತ್ತಾ, ತಮ್ಮದೇ ಆದ, ಶಾರದ ಕಲಾ ಕೇಂದ್ರ ಎಂಬ ಶಿಕ್ಷಣ ಸಂಸ್ಥೆಯನ್ನು ೧೯೯೦ರಲ್ಲಿ ಸ್ಥಾಪಿಸಿದರು. ಅವರ ಶಿಷ್ಯ ವರ್ಗ ಬೆಳೆಯ ತೊಡಗಿತು. ಸುಮಾರು ೫-೬ ವರ್ಷಗಳ ನಂತರ, ಅಲ್ಲಿಯ ತನಕ ಪ್ರವೃತ್ತಿಯಾಗಿದ್ದ ಸಂಗೀತವನ್ನೇ ವೃತ್ತಿಯನ್ನಾಗಿಸುವ ಕಠಿಣ ನಿರ್ಧಾರವನ್ನು ತೆಗೆದುಕೊಂಡು, ತಮ್ಮ ಬ್ಯಾಂಕ್ ಕೆಲಸದಿಂದ ಸ್ವಯಂಪ್ರೇರಿತ ನಿವೃತ್ತಿಯನ್ನುಪಡೆದರು. ಸಂಗೀತದಲ್ಲೇ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಶ್ರೀ ಶಾರದ ಕಲಾ ಕೇಂದ್ರದ ವತಿಯಿಂದ, ಪ್ರಸಿದ್ಧ ವಾಗ್ಗೇಯಕಾರರ, ಸುಮಾರು ೬೪ - ಧ್ವನಿಸುರಳಿಗಳು ಹಾಗು ಪುಸ್ತಕಗಳನ್ನು ಹೊರತಂದಿದ್ದಾರೆ.

ಬೆಂಗಳೂರಿನ ಹುಳಿಮಾವಿನಲ್ಲಿ ಶ್ರೀಮದ್ ವಾದಿರಾಜ ಕಲಾಭವನ ಎಂಬ ರಂಗಮಂದಿರ ಹಾಗು ಸಭಾಂಗಣವನ್ನು ಸ್ಥಾಪಿಸಿದ್ದಾರೆ. ತಮ್ಮ ಹುಟ್ಟೂರಾದ ರುದ್ರಪಟ್ಟಣದಲ್ಲಿ, ೭೨ ಅಡಿ ಎತ್ತರದ, ತಂಬೂರಿ ಆಕಾರದ, "ಸಪ್ತಸ್ವರ ದೇವತಾ ಧ್ಯಾನ ಮಂದಿರ"ವನ್ನು ನಿರ್ಮಿಸಿದ್ದಾರೆ. ಕರ್ನಾಟಕ ಗಾನ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಸುಮಾರು ೭೦ಕ್ಕೂ ಹೆಚ್ಚು ಬಿರುದುಗಳನ್ನು ಪಡೆದಿದ್ದಾರೆ. ಮತ್ತೊಂದು ವಿಷೇಶ ಎಂದರೆ, ಬೆಂಗಳೂರಿನ ಚಿಕ್ಕಲಸನ್ದ್ರದಲ್ಲಿ, ಒಂದು ರಸ್ತೆಗೆ ಇವರ ಹೆಸರನ್ನು ಇರಿಸಲಾಗಿದೆ. ಶ್ರೀಯುತ. ಆರ್. ಕೆ. ಪಿ ಸರ್ ಅವರು ಸಹಸ್ರಾರು ಜನರಿಗೆ ಗೋಷ್ಠಿ ಗಾಯನದಲ್ಲಿ ತರಬೇತಿಯನ್ನು ನೀಡುತ್ತಿದ್ದಾರೆ. ಅವರ ಹೆಸರನ್ನು ಉಳಿಸುವಂಥಹ ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ.

ಶ್ರೀ ವಾದಿರಾಜರ ಸಂಗೀತ, ಸಾಹಿತ್ಯ ಹಾಗೂ ಸಂದೇಶವನ್ನು ಸಾಮಾನ್ಯ ಜನರಿಗೂ ತಲಪಿಸಬೇಕೆಂಬುದು ನಮ್ಮ ಗುರುಗಳ ಹಂಬಲ. ಈ ನಿಟ್ಟಿನಲ್ಲಿ, ಪ್ರತಿ ವರುಷ, ಬೆಂಗಳೂರಿನ ವಾದಿರಾಜ ಕಲಾ ಭವನದಲ್ಲಿ, ವಾದಿರಾಜರ ಆರಾಧನೆಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ವಿದೇಶದಲ್ಲಿರುವ ನಮ್ಮಂಥವರಿಗೂ ಆ ಸಂಭ್ರಮದಲ್ಲಿ ಪಾಲ್ಗೊಳ್ಳುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವುದು ಅವರ ಆಶಯ. ಇದಕ್ಕೆಂದು, ಸಂಗೀತದಲ್ಲಿ ಆಸಕ್ತಿ ಇರುವ ಅವರ ಮಗ ಪ್ರಮೋದ್ ಮತ್ತು ಅವರ ಸೊಸೆ ಶೀಲ, ಕೆಲಸಕ್ಕೆಂದು ವಲಸೆ ಬಂದಿರುವ, ಅವರ ಹಲವು ಶಿಷ್ಯರು ಹಾಗೂ ಸಂಗೀತ ಪ್ರೇಮಿಗಳನ್ನು ಒಂದುಗೂಡಿಸಿದಾಗ, ಆರ್.ಕೆ.ಪಿ ಬಳಗ ಯೂ ಎಸ್ ಎ ರೂಪುಗೊಂಡಿತು. ಇದರ ವತಿಯಿಂದ, ಪ್ರಪ್ರಥಮ ಬಾರಿಗೆ, ನಮ್ಮ ಆರ್.ಕೆ.ಪಿ ಸರ್ ಅವರ ನೇತೃತ್ವದಲ್ಲಿ, ೨೦೧೬ ಎಪ್ರಿಲ್ ೨೩ರರಂದು, ಸ್ಯಾನ್ ಹೊಸೆಯಲ್ಲಿರುವ, ಶ್ರೀ ಕೃಷ್ಣ ವೃಂದಾವನದಲ್ಲಿ ಸದ್ಗುರು ವಾದಿರಾಜರ ಆರಾಧನೆಯನ್ನು ಆಚರಿಸಲಾಯಿತು.ಅದರ ಯಶಸ್ಸಿನ ಹಿನ್ನಲೆಯಲ್ಲೇ, ಕಳೆದ ವರ್ಷ, ನಮ್ಮ ನ್ಯೂ ಜೆರ್ಸಿಯ, ಶ್ರೀ ಕೃಷ್ಣ ವೃಂದಾವನದಲ್ಲಿ, ಏಪ್ರಿಲ್ ೨೯ರಂದು, ನಮ್ಮ ಗುರುಗಳ ಸಮ್ಮುಖದಲ್ಲಿ, ಎರಡನೇ ವರ್ಷದ ಆರಾಧನೆಯನ್ನು ಆಚರಿಸುವ ಸದಾವಕಾಶ ನಮ್ಮದಾಯಿತು. ನಮ್ಮ ಸ್ಥಳೀಯ ಕಲಾವಿದರಿಂದ ಗೋಷ್ಠಿ ಗಾಯನ, ಸಂಗೀತ, ನೃತ್ಯ, ಹರಿಕಥೆ - ಹೀಗೆ ಇಡೀ ದಿವಸ ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು. ನಮ್ಮ ಗುರುಗಳ ಕಚೇರಿಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಅನೇಕ ಕಲಾವಿದರು ಮತ್ತು ಸಂಗೀತ ಪ್ರೇಮಿಗಳು ಅತಿ ಉತ್ಸಾಹದಿಂದ ಪಾಲ್ಗೊಂಡು ಒಳ್ಳೆಯ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಇದೇ ಬರುವ ಜೂನ್ ೯ರಂದು, ಆರ್. ಕೆ. ಪಿ ಸರ್ ಅವರ ಮಾರ್ಗದರ್ಶನದಲ್ಲಿ, ನಮ್ಮ ಶ್ರೀ ಕೃಷ್ಣ ವೃಂದಾವನದಲ್ಲಿ, ಶ್ರೀಮದ್ ವಾದಿರಾಜರ ಮೂರನೆ ವರ್ಷದ ಆರಾಧನೆಯನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಶ್ರೀ ವಾದಿರಾಜರ ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕೆಂದು, ಆರ್.ಕೆ.ಪಿ ಬಳಗ ಯೂ.ಎಸ್.ಎ ಯ ಪರವಾಗಿ, ತಮ್ಮೆಲ್ಲರಲ್ಲಿ ವಿನಂತಿ.

ಶ್ರೀ. ಪದ್ಮನಾಭ ಅವರದ್ದು ಬಹುಮುಖ ಪ್ರತಿಭೆ ಹಾಗು ವ್ಯಕ್ತಿತ್ವ. ಕ್ರೀಡೆಗಳಲ್ಲೂ ಆಸಕ್ತಿ ಉಳ್ಳ ಇವರು ಬ್ಯಾಡ್ಮಿನ್ಟನ್ ನಲ್ಲಿ ಸ್ಟೇಟ್ ಪ್ಲೇಯರ್. ಹಾಡುವುದಲ್ಲದೇ, ಅವರು "ವಾದಿರಾಜ ವೈಭವ", "ನಾದ", "ಪುರಂದರ ದಾಸ","ಶ್ರೀ ಮುತ್ತುಸ್ವಾಮಿ ದೀಕ್ಷಿತರು" - ಹೀಗೇ ಹಲವಾರು ನಾಟಕಗಳನ್ನು ಸಂಯೋಜಿಸಿ, ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

(೧೧ನೇ ಪುಟಕ್ಕೆ...)



Copyright © KCO – Brindavana

ಸಂಚಿಕೆ
೧೬
ಮೇ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಅನಂತ ಜನುಮವ ಕೇಳೋಣಾ




ಎನ್. ಮೂರ್ತಿ

ಕನ್ನಡ ಚಿತ್ರರಂಗ ಎಂದರೆ ಪಕ್ಕನೆ ಎಲ್ಲರಿಗೆ ನೆನಪಿಗೆ ಬರುವ ಮೊದಲ ಹೆಸರು ರಾಜಕುಮಾರ್. ಒಬ್ಬ ನಟನಾಗಿ ಅಪಾರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡ ವ್ಯಕ್ತಿ. ಭಾರತೀಯ ಚಿತ್ರರಂಗ ಕಂಡ ಮೇರು ನಟರ ಸಾಲಿನಲ್ಲಿ ರಾಜಕುಮಾರ್ ಹಲವಾರು ಕಾರಣಗಳಿಂದ ಬೇರೆಯಾಗಿ ನಿಲ್ಲುತ್ತಾರೆ. ಒಬ್ಬ ಗಾಯಕನಾಗಿ, ಯೋಗ ಪಟುವಾಗಿ ರಾಜಕುಮಾರ್ ನನಗೆ ಹೆಚ್ಚು ಇಷ್ಟವಾಗುತ್ತಾರೆ. ಬಹುಶಃ ಇದು ಈ ಎರಡು ಕ್ಷೇತ್ರಗಳಲ್ಲಿ ನನಗಿರುವ ಆಸಕ್ತಿಯಿಂದ ಇರಬಹುದು.

1974 ರಲ್ಲಿ ತೆರೆಕಂಡ "ಸಂಪತ್ತಿಗೆ ಸವಾಲ್" ಚಿತ್ರದಲ್ಲಿನ "ಯಾರೇ ಕೂಗಾಡಲಿ" ಹಾಡಿನ ಮೂಲಕ ಪೂರ್ಣ ಪ್ರಮಾಣದ ಗಾಯಕರಾಗಿ ಮುನ್ನೆಲೆಗೆ ಬಂದ ರಾಜಕುಮಾರ್, ಚಲನ ಚಿತ್ರಗೀತೆಗಳನ್ನಷ್ಟೇ ಅಲ್ಲದೆ ಇತರ ಪ್ರಾಕಾರಗಳಾದ ಭಕ್ತಿಗೀತೆ ಮತ್ತು ಭಾವಗೀತೆಗಳನ್ನೂ ಹಾಡಿ ಇಂದಿಗೂ ಪ್ರಸ್ತುತವಾಗಿರುವ ಗಾಯಕ (ಜನಪದ ಗೀತೆ ಹಾಡಿರುವ ಬಗ್ಗೆ ನನಗೆ ತಿಳಿದಿಲ್ಲ).

"ಬಾನಿಗೊಂದು ಎಲ್ಲೆ ಎಲ್ಲಿದೇ?" ಹಾಡನ್ನು ಕೇಳದೆ ಇರುವವರು ತುಂಬಾ ಕಡಿಮೆ. 1976 ರಲ್ಲಿ ಬಿಡುಗಡೆಯಾದ "ಪ್ರೇಮದ ಕಾಣಿಕೆ" ಚಿತ್ರದ ಈ ಗೀತೆ ನನಗೆ ತುಂಬಾ ಇಷ್ಟವಾಗುವ ಹಾಡುಗಳಲ್ಲಿ ಒಂದು. ಇದು ನಾನು ನೋಡಿದ ರಾಜಕುಮಾರ್ ಅವರ ಮೊದಲ ಚಿತ್ರ. ತೀರಾ ಚಿಕ್ಕವನಾಗಿದ್ದಾಗ ನೋಡಿದ ಈ ಚಿತ್ರ, ನೋಡಿದಾಗ ಏನು ಅಂತ ಅರ್ಥವಾಗದಿದ್ದರೂ, ಈ ಹಾಡು ಮಾತ್ರ ಹಾಗೆ ನೆನಪಿನಲ್ಲಿ ಉಳಿಯಿತು. ನಾನು ಹುಟ್ಟಿ ಬೆಳೆದ ಮಲೆನಾಡಿನ ಪರಿಸರದಲ್ಲಿ ಈ ಹಾಡು ಚಿತ್ರಿತವಾಗಿದೆ ಎಂಬ ಸ್ವಾರ್ಥವೂ ಈ ಗೀತೆ ನನಗೆ ಇಷ್ಟವಾಗಲು ಕಾರಣ. "ಹುಟ್ಟು ಸಾವು ಬಾಳಿನಲ್ಲಿ ಎರಡು ಕೊನೆಗಳು. ಬಯಸಿದಾಗ ಕಾಣದಿರುವ ಎರಡು ಮುಖಗಳು" ಎಂದು ಎರಡು ವಾಕ್ಯಗಳಲ್ಲಿ ಸರಳವಾಗಿ ಬದುಕು ಮತ್ತು ಸಾವನ್ನು ಚಿ. ಉದಯಶಂಕರ್ ಅವರು ರಾಜಕುಮಾರ್ ಮೂಲಕ ಕಟ್ಟಿಕೊಡುತ್ತಾರೆ.



ಗುರು ರಾಘವೇಂದ್ರರ ಬಗ್ಗೆ ಅಪಾರ ಭಕ್ತಿ ಹೊಂದಿದ್ದ ರಾಜಕುಮಾರ್, ಸಾಕಷ್ಟು ಗೀತೆಗಳನ್ನು ಅವರ ಕುರಿತು ಹಾಡಿದ್ದಾರೆ. "ಮಂತ್ರಾಲಯಕೆ ಹೋಗೋಣ" ಅವರು ಹಾಡಿದ ಭಕ್ತಿ ಗೀತೆಗಳ ಮೊದಲ ಧ್ವನಿಸುರುಳಿ. "ಮಂತ್ರಾಲಕೆ ಹೋಗೋಣ. ಗುರುರಾಯರ ದರುಶನ ಮಾಡೋಣ" ಕೇಳುತ್ತ ಬೆಳೆದ, ಇಷ್ಟವಾಗುವ ಗೀತೆ. ಈ ಹಾಡಿನಲ್ಲಿ ಬರುವ ಎರಡನೇ ಚರಣ, "ಅನಂತ ಜನುಮವ ಕೇಳೋಣಾ, ಆ ಮುಕುತಿಯು ಬೇಡ ಎನ್ನೋಣ" ಎಂದು ಶುರುವಾಗಿ ಒಂದು ಕ್ಷಣ ಕೇಳುಗರನ್ನು ಆಶ್ಚರ್ಯಕ್ಕೆ ನೂಕುತ್ತದೆ. ಇದೇನಿದು, ಬೇರೆ ಎಲ್ಲ ಭಕ್ತಿ ಸಾಹಿತ್ಯದಲ್ಲಿ "ಮುಕ್ತಿ ಬೇಕು, ಬದುಕು ಸಾಕು" ಎಂದು ಕೇಳಿರುವ ನಮಗೆ "ಮುಕ್ತಿ ಬೇಡ" ಎನ್ನುವ ಬೇಡಿಕೆ ತೀರಾ ಅಸಹಜ ಎನಿಸುತ್ತದೆ. "ಜನುಮ ಜನುಮದಿ ಚರಣ ಕಮಲದಿ ಬೃಂಗಗಳಾಗಿ ನಲಿದಾಡೋಣ" ಎನ್ನುವ ಹಾಡಿನ ಮುಂದಿನ ಸಾಲುಗಳನ್ನು ಕೇಳುತ್ತಿದ್ದಂತೆ, ಅನಂತ ಜನುಮದ ಬೇಡಿಕೆಯ ಸ್ವಾರ್ಥದ ಹಿಂದಿನ ಕಾರಣ ಅನಾವರಣಗೊಳ್ಳುತ್ತದೆ. ಸರಳವಾದ ಈ ಗೀತೆಯ ಸಾಹಿತ್ಯದ ಕೀರ್ತಿ ಮತ್ತೊಮ್ಮೆ ಉದಯಶಂಕರ್ ಅವರಿಗೇ ಸಲ್ಲುತ್ತದೆ.

ಕವಿಯೊಬ್ಬನ ಮನದಲ್ಲಿ ಯಾವುದೋ ಕ್ಷಣದಲ್ಲಿ ಮೂಡಿದ ಭಾವನೆಗಳಿಗೆ ರಾಗ ಸಂಯೋಜನೆ ಮತ್ತು ಗಾಯನ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನ ತಂದುಕೊಟ್ಟಿದೆ. ಹಲವು ಕವಿಗಳಿಗೆ ಹೆಸರು ತಂದುಕೊಟ್ಟ "ಭಾವಗೀತೆ" ಎಂದು ಕರೆಸಿಕೊಳ್ಳುವ ಈ ಪ್ರಾಕಾರದಲ್ಲಿಯೂ ಡಾ.ರಾಜ್ ಹಾಡಿದ್ದಾರೆ.

(ಮುಂದಿನ ಪುಟಕ್ಕೆ…)

## ಕನ್ನಡ ಚಿತ್ರರಂಗ ಕಂಡ ವರನಟನ ಐದು ದಶಕಗಳು



ಮಹೇಶ್ ಸಿರಿ

ರಾಜಕುಮಾರ್ ಅವರ ಸಿನಿಮಾ ವೃತ್ತಿ ಜೀವನದ ಬಗ್ಗೆ ಬರಿಯೋದು ಅಂದರೆ ಅದು ಕನ್ನಡ ಚಿತ್ರರಂಗ ಪ್ರಾರಂಭದ ದಿನದಿಂದ ಬೆಳೆದು ಬಂದ ಬೆಳವಣಿಗೆ ಬಗ್ಗೆ ಬರೆದ ಹಾಗೆ. ಅವರ ವೃತ್ತಿ ಜೀವನ ಅಭಿವೃದ್ಧಿಯೊಂದಿಗೆ ಕನ್ನಡ ಚಿತ್ರರಂಗ ಕೂಡ ಜೊತೆಯಲ್ಲೇ ಬೆಳೆಯಿತು ಅಂದರೆ ಅತಿಶಯೋಕ್ತಿಯಾಗಲಾರದು. ಆಗಿನ ಕಾಲದಲ್ಲಿ ಅಂದರೆ 50ರ ದಶಕದಲ್ಲಿ ಕನ್ನಡ ಚಿತ್ರೋದ್ಯಮ ಮತ್ತು ಚಿತ್ರ ತಂತ್ರಜ್ಞಾನ ಅಷ್ಟೊಂದು ಅಭಿವೃದ್ಧಿ ಆಗಿರಲಿಲ್ಲ. ಅಂದು ವರುಷಕೆ ಬೆರಳೆಣಿಕೆಯಷ್ಟು ಚಿತ್ರಗಳು ಮಾತ್ರ ತಯಾರಾಗುತ್ತಿದ್ದವು. ಕರ್ನಾಟಕದಲ್ಲಿ ಆಗ ಸಿನಿಮಾ ಸ್ಟುಡಿಯೋ ಮತ್ತು ತಂತ್ರಜ್ಞರು ಇರಲಿಲ್ಲವಾದ್ದರಿಂದ ಸಿನೆಮಾಗಳೆಲ್ಲವೂ ಚೆನ್ನೈನಲ್ಲಿ (ಅಂದಿನ ಮದ್ರಾಸ್) ತಯಾರಾಗುತ್ತಿದ್ದವು. ರಾಜಕುಮಾರ್ ಅವರು ಸಿನೆಮಾಗೆ ಬರುವ ಮುಂಚೆ ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು ಡ್ರಾಮಾ ಕಂಪನಿಗಳಲ್ಲಿ ನಟನಾಗಿ ಜೀವನ ಪ್ರಾರಂಭಿಸಿದ್ದರು. ಅಲ್ಲಿಯೇ ಅವರು ಶಾಸ್ತ್ರೀಯ ಸಂಗೀತವನ್ನು ಕಲಿತಿದ್ದರು. ನಾಟಕದಲ್ಲಿ ಮಾಡಿದ ಪಾತ್ರಗಳು ಮತ್ತು ಅನುಭವಗಳು ಮುಂದೆ ಹಲವು ಸಿನಿಮಾ ಪಾತ್ರಗಳನ್ನು ಮಾಡುವಾಗ ಅವರಿಗೆ ಬಹಳ ಅನುಕೂಲವಾಯಿತು. ರಾಜಕುಮಾರ್ ಅವರ ಪ್ರಥಮ ಸಿನಿಮಾ - ಬೇಡರ ಕಣ್ಣಪ್ಪ. 1954ರಲ್ಲಿ ಎವಿಎಂ ಸಂಸ್ಥೆಯಡಿಯಲ್ಲಿ ಎಚ್.ಎಲ್.ಎನ್ ಸಿಂಹರವರು ನಿರ್ದೇಶಿಸಿದ ಈ ಚಿತ್ರ ಬಿಡುಗಡೆ ಆಗಿ ಬಹಳ ಯಶಸ್ವಿ ಪಡೆಯಿತು ಮತ್ತು ಕನ್ನಡ ಚಿತ್ರೋದ್ಯಮಕ್ಕೆ ಹೊಸ ಉತ್ತೇಜನವನ್ನು ನೀಡಿತು. ಹೀಗೆ ಪ್ರಾರಂಭವಾದ ಅವರ ಸಿನಿಮಾ ಬದುಕು ಸತತ ಐದು ದಶಕದಲ್ಲಿ ಹಲವಾರು ಬಗೆಬಗೆಯ ಪಾತ್ರಗಳಲ್ಲಿ 210 ಚಿತ್ರಗಳಲ್ಲಿ ಮಿಂಚಿದರು. ಅವರ ಹಲವಾರು ಸಿನಿಮಾಗಳಿಗೆ ಹಿನ್ನಲೆ ಗಾಯನವು ಒಳಗೊಂಡಿತ್ತು. ಭಾರತೀಯ ಚಿತ್ರರಂಗದಲ್ಲಿ ರಾಜಕುಮಾರರನ್ನು ಹೊರತುಪಡಿಸಿ ಒಂದೇ ಕಾಲಕೆ ನಟನೆ ಮತ್ತು ಗಾಯನದಲ್ಲಿ ಯಶಸ್ಸು ಕಂಡ ಮತ್ತೊಬ್ಬ ವ್ಯಕ್ತಿಯ ಉದಾಹರಣೆಗಳಿಲ್ಲ. ಇಷ್ಟೊಂದು ಧೀರ್ಘ ಸಮಯದವರೆಗೆ ಹಲವಾರು ವಿಭಿನ್ನ ಪಾತ್ರಗಳಾದ ಪೌರಾಣಿಕ, ಚಾರಿತ್ರಿಕ, ಸಾಮಾಜಿಕ, ಸಾಂಸಾರಿಕ, ಹಾಸ್ಯ ಹಾಗೂ ಸಾಹಸ ಪಾತ್ರಗಳಲ್ಲಿ ಮಿಂಚಿದ ನಟ ರಾಜಕುಮಾರ್ ಬಿಟ್ಟರೆ ಸಿಗುವುದಿಲ್ಲ. ಅವರ ಯೋಗಾಭ್ಯಾಸ ಮತ್ತು ಉತ್ತಮ ಆರೋಗ್ಯ ಅವರಿಗೆ ಈ ಮಟ್ಟದ ಸಾಧನೆಗೆ ಅನುಕೂಲವಾಯಿತು. ಅವರಿಗೆ ನಟನೆ ನೈಜವಾಗಿ ಬಂದಂಥ ಕೊಡುಗೆಯಾಗಿತ್ತು. ಅವರು ಯಾವುದೇ ಪಾತ್ರವಾದರೂ ಬಹಳ ಸಹಜವಾಗಿ ನಟಿಸುತ್ತಿದ್ದರು, ಅದು ಹಳ್ಳಿಯ ಮುಗ್ಧನ ಪಾತ್ರವಿರಬಹುದು ಅಥವಾ ಆಧುನಿಕ ಜೇಮ್ಸ್ ಬಾಂಡ್ ನಂತಹ ಪಾತ್ರವಿರಬಹುದು. ಅವರ ಸಾಧನೆಗೆ ಹಲವಾರು ಪ್ರಶಸ್ತಿಗಳು ಮತ್ತು ಪುರುಸ್ಕಾರಗಳು ಅವರಿಗೆ ದೊರಕಿದವು. ಅವುಗಳಲ್ಲಿ ಪ್ರಮುಖವಾದವು ಕೇಂದ್ರ ಸರಕಾರದ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು ರಾಷ್ಟ್ರ ಮಟ್ಟದ ಉತ್ತಮ ನಟ, ಮತ್ತು ಗಾಯಕ, ಫಿಲಂಫೇರ್ ಪ್ರಶಸ್ತಿಗಳು, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಇತ್ಯಾದಿ.

(ಮುಂದಿನ ಪುಟಕ್ಕೆ…)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

(...ಹಿಂದಿನ ಪುಟದಿಂದ)

## ಅನಂತ ಜನುಮವ ಕೇಳೋಣ

"ಕನ್ನಡವೇ ಸತ್ಯ" ಹೆಸರಿನ ಧ್ವನಿಸುರುಳಿಯ ಬಾವಗೀತೆಗಳ ಸಂಕಲನದಲ್ಲಿ ಅವರು ಹಾಡಿರುವ "ಇಲ್ಲೇ ಇರು ಅಲ್ಲಿ ಹೋಗಿ ಮಲ್ಲಿಗೆಯನು ತರುವೆನು", ಸಾಹಿತ್ಯ ಮತ್ತು ಸಂಗೀತ ಎರಡರಿಂದಲೂ ಕೇಳುಗರ ಗಮನ ಸೆಳೆಯುತ್ತದೆ. ಈ ಗೀತೆಯಲ್ಲಿ ಬರುವ "ಸಾದಿಸುತ್ತ ಜಯಿಸುವುದೇ ಬಾಳುವುದರ ಸಾರವು" ಎನ್ನುವ ಕವಿ ಗೋಕಾಕರ ಸಾಲುಗಳು ಬದುಕಿನ ಅರ್ಥವನ್ನು, ಉದ್ದೇಶವನ್ನು ನಾಲ್ಕೇ ಪದಗಳಲ್ಲಿ ಕಟ್ಟಿಕೊಡುತ್ತದೆ.

ಕಳೆದ ತಿಂಗಳು ಏಪ್ರಿಲ್ 12 ರಂದು ಬದುಕಿನ ರಜತ ಪರದೆಯಿಂದ ರಾಜಕುಮಾರ್ ಹಿಂದೆ ಸರಿದು 12 ವರ್ಷವಾಯ್ತು. ಸರಳತೆಯಿಂದ ಬದುಕಿದ ಅವರು ಸಾವಿನಲ್ಲೂ ಸಾರ್ಥಕತೆ ಮೆರೆದವರು. ತಮ್ಮ ನೇತ್ರದಾನದಿಂದ ಅನಾಮಧೇಯ ವ್ಯಕ್ತಿಯೊಬ್ಬರಿಗೆ ದೃಷ್ಟಿನೀಡಿದ ಈ ಚೇತನ, ಗುರುರಾಯರಲ್ಲಿನ ಅವರ ಕೋರಿಕೆಯಂತೆ ಮುಕ್ತಿ ಹೊಂದದೆ ಮತ್ತೆ ಹುಟ್ಟಿ ಬರಲಿ.

(...೧೦ನೇ ಪುಟದಿಂದ)

## ವಿದ್ವಾನ್ ಶ್ರೀಯುತ ಆರ್.ಕೆ. ಪದ್ಮನಾಭ

ಕಾದಂಬರಿ ಮತ್ತು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. "ಅನಂತನಾದ" ಮತ್ತು "ನಾದಬಿಂದು" ಇವರ ಪ್ರಮುಖ ಕಾದಂಬರಿಗಳಾಗಿವೆ. ಹೀಗೆ ಕಲಾಸೇವೆಗೆಂದು ತಮ್ಮ ಜೀವನವನ್ನೇ ಮುಡಿಪಾಗಿಸಿಟ್ಟಿದ್ದಾರೆ. ಯಾರ ಮನಸ್ಸಿಗೂ ನೋವಾಗದಂತೆ, ನಗು ನಗುತ್ತಲೇ ತಿದ್ದಿ ಪಾಠ ಹೇಳುವ ಇವರ ಕ್ರಮ ಅನುಕರಣೀಯ. ಆರ್. ಕೇ. ಪಿ ಸರ್ ಎಂದರೆ ಅವರ ಶಿಷ್ಯರಿಗೆಲ್ಲಾ ಅಚ್ಚುಮೆಚ್ಚು.(ನನಗೂ ಸಹ). ತಮ್ಮ ಶಿಷ್ಯರನೆಲ್ಲಾ ಸ್ವಂತ ಮಕ್ಕಳಂತೆಯೇ ನೋಡುತ್ತಾರೆ. ಗುರು ಶಿಷ್ಯರ ನಡುವೆ ಭಯ, ಭಕ್ತಿ, ಸ್ನೇಹ, ಪ್ರೀತಿ, ಗೌರವ, ಮಮತೆಗಳ ಒಂದು ಅವಿನಾಭಾವ ಸಂಬಂಧ. "ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂಬಂತೆ, ತಮ್ಮ ಎಲ್ಲಾ ಕೀರ್ತಿ ಹಾಗು ಯಶಸ್ಸುಗಳನ್ನು, ಸದ್ಗುರು ಶ್ರೀ ವಾದಿರಾಜ ಸ್ವಾಮಿಯ ಪಾದಾರವಿಂದಗಳಿಗೆ ಗಾನಪುಷ್ಪಗಳಂತೆ ಸಮರ್ಪಿಸುವ ಇಂಥಹ ಗುರುಗಳನ್ನು ಪಡೆದ ನಾನು ನಿಜಕ್ಕೂ ಧನ್ಯಳು! ಅವರಿಗೆ ನನ್ನ ಅನಂತಾನಂತ ನಮನಗಳು. ಶ್ರೀ ಗುರುಭ್ಯೋ ನಮಹ.


●

(...ಹಿಂದಿನ ಪುಟದಿಂದ)

## ಕನ್ನಡ ಚಿತ್ರರಂಗ ಕಂಡ ವರನಟನ ಐದು ದಶಕಗಳು

ರಾಜಕುಮಾರ್ ಅವರ ಚಿತ್ರ ಜೀವನವನ್ನು ಮೂರು ಹಂತಗಳಲ್ಲಿ ವಿಂಗಡಣೆ ಮಾಡಬಹುದು. ಮೊದಲನೇ ಹಂತ - 1954 ರಿಂದ 70 ದಶಕದ ಅಂತ್ಯದವರೆಗೆ, ಎರಡನೇ ಹಂತ 80 ರಿಂದ 90 ರ ದಶಕದವರೆಗೆ ಮತ್ತು ಕಡೆಯ ಹಂತ 90ರ ದಶಕ ನಂತರದು. ಮೊದಲನೇ ಹಂತದ 70 ನೇ ದಶಕದವರೆಗೆ ಕಪ್ಪು-ಬಿಳಪು ಸಿನಿಮಾಗಳು ತಯಾರಾದವು. ಹೆಚ್ಚಿನ ಸಿನಿಮಾಗಳು ಪೌರಾಣಿಕ ಮತ್ತು ಭಕ್ತಿ ಪ್ರಧಾನವಾದವು, ಕೆಲವು ಚಾರಿತ್ರಿಕ ಮತ್ತು ಸಾಮಾಜಿಕ ಸಿನಿಮಾಗಳು. ಅವರ ಪ್ರಸಿದ್ಧ ಸಿನಿಮಾಗಳಾದ ಬೇಡರ ಕಣಪ್ಪ, ಭಕ್ತ ಕನಕದಾಸ, ಇಮ್ಮಡಿ ಪುಲಕೇಶಿ, ಮಣ್ಣಿನ ಮಗ, ಸತ್ಯ ಹರಿಶ್ಚಂದ್ರ ಈ ಹಂತದಲ್ಲಿ ಬಿಡುಗಡೆಗೊಂಡವು. ಎರಡನೇ ಹಂತ 70ರ ಆರಂಭ ಮತ್ತು 80 ಕೊನೆವರಗೆ ಬಂದಂತಹ ಸಿನಿಮಾಗಳು, ಈ ಅವಧಿ ರಾಜಕುಮಾರ್ ಅವರ ವೃತ್ತಿ ಜೀವನದಲ್ಲಿ ಉತ್ತುಂಗದ ಕಾಲ. ಈ ಕಾಲದಲ್ಲಿ ಕಲರ್ ಸಿನಿಮಾಗಳು ಬರಲಾರಂಭಿಸಿದವು. ಕನ್ನಡ ಚಿತ್ರರಂಗ ಕೂಡ ಚೆನ್ನೈ ಮೇಲೆ ಅವಲಂಬಿತವಾಗದೆ ತನ್ನ ಕಾಲಮೇಲೆ ನಿಲ್ಲಲು ಪ್ರಯತ್ನ ಪಡಲಾರಂಭಿಸಿತು. ಹಲವಾರು ನವ ನಟರು, ನಿರ್ದೇಶಕರು ಮತ್ತು ತಂತ್ರಜ್ಞರು ಆ ಅವಧಿಯಲಿ ಬಂದರು. ಹಲವಾರು ಕನ್ನಡದ ಎಲ್ಲಾ ಕಾಲಕ್ಕೂ ಪ್ರಸಿದ್ಧ ಸಿನಿಮಾಗಳು ತೆರೆಕಂಡವು. ಈ ಹಂತದಲ್ಲಿ ಬಿಡುಗಡೆಗೊಂಡ ಅವರ ಪ್ರಸಿದ್ಧ ಸಿನೆಮಾಗಳು - ಬಂಗಾರದ ಮನುಷ್ಯ, ಕಸ್ತೂರಿ ನಿವಾಸ, ಗಂಧದ ಗುಡಿ, ಭಕ್ತ ಕುಂಬಾರ, ಬಬ್ರುವಾಹನ, ಶಂಕರ್ ಗುರು, ಮಯೂರ ಇತ್ಯಾದಿ. ಕೊನೆಯ ಹಂತದ 90ರ ನಂತರದು ಆಗ ಕನ್ನಡ ಚಿತ್ರರಂಗ ಬಹಳ ಬದಲಾವಣೆ ಕಂಡಿತು, ಆ ಅವಧಿಯಲ್ಲಿ ಅನೇಕ ಯುವಕರು ನಟರಾಗಿ ಯಶಸ್ವಿ ಹೊಂದಿದರು. ಆದರೂ ರಾಜಕುಮಾರ್ ತಮ್ಮ ಜನಪ್ರಿಯತೆ ಉಳಿಸಿಕೊಂಡು ಕೆಲವು ಚಿತ್ರಗಳನ್ನು ಕೊಟ್ಟರು. ಆ ಅವಧಿಯಲ್ಲಿ ಜನಪ್ರಿಯತೆ ಪಡೆದ ಕೆಲವು ಚಿತ್ರಗಳು ಜೀವನ ಚೈತ್ರ, ಆಕಸ್ಮಿಕ. ರಾಜಕುಮಾರರ ವೃತ್ತಿ ಜೀವನದ ಕಡೆ ಚಿತ್ರ ಶಬ್ದವೇಧಿ 2000ನೇ ಇಸವಿಯಲ್ಲಿ ತೆರೆಕಂಡದ್ದು. ಹೀಗೆ ರಾಜಕುಮಾರ್ ಧೀರ್ಘ ಕಾಲದ ವೃತಿ ಜೀವನದಲ್ಲಿ ಎಂದೂ ವಿವಾದಕ್ಕೆ ಒಳಗಾಗದೆ ಸಾಧನೆ ಮಾಡಿದರು. ಅವರ ಈ ಸಾಧನೆ ಹಿಂದೆ ಅನೇಕರ ಬೆಂಬಲವಿತ್ತು. ಅನೇಕ ನಿರ್ದೇಶಕರು, ನಿರ್ಮಾಪಕರು, ಕುಟುಂಬ ವರ್ಗ, ಚಿ ಉದಯ್ ಶಂಕರ ಅವರ ಬರವಣಿಗೆ ಮತ್ತು ಅಭಿಮಾನಿಗಳ ಪ್ರೀತಿ ಅವರ ಬೆಳವಣಿಗೆಗೆ ಸಹಾಯವಾಯಿತು. ಅವರು ಬರಿ ಸಿನಿಮಾಗೆ ಕೊಟ್ಟ ಕೊಡುಗೆಯಲ್ಲದೆ, ಪ್ರಸಂಗ ಬಂದಾಗ ಕನ್ನಡದ ಬಗ್ಗೆಯು ಧ್ವನಿಯೆತ್ತಿದರು. ಕನ್ನಡಕ್ಕೆ ಸಂಕಷ್ಟ ಬಂದಾಗ ಎಲ್ಲಾ ಕಲಾವಿದರೊಂದಿಗೆ ಕೂಡಿ ಗೋಕಾಕ್ ವರದಿ ಜಾರಿಗೊಳಿಸಲು ಹೋರಾಡಿದರು. ರಾಜಕುಮಾರ್ ಮಾಡಿದ ಸಾಧನೆ ಮತ್ತು ಕನ್ನಡ ಸೇವೆಗಾಗಿ ಅವರು ಕರ್ನಾಟಕದ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ.









ಶ್ರೀವಿದ್ಯಾ ಪ್ರಶಾಂತ್




Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

**ಹಿನ್ನೋಟ**

*ಹೀಗೊಂದು ಅನಿಸಿಕೆ..*



ಲಕ್ಷ್ಮಿ ಕೊಲಾಲ್

ನಮ್ಮ ನಾಡು, ಊರು ಮತ್ತು ನಮ್ಮ ಭಾಷೆಯೆಂದರೆ ಮೊದಲು ಹುಟ್ಟುವ ಮತ್ತು ನೆನಪಿಗೆ ಬರುವ ಪದವೇ ಅಭಿಮಾನ. ಈ ಬಾರಿಯ ಬೃಂದಾವನ ಕನ್ನಡ ಕೂಟ ಅಭಿಮಾನಿ ತಂಡವು ನಡೆಸಿಕೊಟ್ಟ ಒಂದು ಅತ್ಯಂತ ಸುಂದರ ಮತ್ತು ರಂಗು ರಂಗಾದ ಆನಂದಭರಿತ ಮನೋರಂಜನಾ ಕಾರ್ಯಕ್ರಮಗಳನ್ನೊಡಗೂಡಿದ ದಿನವೇ ಏಪ್ರಿಲ್ ೨೮ ೨೦೧೮ ರಂದು ಜರುಗಿದ ವಸಂತೋತ್ಸವ ಮತ್ತು ಯುಗಾದಿ ಹಬ್ಬದ ಆಚರಣೆ. ಅಂದು ನ್ಯೂ ಜೆರ್ಸಿಯಲ್ಲಿ ಹೆಸರು ಮಾಡುತ್ತಿರುವ ಕನ್ನಡ ಶಾಲೆಗಳ ಮಕ್ಕಳು ಭಾಗವಹಿಸಿದ್ದ ಕಾರ್ಯಕ್ರಮಗಳು ಒಂದಕ್ಕಿಂತ ಒಂದು ಚೆನ್ನಾಗಿ ಮೂಡಿಬಂದವು. ಹಲವಾರು ನೃತ್ಯ, ನಾಟಕ ಮತ್ತು ಗಾಯನಗಳಿಂದ ಮನರಂಜಿಸಿದ ಮಕ್ಕಳಿಗೂ ಹಾಗೂ ಅವರನ್ನು ಮಾರ್ಗದರ್ಶಿಸಿದ ಎಲ್ಲರಿಗೂ ತುಂಬು ಅಭಿಮಾನದಿಂದ ನಮ್ಮೆಲ್ಲರ ಚಪ್ಪಾಳೆಗಳು.

ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು "ಕಣ್ಣಿಗೆ ಕಾಣುವ ದೇವರು" ಎಂಬ ನಾಟಕವನ್ನು ಮಾಡಿದರು. ಎಡಿಸನ್ ಶಾಲೆಯ ಮಕ್ಕಳು "ಮಲೆನಾಡಿನ ಮೂಲೆ" ಎಂಬ ಹಾಡಿಗೆ ನೃತ್ಯ ರೂಪಕವೊಂದನ್ನು ಮಾಡಿ ತೋರಿದರು. ಸೌತ್ ಬ್ರುನ್ಸ್ವಿಕ್ ಶಾಲೆಯ ಮಕ್ಕಳು ಒಂದು ಹಾಸ್ಯಭರಿತ "ಯಥಾ ಗುರು ತಥಾ ಶಿಷ್ಯ" ಎಂಬ ನಾಟಕವನ್ನುಪ್ರದರ್ಶಿಸಿ ಮನರಂಜಿಸಿದರು.

ಈಗ ಕಣ್ಣಿಗೆ ಕಾಣುವ ದೇವರು ಎಂಬ ನಾಟಕ ಅಥವಾ ನೃತ್ಯ ರೂಪಕದ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳಬಯಸುವೆನು. ಆ ಮೇರುನಟ ಡಾ .ರಾಜಕುಮಾರ್ ಅವರ ಸುಪುತ್ರ ಪುನೀತ್ ರಾಜಕುಮಾರ್ ಅವರು ಹಾಡಿರುವ ಹಾಡಿನಿಂದ ಕಾರ್ಯಕ್ರಮ ಆರಂಭವಾದಾಕ್ಷಣದಲ್ಲೇ ಮನದಲ್ಲಿ ಏನೋ ಅರಿಯದ ಮುದದ ಅನುಭವವಾಯಿತು ಎನ್ನುವುದು ಖಂಡಿತ. ನಂತರ ಈ ಮಕ್ಕಳು ಇಳಿದು ಬಾ ತಾಯೆ ಇಳಿದು ಬಾ ಹಾಡಿಗೆ ಮಾಡಿದ ನೃತ್ಯ ಹಾಗು ಈ ಮಧ್ಯದಲ್ಲಿ ಮಕ್ಕಳು ಮದರ್ಸ್ ಡೇ ಬಗ್ಗೆ ಮಾತನ್ನಾಡುತ್ತಿದ್ದಾಗ ಅವರೆಲ್ಲರಿಗೂ ತಮ್ಮ ತಾಯಂದಿರ ಮೇಲಿರುವ ಪ್ರೀತಿ, ವಿಶ್ವಾಸವನ್ನು ನೋಡಿ ಬಹಳ ಸಂತೋಷವಾಯಿತು.




ಚಿತ್ರ :ಸೂರ್ಯ ರಾಜ್ ,ಈಸ್ಟ್ ವಿಂಡ್ಸರ್ ಕನ್ನಡ ಶಾಲೆ

ಮದರ್ಸ್ ಡೇ ಎಂದರೆ ತಾಯಿಗೆ ಮಾತ್ರ ಸೀಮಿತವಲ್ಲ ತಾಯಿಯ ರೂಪದಲ್ಲಿ ಅನೇಕ ವ್ಯಕ್ತಿಗಳಿರಬಹುದು ಎಂಬ ಯೋಚನೆ ಸುಳಿಯುತ್ತಿರುವಂತೆಯೇ ವೇದಿಕೆಯ ಮೇಲಿದ್ದ ಚಿಣ್ಣರು ನಮ್ಮನ್ನೆಲ್ಲ ೧೭ನೇ ಶತಮಾನದ ಮರಾಠ ಸಾಮ್ರಾಜ್ಯದ ರಾಯಗಢಕ್ಕೆ ಕೊಂಡೊಯ್ದ ರೀತಿಯು ಅತ್ಯದ್ಭುತ. ಛತ್ರಪತಿ ಶಿವಾಜಿ ಆಸ್ಥಾನದ ವಸಂತೋತ್ಸವ ಆ ಸವಿಯನ್ನು ಈ ಮಕ್ಕಳು ನಮಗೆ ಉಣಬಡಿಸಿದರು. "ಬಾರೋ ವಸಂತ" ಎಂಬ ಹಾಡಿಗೆ ಲಾವಣಿ ನೃತ್ಯ ಹಾಗು ಖಡ್ಗ ನೃತ್ಯ ಎಲ್ಲವೂ ಶ್ಲಾಘನೀಯ. ನಾಟಕದಲ್ಲಿ ತೋರಿದ ಹೀರಾಬಾಯಿ ಮತ್ತು ಅವಳ ಮಗನ ಅಗಲಿಕೆಯ ದೃಶ್ಯವು ಕಣ್ಣೀರಿಡಿಸಿದವು. ಗ್ರಾಮದಲ್ಲಿ ನಡೆದ "ಅಚ್ಚಚ್ಚು ಬೆಲ್ಲದಚ್ಚು" ಆಟ ಮತ್ತು ಉಡುಗೆ ತೊಡುಗೆಗಳು ಮನಮೋಹಕವಾಗಿದ್ದವು. ಮಗು ಬಾಲ್ಯನನ್ನು ಮೆಚ್ಚಿಸಲು ಸಕ್ಕುಬಾಯಿ ಹಾಗೂ ಪುಟ್ಟ ಹುಡುಗಿಯರು ತೋರಿದ "ತಾರೆಗಳ ತೋಟದಿಂದ" ಹಾಡಿನ ನೃತ್ಯವು ಆ ವೇದಿಕೆಗೆ ಒಂದು ಹೊಸ ರಂಗನ್ನೇ ಕೊಟ್ಟು ಮೆರುಗು ನೀಡಿತ್ತು.ಕಾಶಿಬಾಯಿಯು ಹಾಡಿದ ಸಾಂತ್ವನ ಸೂಸಿದ ಹಾಡು ಮತ್ತೆ ಕೇಳುವಂತೆ ಇದೆ. ಹೀರಾಬಾಯಿಯು ಹೆದರದೆ ಕೋಟೆ ಇಳಿದು ಮತ್ತು ಮಗನಿಗೆ ಊಟ ಮಾಡಿಸಿದ ದೃಶ್ಯ ಮನವನ್ನು ಕಲಕಿತು ಎನ್ನುವುದು ಸತ್ಯ. ಕಾವಲುಗಾರರಿಬ್ಬರು ಹೀರಾಬಾಯಿಯೊಂದಿಗೆ ನಡೆಸಿದ ಸಂಭಾಷಣೆ, ಛತ್ರಪತಿ ಶಿವಾಜಿಯ ಆಗಮನ ಮತ್ತು ನ್ಯಾಯಾಧೀಶರ ಆಜ್ಞೆಯಂತೆ ಹೀರಾಬಾಯಿ ತೋರಿದ ನಿಜವಾದ ಮಮತೆ ಮತ್ತು ಛಲ ತುಂಬಾ ಚೆನ್ನಾಗಿ ಮೂಡಿಬಂದಿತು.ಈ ಎಲ್ಲರ ಅಭಿನಯ ಪ್ರಶಂಸಾರ್ಹ.

ಇದಷ್ಟೇ ಅಲ್ಲದೆ ನಾಟಕದಲ್ಲಿ ಬಳಸಿದ ಎಲ್ಲ ವೇಷಭೂಷಣಗಳು ಮತ್ತು ದೃಶ್ಯಾವಳಿಗಳು ಬಹಳ ನೈಜವಾಗಿ ಕಂಡು ಕಣ್ಣಿಗೆ ಒಂದು ಅಪರೂಪದ ಹಬ್ಬವೇ ಆದಂತಿತ್ತು. ರಂಗ ಪರಿಕರಗಳಾದ ಕೋಟೆ, ಗುಡಿಸಲು, ಮಹಾರಾಜರ ಉಡುಗೆಗಳೆಲ್ಲವೂ ಅತ್ಯಾಕರ್ಷಕವಾಗಿದ್ದವು.

ಹೊರದೇಶದಲ್ಲಿ ಹುಟ್ಟಿ ಬೆಳೆದ ಮಕ್ಕಳಾದರೂ ಕನ್ನಡ ಭಾಷೆಯಲ್ಲಿ ಮಾತನಾಡಿ, ನಾಟಕದ ಮುಖಾಂತರ ಮರಾಠಿ ಸಂಸ್ಥಾನಕ್ಕೆ ಕರೆದೊಯ್ದ ಎಲ್ಲಾ ಮಕ್ಕಳಿಗೂ, ಅವರೊಂದಿಗೆ ಶ್ರಮಪಟ್ಟ ಶಿಕ್ಷಕ ವೃಂದಕ್ಕೂ ಮತ್ತು ಮಕ್ಕಳ ಕುಟುಂಬದವರಿಗೆಲ್ಲಾ ಅಭಿನಂದನೆಗಳು ಮತ್ತು ಹೃತ್ಪೂರ್ವಕ ಧನ್ಯವಾದಗಳು.

ಇನ್ನು ಮುಂದೆಯೂ ಈ ಬಗೆಯ ಕನ್ನಡ ಕಾರ್ಯಕ್ರಮಗಳನ್ನು ಸವಿಯೋಣ ಎಂಬುದೇ ನಮ್ಮೆಲ್ಲರ ಆಶಯ .



ಚಿತ್ರ ಕೃಪೆ : ಅನಂತರಾಮ್ ಬಿಂಡಿಗನವಿಲೆ ಮತ್ತು ಹೇಮಲತಾ ನಾಯಕ್


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಕವನ

## *ನನ್ನಮ್ಮ, ನನ್ನ ನೆಮ್ಮದಿಯ ತೊಟ್ಟಿಲು*



ಕವಯಿತ್ರಿ: ಮಾಯಾ ಏಂಜಲೋ
ಕನ್ನಡಕ್ಕೆ: ದಾಶರಥಿ ಫಟ್ಟು

ಅಮ್ಮಾ, ಇದು ನಿಜ
ನಾನು ನಿನ್ನೊಳಗೆ ಸೃಷ್ಟಿಗೊಂಡೆ ಎನ್ನುವುದು.
ಇದೂ ಸಹ ನಿಜ
ನೀನು ನನಗಾಗಿಯೇ ಸೃಷ್ಟಿಗೊಂಡೆ ಎನ್ನುವುದು.
ನಾನು
ನಿನ್ನ ಧ್ವನಿಯನ್ನು ನನ್ನ ಸ್ವತ್ತನ್ನಾಗಿಸಿಕೊಂಡೆ
ಅದು ನನ್ನನ್ನು ಸಂತಯಿಸಲು ಹದಗೊಂಡಿತು.
ನಿನ್ನ ಕೈಗಳೆರಡೂ
ತೂಗುವ ತೊಟ್ಟಿಲಾಗಿ ರೂಪುಗೊಂಡು
ನನಗೆ ಆಸರೆ ಕೊಟ್ಟಿತು.
ನಿನ್ನ ಮೈಯ ಗಂಧ
ನಾನು ಉಸಿರಾಡುವ ಗಾಳಿಗೆ ಸುಗಂಧ ಬೆರೆಸಿ
ಮನಸ್ಸಿಗೆ ಆಹ್ಲಾದ ತಂದಿತು.
ಅಮ್ಮಾ,
ಆ ಬೆಲೆಕಟ್ಟಲಾಗದ ನನ್ನ ಮೊದಲ ದಿನಗಳಲ್ಲಿ
ನನ್ನನ್ನೂ ಒಳಗೊಂಡ ವಿಶಾಲ ಬದುಕೊಂದು
ನಿನಗಿದೆಯೆಂದು ಕನಸಲ್ಲೂ ನಾನೆಣಿಸಿರಲಿಲ್ಲ.
ನನ್ನ ಮಟ್ಟಿಗೆ
ಇಡೀ ಜಗತ್ತು ನೀನೊಬ್ಬಳು ಮಾತ್ರ ಆಗಿದ್ದೆ.
ಕಾಲ ನಿರಂತರವಾಗಿ ಸರಿದು
ನಮ್ಮಿಬ್ಬರನ್ನೂ ಬೇರೆ ಬೇರೆ ಮಾಡಿತು
ಅದು ನನಗೆ ಇಷ್ಟವಿರಲಿಲ್ಲ,
ನಾನು ನಿನ್ನನ್ನು ಬಿಟ್ಟರೆ
ನೀನು ಎಂದೆಂದಿಗೂ ನನ್ನನ್ನು ಅಗಲುವೆಯೆಂದು
ಹೆದರಿದೆ.
ನನ್ನ ಆತಂಕ ನೋಡಿ
ನಿರಂತರವಾಗಿ ನಿನ್ನ ಮಡಿಲಲ್ಲಿಯೇ ನಾನಿರಲು
ಸಾಧ್ಯವಿಲ್ಲ
ಎಂದು ಹೇಳಿ ನೀನು ಮುಗುಳ್ನಕ್ಕೆ.
ಒಂದು ದಿನ ನೀನೊಬ್ಬಳೇ ಸ್ವತಂತ್ರವಾಗಿ
ನಿಲ್ಲಬೇಕು
ಆಗ ನಾನೆಲ್ಲಿ ಇರುತ್ತೇನೆ?
ಎಂದು ಹೇಳಿ ನೀನು ಮತ್ತೆ ಮುಗುಳ್ನಕ್ಕೆ.
ನಾನು ನಗಲಿಲ್ಲ.
ಮುನ್ಸೂಚನೆ ಕೊಡದೆ ನನ್ನನ್ನು ನೀನು ಅಗಲಿದೆ
ಆದರೆ ಒಡನೆಯೇ ಹಿಂತಿರುಗಿ ಬಂದೆ.
ಮತ್ತೊಮ್ಮೆ ದೂರ ಹೋದೆ ಮತ್ತು ತಕ್ಷಣವೇ
ಹಿಂದಿರುಗಿದೆ.

ಪ್ರತಿಸಲ ನನ್ನ ಬದುಕಿಗೆ ಮರಳಿ ಬಂದಾಗಲೂ
ಭರವಸೆಗಳನ್ನು ತಂದೆ
ನನ್ನ ನೆಮ್ಮದಿ ಮಾತ್ರ ಸುಲಭವಾಗಿ ಹಿಂದಿರುಗಲಿಲ್ಲ.
ನೀನು ಮತ್ತೆ ಮತ್ತೆ ನನ್ನಿಂದ ದೂರಾದೆ
ಮತ್ತೆ ಮತ್ತೆ ಹಿಂತಿರುಗಿ ಬಂದೆ
ಮೆಲ್ಲಮೆಲ್ಲನೆ ನಾನು ಆತ್ಮವಿಶ್ವಾಸ ಗಳಿಸಿಕೊಂಡೆ.
ನನ್ನನ್ನು ಅರಿತುಕೊಂಡಿದ್ದೇನೆಂದು
ನೀನು ತಿಳಿದಿದ್ದೆ
ಆದರೆ ನಾನು ನಿನ್ನನ್ನು ಹೆಚ್ಚು ಅರಿತುಕೊಂಡಿದ್ದೆ.
ನನ್ನ ಮೇಲೆ ನಿಗಾ ಇಟ್ಟಿದ್ದೇನೆಂದು
ನೀನು ತಿಳಿದಿದ್ದೆ
ಆದರೆ ನಿನ್ನನ್ನು ನಾನು ನಿರಂತರವಾಗಿ
ನನ್ನ ಕಣ್ಣುಗಳಲ್ಲಿ ಹಿಡಿದಿರಿಸಿಕೊಂಡಿದ್ದೆ.
ನಿನ್ನ ಮುಗುಳು ನಗೆಗಳನ್ನು ನೆನಪಿಟ್ಟುಕೊಳ್ಳುತ್ತಾ,
ನಿನ್ನ ಹುಬ್ಬುಗಂಟುಗಳ ಜಾಡು ಹಿಡಿಯುತ್ತಾ,
ನಿನ್ನ ಪ್ರತಿ ಕ್ಷಣವನ್ನೂ ದಾಖಲಿಸಿಕೊಂಡಿದ್ದೆ,
ನಿನ್ನ ಅನುಪಸ್ಥಿತಿಯಲ್ಲಿ
ನಿನ್ನನ್ನೇ ನಾನು ಅನುಕರಿಸಿದೆ,

ಮಂದ ಮಾರುತದಂತಹ
ನಿನ್ನ ಹಾಡಿನ ಒಡಲಿನಲ್ಲಿ
ಗದ್ಗದ ಬಿಕ್ಕಳಿಕೆ ಇರುತ್ತಿತ್ತು.
ನೀನು ಗತ್ತಿನಲ್ಲಿ ತಲೆಯೆತ್ತಿ ನಿಲ್ಲುತ್ತಿದ್ದಾಗ
ಬೆಳ್ಳಿ ಬೆಳಕು ನಿನ್ನ ಮುಖವನ್ನು ಮುದ್ದಾ ಡುತ್ತಿತ್ತು.
ನಿನ್ನ ಕೈಯ ಬೆರಳುಗಳು ನನ್ನ ಹಣೆಯನ್ನು ನೇವರಿಸಿ
ನಿನ್ನ ಬೆಚ್ಚನೆಯ ಕೈ ನನ್ನ ಭುಜವನ್ನು ಒತ್ತಿದಾಗ
ನೆಮ್ಮದಿಯ ಸಂವೇದನೆಯ ನಿಧಿ ನನಗೆ ಸಿಕ್ಕುತ್ತಿತ್ತು.
ಆರೋಗ್ಯ ಮತ್ತು ಆತ್ಮಬಲದ ತೊರೆಯೇ ಉಕ್ಕುತ್ತಿತ್ತು.

ಅಮ್ಮಾ,
ನೀನು ಎಂದೆಂದಿಗೂ ನನ್ನ ಹಿಗ್ಗುಗಳ ಒಡಲಾಗಿದ್ದೆ
ಹರ್ಷದ ಹೊಳೆವ-ಗಟ್ಟಿಗಳ ನಿಧಿಯಾಗಿದ್ದೆ
ಮುಕ್ತ ನಗೆಯ ಮಧುರ ಸಿಹಿಯಾಗಿದ್ದೆ.


ನನಗೆ ಎಲ್ಲವೂ ಗೊತ್ತಿ ದೆ,
ನಿನಗೆ ಏನೇನೂ ಗೊತ್ತಿಲ್ಲ
ಎಂದು ಅಂದುಕೊಳ್ಳುತ್ತಿದ್ದ ದಿನಗಳಲ್ಲೂ
ನಾನು ನಿನ್ನನ್ನು ಪ್ರೀತಿಸಿದೆ.

ಪ್ರಕೃತಿ ಸಹಜವಾದ ತಾರುಣ್ಯ ಮದದ
ಉತ್ತುಂಗದಲ್ಲಿ ನಿಂತು
ನೀನು ಚುರುಕಾಗಿಲ್ಲವೆಂದೂ
ತಿಳಿಗೇಡಿಯೆಂದೂ
ನಿನ್ನ ಬಗ್ಗೆ ಹಗುರಾಗಿ ಮಾತಾಡಿದೆ, ಗೇಲಿ
ಮಾಡಿದೆ.
ನಾನು ಬೆಳೆದು ದೊಡ್ಡವಳಾದ ಮೇಲೆ
ನೀನು
ಅಷ್ಟೊಂದು ತಿಳುವಳಿಕೆಯನ್ನು
ಅಷ್ಟು ಕ್ಷಿಪ್ರವಾಗಿ
ಹೇಗೆ ಗಳಿಸಿದೆಯೆಂಬುದನ್ನು ನೋಡಿ ಬೆರಗಾದೆ.

ಅಮ್ಮಾ ,
ನನಗೆ ಏನೇನೂ ಗೊತ್ತಿಲ್ಲ
ಎಂದು ತಿಳಿದುಕೊಳ್ಳುವಷ್ಟು ಅರಿವು
ಈಗ ನನಗಾಗಿದೆ.
ಅಮ್ಮಂದಿರನ್ನು ನೆನೆಸಿಕೊಳ್ಳುವ
ಈ ದಿನ
ನಿನಗೆ ನನ್ನ ಧನ್ಯವಾದಗಳು.
ನನ್ನ ಸ್ವಾರ್ಥ, ಅಜ್ಞಾನ, ಮಾಡಿದ ಗೇಲಿಗಳ
ಹೊರತಾಗಿಯೂ
ಹೊಳಪು ಕಳೆದುಕೊಂಡ
ಒಂದು ಒಡೆದ ಬೊಂಬೆಯಂತೆ
ನೀನು ನನ್ನನ್ನು ಎಸೆದುಬಿಡಲಿಲ್ಲ.
ಪ್ರೀತಿಸಲು, ಮೆಚ್ಚಿ ಶ್ಲಾಘಿಸಲು, ಸಂಭ್ರಮಿಸಲು
ಪ್ರತಿ ಕ್ಷಣವೂ ಏನನ್ನಾದರೂ ನೀನು ನನ್ನಲ್ಲಿ
ಕಾಣುತ್ತಿರುತ್ತೀ.
ಅದಕ್ಕಾಗಿ ಕೃತಜ್ಞತೆಗಳು.

ಅಮ್ಮಾ
ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ.

ಮೂಲ: **Mother, A Cradle to Hold Me**
**Maya Angelou**






ಚಿತ್ರ : ತೇಜಸ್ ಜಡಾರ್


Copyright © KCO – Brindavana

ಸಂಚಿಕೆ
೧೬
ಮೇ, ೨೦೧೮



# ಕಿಶೋರ ವಾಣಿ

## ಕಸದಲ್ಲಿ ರಸ



ಅದಿತಿ ಪ್ರಸಾದ್
ಸೌತ್ ಬ್ರನ್ಸ್ವಿಕ್ ಕನ್ನಡ ಶಾಲೆ

ನಮಸ್ಕಾರ ನಾನು ಅದಿತಿ ಪ್ರಸಾದ್. ನನಗೆ ಆರ್ಟ್ ಅಂದ್ರೆ ತುಂಬಾ ಇಷ್ಟ. ನಾನು ಕರಾಟೆ ಕ್ಲಾಸ್ ಗೆ ಹೋಗ್ತೀನಿ, ಅಲ್ಲಿ ಮರದ ಹಲಗೆ ಗಳನ್ನ ಮುರಿದು ಹಾಕ್ತೀವಿ. ಹಲಗೆ ಮೇಲೆ ನಾನು ಪೇಂಟಿಂಗ್ ಮಾಡುತ್ತೀನಿ. ಇದನ್ನ ಮಾಡೋದಕ್ಕೆ ತುಂಬಾ ಸಮಯ ತಗೋಳತ್ತೆ. ಆದರೆ ಮುಗಿದ ಮೇಲೆ ತುಂಬಾ ಖುಷಿ ಕೊಡುತ್ತೆ. ಕೆಲವು ಪೇಂಟಿಂಗ್ ನಿಮ್ಮೆಲ್ಲರ ಹತ್ತಿರ ಹಂಚಿಕೊಳ್ತಾಯಿದೀನಿ .

ನಿಮಗೆಲ್ಲಾ ಇಷ್ಟ ಆಗುತ್ತೆ ಅಂತ ಅಂದುಕೊಂಡಿದೀನಿ.




ನಾನು ಪೇಂಟ್ ಮಾಡೋದಕ್ಕಿಂತ ಮುಂಚೆ ಪೆನ್ಸಿಲ್ ಅಲ್ಲಿ ಚಿತ್ರ ಬರೆದುಕೊಳ್ತೀನಿ. ನಾನು ಅಕ್ರಿಲಿಕ್ ಪೇಂಟ್ ಉಪಯೋಗಿಸ್ತೀನಿ. ನಾಲ್ಕು ಬ್ರಷ್ ಗಳನ್ನು ಇಟ್ಕೊಂಡಿದೀನಿ. ಪೇಂಟಿಂಗ್ ಗೆ ಬೇಕಾದ ಸೈಜ್ ಬ್ರಷ್ ಉಪಯೋಗಿಸ್ತೀನಿ.

ಹಲವು ಬಣ್ಣಗಳನ್ನು ಮಿಕ್ಸ್ ಮಾಡ್ಕೊಂಡು ನನಗೆ ಬೇಕಾದ ಶೇಡ್ ತಯಾರು ಮಾಡ್ಕೋತೀನಿ. ಕನ್ಸ್ಟ್ರಕ್ಷನ್ ಪೇಪರ್ ಅಥವಾ ಮರದ ಮೇಲೆ ಪೇಂಟ್ ಕೂಡ ಮಾಡಬಹುದು. ನೀವು ಮಾಡಿದ ಪೇಂಟಿಂಗ್ ಎಲ್ಲ ನಮ್ಮ ಹತ್ರ ಹಂಚಿಕೊಳ್ತೀರಾ ಅಲ್ವ?


## ನಾನು ಮತ್ತು ಮಿಕ್ಕಿ



ಸಿರಿ ತೈಲಗೇರಿ
ಈಸ್ಟ್ ವಿಂಡ್ಸರ್ ಕನ್ನಡ ಶಾಲೆ


**ಮಿ**ಕ್ಕಿ ನಮ್ಮ ನಾಯಿಮರಿ. ಮಿಕ್ಕಿ ಅಂದರೆ ನನಗೆ ತುಂಬಾ ಪ್ರೀತಿ. ಯಾವಾಗಲು ನನ್ನ ಹಿಂದೇನೆ ಇರುತ್ತಾನೆ. ನಾನು ಶಾಲೆಯಿಂದ ಮನೆಗೆ ಬಂದಾಗ ಅವನಿಗೆ ಬಹಳ ಖುಷಿಯಾಗುತ್ತೆ. ಮಿಕ್ಕಿಗೆ ಕನ್ನಡದಲ್ಲಿ ಮಾತನಾಡಿದರೆ ಅರ್ಥವಾಗುತ್ತದೆ. ನಾವು ಏನು ಊಟ ಮಾಡುತ್ತೀವೋ, ಮಿಕ್ಕಿಗೂ ಅದೇ ಊಟ ಬೇಕು. ಆದರೆ ನಾನು ಅವನಿಗೆ ಬರಿ ಡಾಗ್ ಫುಡ್ ಕೊಡಬೇಕು. ಮಿಕ್ಕಿ ಗೆ ಮಕ್ಕಳನ್ನು ಕಂಡರೆ ತುಂಬಾ ಇಷ್ಟ. ಮಕ್ಕಳೂ ಅವನನ್ನು ಮುದ್ದು ಮಾಡಲು ಇಷ್ಟ ಪಡುತ್ತಾರೆ. ಮಿಕ್ಕಿ ಗೆ ಕೆಲವು ಟ್ರಿಕ್ಸ್ ಬರುತ್ತೆ - ಸಿಟ್, ಸ್ಟೇ ಮತ್ತು ನಮಸ್ತೆ ಮಾಡುತ್ತಾನೆ. ನಾವು ವೆಕೇಷನ್ ಗೆ ಹೋದರೆ, ಅವನಿಗೆ ಇಷ್ಟವಾಗುವುದಿಲ್ಲ. ಯಾರೋ ಡಾಗ್ ಸಿಟ್ಟರ್ ಮನೆಯಲ್ಲಿ ಬಿಡುತ್ತೀವಿ ಎಂಬ ಭಯ. ನಾವು ದಿನ ಮಿಕ್ಕಿನ ಎರಡು-ಮೂರು ಬಾರಿ ವಾಕಿಂಗ್ ಕರೆದುಕೊಂಡು ಹೋಗುತ್ತೀವಿ. ಮನೆಯಲ್ಲಿ ಒಂದು ನಾಯಿ ಇದ್ದರೆ, ನೀವು ಆರೋಗ್ಯವಾಗಿರುತ್ತೀರಿ. ನಿಮ್ಮ ಮನೆಗೂ ಒಂದು ನಾಯಿಮರಿ ತರುತ್ತೀರಾ?

●




ಸಾರ್ಥಕ್ ರಾವ್, ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆ

ಪೂರ್ವಿ ಶೇಖರ್, ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆ





*"ಈ ಮಕ್ಕಳ ಬರವಣಿಗೆಗಳು ಮತ್ತು ಚಿತ್ರಗಳು ನಮ್ಮ ಬೃಂದಾವನ ವಾಣಿ ಸಂಚಿಕೆಗಳಲ್ಲಿ ಪ್ರಕಟಿತವಾಗುವುದು ಒಂದು ಸಂತಸಕರ ಹಾಗೂ ಶ್ಲಾಘನೀಯ ಸಂಗತಿ. ಇನ್ನೂ ಹೆಚ್ಚು ಮಕ್ಕಳು ಅವರ ಭಾವನೆಗಳನ್ನು ಬರಹ ರೂಪಕ್ಕೆ ತರಲಿ ಮತ್ತು ತಮ್ಮದೇ ಆದ ಶೈಲಿಯಲ್ಲಿ ಬರೆದ ಎಲ್ಲಾ ಪುಟಾಣಿಗಳಿಗೂ ಒಂದು ಚಪ್ಪಾಳೆ ಬರಲಿ ಎಂದು ಓದುಗರಲ್ಲಿ ಸವಿನಯ ಪ್ರಾರ್ಥನೆ." ...ಸಂಪಾದಕ ವರ್ಗ.*


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕ್ರೀಡಾ ವಾಣಿ

### *"ತಪ್ಪು ಮಾಡದವ್ರು ಯಾರವ್ರೇ? ತಪ್ಪೇ ಮಾಡದವ್ರು ಎಲ್ಲವ್ರೇ ?*



ಉಮಾ ಮೂರ್ತಿ

ಕಳೆದೆರಡು ತಿಂಗಳ ಹಿಂದೆ ನನ್ನ ಸ್ನೇಹಿತೆಯೊಬ್ಬಳನ್ನು ಭೇಟಿಯಾದಾಗ ಉಭಯಕುಶಲೋಪರಿ ವಿಚಾರಿಸುತ್ತಾ ಸುಮ್ಮನೆ ಕೇಳಿದೆ, "ನಿನ್ನ ಮಕ್ಕಳ ರೊಬೊಟಿಕ್ಸ್ ಹೇಗೆ ನಡೆಯುತ್ತಿದೆ? District ಅಥವಾ regional ಸ್ಪರ್ಧೆಗೆ ಹೋಗಿದ್ದರಲ್ಲವೇ?" ಎಂದಾಗ, ನನ್ನ ಸ್ನೇಹಿತೆ ರೊಬೊಟಿಕ್ಸ್ ವಿಷಯವೊಂದನ್ನು ಬಿಟ್ಟು ಬೇರೆ ಯಾವುದನ್ನಾದರೂ ಕೇಳು ಎಂದಳು. ಯಾರಾದರೂ ಹೇಳುವುದಿಲ್ಲ ಎಂದಾಗ ಕೇಳಲೇಬೇಕೆಂಬ ಕುತೂಹಲ ಎಲ್ಲರಂತೆಯೇ ನನಗೂ. ಮತ್ತೊಮ್ಮೆ ಕೇಳಿದಾಗ ಬೇಸರದಿಂದ ಅವಳ ಶಾಲೆಯ ರೊಬೊಟಿಕ್ಸ್ ರಾಮಾಯಣವನ್ನು ನಿರೂಪಿಸಿದಳು.

ಅವಳ ಮಕ್ಕಳ ಶಾಲೆಯಿಂದ ಎರಡು ತಂಡಗಳು ಮುಂದಿನ ಹಂತಕ್ಕೆ ಅರ್ಹತೆ ಪಡೆದಿದ್ದವು. ಸ್ಪರ್ಧೆಯ ಸಮಯದಲ್ಲಿ ತಂಡಗಳನ್ನು ಆರಿಸುವಾಗ ಒಬ್ಬ ವಿದ್ಯಾರ್ಥಿ ತೆಗೆದುಕೊಂಡ ನಿರ್ಧಾರವು ತಪ್ಪಾಗಿ, ಶಾಲೆಯ ಇನ್ನೊಂದು ತಂಡ ಮುಂದಿನ ಹಂತ ತಲುಪಲು ವಿಫಲವಾಯಿತಂತೆ; ಇದರಿಂದ ಕುಪಿತರಾದ ಪೋಷಕರು ಆ ವಿದ್ಯಾರ್ಥಿಯ ವಿರುದ್ಧ ದೊಡ್ಡ ಯುದ್ಧವನ್ನೇ ಸಾರಿದರಂತೆ. ಶಾಲೆಗೆ ಹೊಲಸು ರಾಜಕೀಯವನ್ನು ತಂದು ಮಕ್ಕಳ ಮಧ್ಯೆ ದ್ವೇಷದ ಬೀಜವನ್ನು ಬಿತ್ತಿದ್ದಲ್ಲದೇ, ಎಲ್ಲೆಂದರಲ್ಲಿ sledging ಮಾಡಲು ಪ್ರಾರಂಭಿಸಿದರಂತೆ. ಕಂಡು ಕೇಳರಿಯದ ಇಂತಹ ಪೋಷಕರನ್ನು ನೋಡಿ ಕೋಚ್ ಹಾಗು ಶಾಲೆಯ ಸಿಬ್ಬಂದಿ ವರ್ಗ ಮಧ್ಯ ಪ್ರವೇಶ ಮಾಡಿ ಯುದ್ಧ ವಿರಾಮಕ್ಕೆ ಪ್ರಯತ್ನಿಸಿದರಂತೆ. ಗೊತ್ತಿಲ್ಲದೇ ತಪ್ಪು ಮಾಡಿದ ಆ ವಿದ್ಯಾರ್ಥಿಯ ಮನಸ್ಥಿತಿ ಹೇಗಿರಬೇಡ, ಆ ಮಗು ಏನಾದರೂ ಹೆಚ್ಚು ಕಡಿಮೆ ಮಾಡಿಕೊಂಡರೆ ಯಾರು ಹೊಣೆ? ಹೆತ್ತವರು ಮಕ್ಕಳಿಗೆ ಯಾವ ರೀತಿಯಲ್ಲಿ ಮಾದರಿಯಾಗುತ್ತಿದ್ದಾರೆ ಎಂದು ಬೇಸರಿಸಿಕೊಂಡಳು. ಅಲ್ಲದೆ ಇದನ್ನೆಲ್ಲಾ ನಮ್ಮ ಭಾರತೀಯ ಮೂಲದವರೇ ಮಾಡುತ್ತಿರುವುದು ಮತ್ತೂ ನಾಚಿಕೆಯ ಸಂಗತಿ ಎಂದಾಗ ನನಗೂ ಬೇಸರವಾಯಿತು. ದೊಡ್ಡವರಾದ ನಾವೇ ಎಷ್ಟೊಂದು ತಪ್ಪುಗಳನ್ನು ಮಾಡಿ ಅದಕ್ಕೆ ಸಮಜಾಯಿಷಿ ಕೊಟ್ಟು ಏನೂ ನಡದೇಯಿಲ್ಲ ಎನ್ನುವಂತೆ ಮುಂದುವರೆಯುತ್ತೇವೆ. ಹಾಗಿದ್ದಲ್ಲಿ ೧೪ ವರುಷದ ಮಗುವಿನ ತಪ್ಪು ನಿರ್ಧಾರ ಸಹಿಸಲು ಅಷ್ಟೊಂದು ಕಷ್ಟವಾಯಿತೇ ಹೆತ್ತವರಿಗೆ?.

ಇತ್ತೀಚೆಗೆ ಸೌತ್ ಆಫ್ರಿಕಾ ಹಾಗು ಆಸ್ಟ್ರೇಲಿಯಾ ನಡುವಿನ ೩ನೇ ಟೆಸ್ಟ್ ಪಂದ್ಯದ ೩ ನೇ ದಿನದ ಆಟದಲ್ಲಿ ಸೌತ್ ಆಫ್ರಿಕಾ ೧೦೦ ರನ್ ಗಳ ಮುನ್ನಡೆ ಸಾಧಿಸಿತ್ತು . ಸದಾ ಕ್ರಿಕೆಟ್ ಸಾಮ್ರಾಜ್ಯದ ಅಧಿಪತ್ಯ ಸಾಧಿಸುವ ಹಠವಿರುವ ಆಸ್ಟ್ರೇಲಿಯಾ ವಿಕೆಟ್ ತೆಗೆಯಲಾರದೆ ಹಿನ್ನಡೆಯ ಅನುಭವ ಪಡೆಯಲಾರಂಭಿಸಿತು.ತಂಡದ ಕಿರಿಯ ಆಟಗಾರ ಕ್ಯಾಮೆರಾನ್ ಬ್ಯಾಂಕ್ರಾಫ್ಟ್ ೩೦ ಕ್ಯಾಮೆರಾಗಳನ್ನು ಮರೆತು, ಚೆಂಡನ್ನು ವಿರೂಪಗೊಳಿಸಿ ಕಪಟ ಆಟಕ್ಕೆ ಮುಂದಾಗಿದ್ದು ವಿಶ್ವ ಕ್ರಿಕೆಟ್ ಗೆ ನಂಬಲು ಅಸಾಧ್ಯವಾಯಿತು. ಮೊದಲಿನಿಂದಲೂ sledging ಗೆ ಹೆಸರಾಗಿರುವ ಆಸ್ಟ್ರೇಲಿಯಾ ಈ ಮಟ್ಟದ ಮೋಸದ ಆಟಕ್ಕೆ ಕಾರಣವಾದರೂ ಏನು? ಕಿರಿಯ ಆಟಗಾರ ಗೊತ್ತಿಲ್ಲದೇ ಮಾಡಿದ ತಪ್ಪೇ? ಸಂಜೆ ಪತ್ರಿಕಾ ಗೋಷ್ಠಿಯಲ್ಲಿ, ಚೆಂಡು ವಿರೂಪಗೊಳಿಸಿ ಆಟವನ್ನು ನಮ್ಮ ಕಡೆಗೆ ಹೇಗಾದರೂ ತಿರುಗಿಸಿಕೊಳ್ಳಬೇಕು ಎಂದು ನಾಯಕರೇ ತೀರ್ಮಾನಿಸಿದ್ದರೆಂಬ ವಿಷಯ ಸ್ಟೀವ್ ಸ್ಮಿತ್ ಅರುಹಿದಾಗ, ಆಸ್ಟ್ರೇಲಿಯಾ ಕ್ರಿಕೆಟ್ ಗೆ ಹೃದಯಾಘಾತ. ಪ್ರಧಾನ ಮಂತ್ರಿಯಿಂದ ಹಿಡಿದು ೧೦ ವರುಷದ ಪುಟ್ಟ ಬಾಲಕರು ಸಹಿಸಲಾರದೇ ಹೋದರು. ಗೊತ್ತಿದ್ದೂ ತಪ್ಪು ಮಾಡಿದಲ್ಲಿ ಶಿಕ್ಷೆ ಅನುಭವಿಸಲೇಬೇಕು ಎಂದು ಯುವ ಆಟಗಾರರಿಗೆ ಅರಿವಾಯಿತು. ಇಷ್ಟೆಲ್ಲಾ ಆದಮೇಲೆಯೂ ಆಸ್ಟ್ರೇಲಿಯಾ ಕ್ರೀಡಾಪ್ರೇಮಿಗಳು ತಪ್ಪು ಒಪ್ಪಿಕೊಂಡು ಕ್ಷಮೆ ಯಾಚಿಸಿದ ಆಟಗಾರರಿಗೆ ಇನ್ನೊಂದು ಅವಕಾಶ ಕೊಡಲು


ಈ ಮೇಲಿನ ಎರಡೂ ಸಂದರ್ಭಗಳನ್ನು ತುಲನೆ ಮಾಡಿ ನಮ್ಮ ಬಾಲ್ಯವನ್ನು ನೋಡಿದರೆ, ಹೆಚ್ಚಿನ ಸಮಯ ನಾವು ಗುಂಪಿನಲ್ಲಿ ಗೋವಿಂದರಾಗಿದ್ದೆವು ಎಂದೆನಿಸುತ್ತದೆ. ಹಾಗೊಮ್ಮೆ ಹೀಗೊಮ್ಮೆ ಸೋತಿದ್ದಕ್ಕೆ ಅತ್ತಾಗ, ಅಪ್ಪ ೫ ರೂಪಾಯಿ ಕೊಟ್ಟು ಏನಾದರೂ ತಗೋ ಎನ್ನುತ್ತಿದ್ದರು. ನಾನು ಒಂದು ಅಮರ ಚಿತ್ರ ಕಥೆ, ಸೋಡಾ, ಶುಂಠಿ ಚಾಕಲೇಟ್ ಖರೀದಿಸಿ ಸೋತಿದ್ದೇ ಒಳ್ಳೆದಾಯಿತು ಅಂದುಕೊಳ್ಳುತ್ತಿದ್ದೆ. ನಮ್ಮ ಅನುಭವ ಈ ಪೀಳಿಗೆಗೆ ಹೋಲಿಸಲು ಸಾಧ್ಯವಿಲ್ಲವೆಂದು ನನ್ನ ಮಕ್ಕಳ ಅಭಿಪ್ರಾಯ ಕೇಳಿದಾಗ, "ಹೆತ್ತವರು ಅತಿರೇಕವಾಗಿ ಭಾಗವಹಿಸಿ ಮಕ್ಕಳಿಂದ ಕಲಿಕೆಯ ಆನಂದವನ್ನು ತೆಗೆಯುವುದು ಸರಿಯಲ್ಲ, ಹಾಗೆಯೇ ಮೋಸ ಮಾಡಿ ಆಡುವುದು, ಶ್ರಮವಹಿಸಿ ಆಡುತ್ತಿರುವ ಎದುರಿನ ತಂಡಕ್ಕೆ ಮಾಡುವ ಅನ್ಯಾಯ" ಎಂದು ಸುಲಭದಲ್ಲಿ ಹೇಳಿದರು.

ಹೌದಲ್ಲವೇ ಕಷ್ಟಪಟ್ಟು ಕಲಿತ ವಿದ್ಯೆಯನ್ನು ಸಾಣೆ ಹಿಡಿಯಲು ಹೊರಟ ವಿದ್ಯಾರ್ಥಿಗಳು, ಸ್ಪರ್ಧಿಸುವಾಗ ಅದರ ಆನಂದವನ್ನು ಹೇಗೆ ಅನುಭವಿಸಬೇಕು ಎಂದು ಹೇಳಿಕೊಡಬೇಕಲ್ಲವೇ? ಸೋತರೂ ಅದನ್ನು ಹೇಗೆ ಸ್ವೀಕರಿಸಬೇಕು ಎಂದು ಅವರ ಶಾಲಾ ಜೀವನದಲ್ಲೇ ಹೇಳಿಕೊಟ್ಟರೆ ಆಸ್ಟ್ರೇಲಿಯಾ ಆಟಗಾರರು ಹಿಡಿದ ಮಾರ್ಗದಿಂದ ಮಕ್ಕಳು ದೂರವಿರಬಹುದು. ಸೋತರೂ ಹಿಂಜರಿಯದೆ ಮರಳಿ ಯತ್ನವ ಮಾಡುವುದನ್ನು ರೂಢಿಸಿ ಕೊಳ್ಳಬಹುದು. ಹೆತ್ತವರಾದ ನಾವು ನಮ್ಮ ಇತಿಮಿತಿಯ ಗೆರೆಯನ್ನು ಅರಿತು ಕೊಂಡರೆ ಸಮಾಜಕ್ಕೆ ಉತ್ತಮ ಪ್ರಜೆಗಳನ್ನೇ ನೀಡಬಹುದು.


**ನುಡಿಮುತ್ತು**

**"ಬಾಳ್ವೆ ಇರುವುದು ಕಲಿಯುವುದಕ್ಕೆ,**
**ಕಲಿತು ತಿದ್ದಿಕೊಳ್ಳುವುದಕ್ಕೆ, ತಿದ್ದಿ ತೃಪ್ತಿ ಪಡುವುದಕ್ಕೆ.**
**ಬಾಳ್ವೆ ಇರುವುದು ಬದುಕುವುದಕ್ಕಾಗಿ,**
**ಬದುಕಿನಿಂದ ಬೆಳೆಯುವುದಕ್ಕಾಗಿ."**

**_ಡಾ. ಶಿವರಾಮ ಕಾರಂತ**




### ನಾವು ನೋಡಿದ ಸಿನೆಮಾ











Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಹಾಸ್ಯ

### ಹನ್ನೆರಡು ಚೂರಿಗಳು ಹಾಗೂ ಡಿಶ್ ವಾಷರ್



ಉದ್ಯಾವರ
ಚಂದ್ರಶೇಖರ್ ಆಚಾರ್

ನನ್ನ ಅಮೇರಿಕಾ ಸಂಗಾತಿಗಳು, ಹನ್ನೆರಡು ಚೂರಿಗಳು ಹಾಗೂ ಡಿಶ್ ವಾಷರ್!

ಎಷ್ಟೋ ಸಲ ಅಮೇರಿಕಕ್ಕೆ ಬಂದಿದ್ದೇನೆ. ಇಲ್ಲಿಯ ಅಡುಗೆಮನೆಯಲ್ಲಿ ಚೂರಿ ಮತ್ತು ಡಿಶ್ ವಾಷರ್ ನ ಉಪಯೋಗವನ್ನು ಕಂಡು ಆಶ್ಚರ್ಯಪಟ್ಟಿದ್ದೇನೆ. ಆದ್ದರಿಂದ ಅವುಗಳ ಮೇಲೆ ಪುಟ್ಟ ಕಥೆಗಳು.

ಈಗ ಮೊದಲು ಚೂರಿಯ ಕಥೆ.

ಈಗ ಚೂರಿಯ ಕಥೆ ಏಕೆ ನನ್ನ ತಲೆಯಲ್ಲಿ ಉತ್ಪನ್ನವಾಯಿತು ಎಂದು ನಿಮಗೆ ಗೊತ್ತೇ? ಇದಕ್ಕೆ ಮೂಲ ಕಾರಣ ಅಮೇರಿಕದಲ್ಲಿ ನನ್ನ ಮಗಳ ಮನೆಯಲ್ಲಿ ನನ್ನ ಜೀವನದ ಸಂಗಾತಿ ಆಗಿ ನನ್ನ ಟೈಮ್ ಪಾಸ್ ಮಾಡಿಸುತ್ತಿದ್ದ ಡಿಶ್ ವಾಷರ್. ನಾವು ಇಲ್ಲಿ ಬಂದ ಮೇಲೆ ಕಿಚನ್ ನಲ್ಲಿ ಅಡುಗೆ ಮಾಡುವುದು ನನ್ನ ಹೆಂಡತಿಯ ಮುಖ್ಯ ಕೆಲಸವಾಯಿತು. ನನ್ನ ಮಗಳು ಆಗ ನನ್ನ ಪತ್ನಿಗೆ ಚೂರಿಯನ್ನು ಹೇಗೆ ಉಪಯೋಗಿಸಬೇಕು ಅಂತ ಸ್ಪೆಷಲ್ ಆಗಿ ಹೇಳಿ ಕೊಟ್ಟಿರಬೇಕು. ಅಂದ ಹಾಗೆ ಡಿಶ್ ವಾಷರ್ ನಲ್ಲಿ ಪಾತ್ರೆ ತೊಳೆಯುವ ಕೆಲಸವನ್ನು ನಾನಾಗಿ ವಹಿಸಿಕೊಂಡೆ. ಏನಾದರೂ ಕೆಲಸ ಬೇಕಲ್ಲ ಹೊತ್ತು ಕಳೆಯಲು.

ಮೊದಲ ದಿನ ರಾತ್ರಿ ಒಂದೊಂದೇ ಪಾತ್ರೆಗಳನ್ನು, ಲೋಟಗಳನ್ನು, ಪ್ಲೇಟುಗಳನ್ನು, ಸೌಟುಗಳನ್ನುಗಳನ್ನು ಚೆನ್ನಾಗಿ ಸಾಬೂನು ಹಾಕಿ ತಿಕ್ಕಿ ತೊಳೆದು ಡಿಶ್ ವಾಷರಗೆ ಹಾಕುತ್ತಿದ್ದೆ. ಆಗ ಸಿಂಕನಲ್ಲಿ ನನಗೆ ಕಂಡಿದ್ದು ಹನ್ನೆರಡು ಚೂರಿಗಳು. ಏಕೆ ಅಷ್ಟು ಚೂರಿಗಳು ಅಂತ ಪತ್ನಿಯನ್ನು ಕೇಳಿದೆ. ಅವಳು"ತೊಳೆಯುವುದಕ್ಕೆ" ಅಂದಳು. ನಾನು ಕೇಳಿದೆ "ಅಡುಗೆಗೆ ಒಂದು ಚೂರಿ ಸಾಲದೆ ಮರಾಯ್ತಿ?". ಅವಳ ಉತ್ತರ "ನಿಮ್ಮ ಮಗಳು ಮಾಧವಿಯನ್ನು ಕೇಳಿ. ಅವಳು ನನಗೆ ಮೊದಲನೇ ದಿನವೇ ಚೂರಿಯನ್ನು ಹೇಗೆ ಪ್ರಯೋಗಿಸಬೇಕು ಅಂತ ಅಮೇರಿಕನ್ ಅಡುಗೆ ಕೋಚಿಂಗ್ ಕ್ಲಾಸ್ ನಲ್ಲಿ ಹೇಳಿಕೊಟ್ಟಿದ್ದಾಳೆ"


ನಮ್ಮೂರಲ್ಲಿ ಒಂದು ದಿನದ ಅಡುಗೆಗೆ ಅದೆಷ್ಟೋ ತರಕಾರಿ ಅಥವಾ ಹಣ್ಣುಗಳನ್ನು ಕತ್ತರಿಸುವುದಿರಲಿ, ನಾವು ಬಳಸುವ ಚೂರಿ ಒಂದೆ. ಹಾಗಾದರೆ ಅಮೇರಿಕದಲ್ಲೇಕೆ ದಿನಕ್ಕೆ ಒಂದು ಡಜನ್ ಚೂರಿಗಳು ಅಡುಗೆ ಮನೆಯಲ್ಲಿ ಡಿಶ್ ವಾಷರ್ ನ ಒಳಗೆ ನುಸುಳುತ್ತಿದೆ ಅನುದಿನ ರಾತ್ರಿ? ಗೂಗಲ್ ಸರ್ಚ್ ಗೆ ಹೋಗಿ ಹುಡುಕಿದೆ. ಆಗ ತಿಳಿಯಿತು ಕಾರಣವಾದಕೆ. ಎಲ್ಲ ಅಮೇರಿಕನ್ಸ್ ದಾನ ಶೂರ ಕರ್ಣನ ವಂಶದವರು. "ತೊಟ್ಟ ಬಾಣವನ್ನು ಇನ್ನೊಮ್ಮೆ ತೊಡುವುದಿಲ್ಲ" ಎನ್ನುವುದು ಕರ್ಣನು ಕುಂತಿಯ ಎದುರು ಮಾಡಿದ ಪ್ರಥಮ ಪ್ರತಿಜ್ಞೆ. ಅದು ಇಲ್ಲಿ "ಹಿಡಿದ ಚೂರಿಯನ್ನು ಇನ್ನೊಮ್ಮೆ ಹಿಡಿಯುವುದಿಲ್ಲ" ಎಂದು ಕಾಲಕ್ಕೆ ತಕ್ಕ ಬದಲಾವಣೆ ಆಗಿದೆ.

ಒಂದು ಚೂರಿಯ ಪ್ರಯೋಗ ಒಮ್ಮೆ ಮಾತ್ರ. ಆಮೇಲೆ ಅದರ ಉಪಯೋಗವಿಲ್ಲ. ಅದು ಸೀದಾ ಡಿಶ್ ವಾಷರ್ ಒಳಗೆ. ಅಡುಗೆಯಲ್ಲಿ ಮೂರು ತರಕಾರಿಗಳು, ಮೂರು ತರದ ಸೊಪ್ಪುಗಳು, ಮೂರು ತರದ ಹಣ್ಣುಗಳು ಹಾಗೂ ನೀರುಳ್ಳಿ, ಬೆಳ್ಳುಳ್ಳಿ ಮತ್ತು ಶುಂಠಿ ಅಂತ ಇಡೀ ದಿನದಲ್ಲಿ ತುಂಡರಿಸಬೇಕಾದರೆ, ಹನ್ನೆರಡು ಚೂರಿಗಳು ಬೇಕು. "ಹಿಡಿದ ಚೂರಿಯನ್ನು ಇನ್ನೊಮ್ಮೆ ಹಿಡಿಯುವುದಿಲ್ಲ", ತಿಳಿಯಿತಲ್ಲವೇ?

ಇನ್ನು "ಬಾಣದ ಇಟ್ಟ ಗುರಿಯನ್ನು ಇನ್ನೊಮ್ಮೆ ಇಡುವುದಿಲ್ಲ" ಎಂಬುದು ಕರ್ಣನ ಎರಡನೇ ಪ್ರತಿಜ್ಞೆ.

ಅಂದರೆ ಇಲ್ಲಿ "ಪ್ರತಿಯೊಂದು ಚೂರಿಯ ನಿಶ್ಚಯಿಸಿದ ಗುರಿಯನ್ನು ಮತ್ತೆಂದೂ ಬದಲಿಸುವುದಿಲ್ಲ" ಎಂದು ಕಾಲಕ್ಕೆ ತಕ್ಕ ಬದಲಾವಣೆ. ಪ್ರತಿಯೊಂದು ಚೂರಿಗೆ ಅದರ ಗುರಿಯನ್ನು ನಿರ್ಧರಿಸಲಾಗಿದೆ. ಅದರಲ್ಲಿ ಎಂದೆಂದಿಗೂ ಬದಲಾವಣೆ ಇಲ್ಲ. ಅಂದರೆ ಹಣ್ಣುಗಳಿಗೆ ಉದ್ದ ಚೂರಿ. ಸೊಪ್ಪಿಗೆ ಗಿಡ್ಡ ಚೂರಿ, ತರಕಾರಿಗೆ ಗರಗಸ ಚೂರಿ, ನೀರುಳ್ಳಿ, ಶುಂಠಿ ಹಾಗೂ ಬೆಳ್ಳುಳ್ಳಿಗೆ ಅರ್ಧ ಚಂದ್ರಾಕೃತಿಯ ಚೂರಿ ಹೀಗಾಗಿ ಅಮೇರಿಕದಲ್ಲಿ ಒಂದು ದಿನದ ಅಡುಗೆಗೆ ಒಂದು ಡಜನ್ ಚೂರಿಗಳ ಬಳಕೆಯಾಗುತ್ತದೆ. ಈ ಎಲ್ಲಾ ಸಂಗತಿ ನನಗೆ ತಿಳಿದದ್ದು ಗೂಗಲ್ ಸರ್ಚ್ ನಿಂದ. ಹಾಗಾಗಿ ನನ್ನಿಂದ ಗೂಗಲ್ ಸರ್ಚಗೆ ಧನ್ಯವಾದಗಳು. ಹಾಗೂ ಚೂರಿ ವ್ಯಾಪಾರಿಗಳಿಂದ ದಾನ ಶೂರ ಕರ್ಣನಿಗೆ ಧನ್ಯವಾದಗಳು.

ಅಂದ ಹಾಗೆ ಅಮೇರಿಕನ್ ಡಿಶ್ ವಾಷಿಂಗ್ ಮೆಷಿನ್ ನನ್ನ ಪ್ರಕಾರ ವಾಷಿಂಗ್ ಮೆಷಿನ್ ಅಲ್ಲ. ಅದು ಪಾತ್ರೆ ಬಿಸಿ ಮಾಡಿ ಒಣಗಿಸುವ ಯಂತ್ರ. ಏಕೆಂದರೆ ಪಾತ್ರೆ ತೊಳೆಯದೆ, ಬ್ರಶ್ ಹಾಕದೆ ಈ ಯಂತ್ರಕ್ಕೆ ಪಾತ್ರೆಗಳನ್ನು ಹಾಕಿದರೆ ಅಂಟಿಕೊಂಡ ಕರಟಿದ ದೋಸೆ, ಚಾ ಮಾಡಿ ಕರಟಿದ ಪುಡಿ ಅಥವಾ ಪಾತ್ರೆಗೆ ಅಂಟಿಕೊಂಡ ಅನ್ನ... ಯಾವುದೂ ಕ್ಲೀನ್ ಆಗುವುದೇ ಇಲ್ಲ. ಆದರೆ ಬಿಸಿ ಬಿಸಿ ಒಣಗಿದ ಪಾತ್ರೆಗಳನ್ನು ಹೊರ ತೆಗೆಯುವಾಗ ಬಹಳ ಖುಷಿಯಾಗುತ್ತದೆ. ಆದ್ದರಿಂದ ಈ ಯಂತ್ರವನ್ನು ನಾನು ಡಿಶ್ ಹೀಟಿಂಗ್ ಅಂಡ್ ಡ್ರೈಯಿಂಗ್ ಮೆಷಿನ್ ಅಂತ ಇಂದಿನಿಂದ ಕರೆಯುತ್ತೇನೆ. ಆಗದೆ?



ಹೇಗಿದೆ ನನ್ನ ಚೂರಿಯ ಕಥೆ ಹಾಗೂ ಡಿಶ್ ವಾಷರ್ ಕಥೆ?



## ಕವನ



ಶ್ರೀವಿದ್ಯಾ ಪ್ರಶಾಂತ್

### ನವ ವಸಂತ

ಹಳೇ ಬೇರು - ಹೊಸ ಚಿಗುರು
ಮತ್ತೆ ವಸಂತನ ತೇರು
ನವ ಭಾವಗಳ - ಹೊಸ ಆಸೆಗಳ
ಸಮಾಗಮದ ಹೊನಲು

ಜಗವಿದು ಬಣ್ಣದ ನೆಲೆಯು
ವಿನೂತನ ಬದುಕಿನ ಸೆಲೆಯು
ಅನಂತ ಚೇತನದ ಸಿರಿಯು
ಬಾಳೇ ನಲ್ಮೆಯ ನಿಧಿಯು

ಸುತ್ತಲೂ ಹಸಿರ ತೋರಣ
ಹೂವು-ದುಂಬಿಗಳ ಬೃಂದಾವನ
ಓ ವಸಂತ ನಿನಗಿದೋ
ಅನಂತ ನಮನ
ಮಿಡಿದಿದೆ ಎಲ್ಲೆಲ್ಲೂ
ಶುಭಕಾಮನ...


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಾಸ್ಯ

## ಮಾತಾ-ಮಾರ್ಫೋಸಿಸ್



ಅನಿಲ್ ಕುಂಬಾರ

"ಒಂದು ದಿನಕ್ಕೂ ಕಾಟ ಕೊಡ್ಲಿಲ್ಲ, ಪುಣ್ಯಾತಗಿತ್ತಿ, ನಮ್ಮತ್ತೆ" ಅನ್ನೋ ಮಾತು, ಆಗತಾನೆ ಮಹಡಿಯಿಂದ ಕೆಳಗಿಳಿದು ಬಂದು ಇನ್ನೇನು ಒಳಗೆ ಕಾಲಿಡಬೇಕು ಅಂತಿದ್ದ ನನ್ನ ಕಿವಿಗೆ ಬಿತ್ತೋ ಇಲ್ವೋ, ಅಲ್ಲೇ ತಟಸ್ಥನಾಗಿಬಿಟ್ಟೆ.

ಅಮೆರಿಕಾಗೆ ಬಂದು ಎರಡೇ ವರ್ಷಕ್ಕೆ ಒಂಟಿ ಜೀವನ ಸಾಕು ಅನ್ನಿಸಿ, ನಮ್ಮೂರಿಗೆ ಹೋಗಿ, ಸಂಗಾತಿ ಅರಸಿದ್ದರೂ, ಆ ವರ್ಷ ಮದುವೆ, ಮಧುಚಂದ್ರ ಅನ್ನೋ ಸವಿ ಸಮಯದಲ್ಲಿ, ಮದರಾಸು ಅನ್ನೋ ಕರಡಿ (ವೀಸಾ) ಪಳಗಿಸೋ ಕಾರ್ಯಕ್ರಮ ಬೇರೆ ಇತ್ತು. ಹೀಗಾಗಿ, ನನ್ನರ್ಧಾಂಗಿಗೆ ನನ್ನ ಹೆತ್ತವರ ಜೊತೆ ಹೆಚ್ಚು ಸಮಯ ಕಳೆಯಕ್ಕೆ ಆಗಿರ್ಲಿಲ್ಲ. ನಮ್ಮ ಮುಂದಿನ ವರ್ಷದ ಪ್ರವಾಸದಲ್ಲಿ ಈ ಅತ್ತೆ-ಸೊಸೆಯ ಒಡನಾಟದ ಕೌತುಕ ಪ್ರಸಂಗ.

"ಏನು ಮಾಡಿದ್ದಾರೆ ನಿಮ್ಮಮ್ಮ, ಒಂದು ದಿನ ಕೂರಿಸಿ ಊಟ ಹಾಕ್ಲಿಲ್ಲ, ಬಾಗಿನ ಕೊಡ್ಲಿಲ್ಲ" ಅಂತೆಲ್ಲಾ ಚಿಕ್ಕೋನಿದ್ದಾಗ ನಮ್ಮನೇಲೇ ಕೇಳಿದ್ದ ನೆನಪೇ ಅಥವಾ ಯಾವುದಾದ್ರೂ ಬಕೆಟ್-ಗಟ್ಲೆ ಕಣ್ಣೀರು ಸುರಿಸುವ ಚಿತ್ರದ ಸನ್ನಿವೇಶದ ನೆನಪೇ ಅಂತ ಯೋಚಿಸ್ತಾ ನಿಂತಿದ್ದೆ. "ಯಾಕೋ ಹಾಗೆ ನಿಂತ್ಬಿಟ್ಟೆ, ನಿಮ್ಮ-ಅಜ್ಜಿ, ನನ್ನನ್ನ ಎಷ್ಟು ಹೊಗಳ್ತಿದ್ರು, ಜ್ಞಾಪಕ ಇದೆ ಅಲ್ವಾ ನಿಂಗೆ!" ಅಂದರು. ತನ್ನ ಸೊಸೆ, ತನ್ನನ್ನು ಹೇಗೆ ನೋಡಿಕೊಳ್ಳಬೇಕು ಅಂತ ಸೂಕ್ಷ್ಮವಾಗಿ ಹೇಳಿದಂತ ಮಾತದು. ಈ ಕಡೆ ನಾ ಏನು ಹೇಳಬಹುದು ಅಂತ, ಹೆಂಡತಿ ಬೇರೆ ಓರೆ ಕಣ್ಣಿನಿಂದ ನೋಡ್ತಿದ್ಳು. ಏನೂ ಹೇಳುವ ಧೈರ್ಯವಿಲ್ಲದೆ, ಅಪ್ಪನ ಮುಖ ನೋಡಿದೆ. ಅವರು "ನಿದ್ದೆ ಚೆನ್ನಾಗಿ ಬಂತೇನೋ" ಅಂತ ಹೇಳಿ, ಮಾತು ಬದಲಾಯಿಸಿ, ನನ್ನನ್ನ ಪಾರು ಮಾಡಿದರು.



ಈ ವಿಷಯ ಅಷ್ಟಕ್ಕೇ ಮರೆತು ಬಿಟ್ಟಿದ್ದೆ, ಆದರೆ, ವರುಷಗಳು ಕಳೆದಂತೆ ಅದೇ-ಅದೇ ಡೈಲಾಗ್-ಗಳು ನಮ್ಮ ಮನೆಯಲ್ಲೂ ಕೇಳಿಬರಕ್ಕೆ ಶುರುವಾದವು!. ಏನಾದ್ರೂ ಮಾತಾಡಿದರೆ, ಮಧ್ಯಾಹ್ನದ ಊಟ ಇರಲಿ, ರಾತ್ರಿ ಊಟಾನೂ ಗೋತಾ ಅಂತ ಸುಮ್ಮನಿರಬೇಕಾಯ್ತು. ಹೀಗೇ ಮಗಳು ಜನಿಸಿದಮೇಲೆ, ಅವಳ ಆಟ-ಪಾಠಗಳನ್ನ ನೋಡ್ತಾ ದಿನಕಳೆದಂತೆ, ಒಂದು ದಿನ ತಟ್ಟನೆ ಯೋಚನೆ ಬಂತು, ಚಿಟ್ಟೆಗಿಂತ ಅದ್ಭುತವಾದ ಪರಿವರ್ತನೆ ಅಂದ್ರೆ ಒಂದು ಹೆಣ್ಣಿನ ಪರಿವರ್ತನೆ. ಮಗಳಾಗಿ, ಹೆಂಡತಿಯಾಗಿ ಮತ್ತು ಅತ್ತೆಯಾಗಿ ಮೆರಗುವ, ಗಂಡು ಜಾತಿ ಎಂದೂ ಪೈಪೋಟಿ ಮಾಡಲಿಕ್ಕಾಗದಂತ ನಡವಳಿಕೆ ಯಾವ ಶಾಲೆಯಲ್ಲಿ ಕಲಿಸುತ್ತಾರೋ ನಾನಂತೂ ಅರಿಯೆ. ಈ ಸಂಸಾರ ಸುಖವನ್ನು ಅನುಭವಿಸುವವರು ಒಂದೋ ಗುಳಿಗೆ-ಸಿದ್ದರಾಗ್ತಾರೆ (ರೋಗಿ), ಇಲ್ಲಾ ನಿಜವಾದ ಸಿದ್ಧರಾಗ್ತಾರೆ (ಸನ್ಯಾಸಿಗಳಾಗ್ತಾರೆ). ನನ್ನ ಮೇಲಂತೂ ಗುಳಿಗೆಗಳು ಕಾರ್ಯ ಮಾಡ್ಲಿಲ್ಲ. ಸರಿ ಅಂತ ಹೋಗಿ ನಮ್ಮ ಗುರುಗಳ ಕಾಲ್ಮೇಲೆ ಬಿದ್ದೆ. ಎಲ್ಲ ಅರಿತವರು, ಮಂದಹಾಸ ಬೀರಿ, ಭಗವಂತನ ಪೂಜೆ ಮಾಡಲು ಉಪದೇಶ ಮಾಡಿದರು. ಶ್ರದ್ಧಾ-ಭಕ್ತಿಯಿಂದ, ಮುಕ್ಕಣ್ಣ, ನಾನು ಪಕ್ವ ಆಗಿರೋ ಸೌತೆಕಾಯಿ ಅಲ್ಲದಿದ್ದರೂ, ಈ ಸಂಸಾರದ ಬೇಗೆಯಲ್ಲಿ ಬೆಂದು-ಬೆಂದು ಬೆಂಡಾಗಿರೋ ಸೌತೆಕಾಯಿ ಆಗ್ಬಿಟ್ಟಿದೀನಿ, ನೀನು ಏನೋ ತ್ರ್ಯ-ಅಂಬಕ (ಮೂರು ಕಣ್ಣುವುಳ್ಳವನು), ಎಲ್ಲ ತಿಳಿದು, ಹಿಮ ಪರ್ವತ ಏರಿ, ಸನ್ಯಾಸಿ ಆಗ್ಬಿಟ್ಟೆ, ನನ್ನ ಒಳಗಣ್ಣು ತೆರೆಯುವಂತೆ ಮಾಡಿ, ನಿನ್ನ ತರ ಹಿಮ ಪರ್ವತಕ್ಕೆ ದಾರಿ ಹುಡಿಕಿಕೊಳ್ಳೋ ಹಾಗೆ ಮಾಡು ಅಂತ ಕೇಳ್ಕೊಕ್ತಾ ಬಂದೆ.

ರಾವಣ-ಭಸ್ಮಾಸುರ ಅಂತವರಿಗೆ ವರಕೊಟ್ಟವನು ಶಿವ, ನನ್ನ ಸಾಮಾನ್ಯಾದ ಬೇಡಿಕೆಗೆ ಕರೆಗೊಡದಿರ್ತಾನ್ಯೇ? ಒಂದಷ್ಟು ವರ್ಷಗಳಾದ ಮೇಲೆ ಪ್ರತ್ಯಕ್ಷನಾದ: "ಮಗು, ಎಲ್ಲರು ನನ್ನನ್ನ "ತ್ರಯಂಬಕ" (ತ್ರಯಂಬಕಂ ಯಜಾಮಹೇ...) ಅಂದರೆ ಮೂರು ಕಣ್ಣಿನವನು ಅಂತ ಭಾವಿಸ್ತಾರೆ, ಅದನ್ನ "ತ್ರ್ಯ-ಅಂಬಿಕಾಂ ಯಜಾಮಹೇ... " ಅನ್ನೋ ತರಹನು ಭಾವಿಸಿನೋಡು? ನಿಮ್ಮನ್ನ ನನ್ನ ಬಿಂಬವಾಗಿ ಸೃಷ್ಟಿಸಿದ ಮೇಲೆ, ನನ್ನ ಮೂರು ಅಂಬಿಕೆಯರೇ ನಿಮ್ಮ ಜೀವನದಲ್ಲಿ ಇರುತ್ತಾರೆ ಅಂತ ಮುಗುಳ್ನಕ್ಕ ಮುಕ್ಕಣ್ಣ. ನಂಗೆ ಅರ್ಥ ಆಗ್ಲಿಲ್ಲ, ಅದು ಹೇಗೆ ಶಿವ ಅಂತ ಕೇಳ್ದೆ. ಶಿವ ಪುನಃ ನಕ್ಬಿಟ್ಟು ಹೇಳ್ದ: ನಿನ್ನ ಮಗಳು ಹುಟ್ಟಿದ ಒಂದೆರಡು ತಾಸಿನಲ್ಲಿಯೇ ತನ್ನ ಕಿರುಬೆರಳಿನಲ್ಲಿ ಸುತ್ತಿ ನಿನ್ನ ಕಿರುಬೆರಳನ್ನು ಹಿಡಿದಳಲ್ಲ, ಅವಳೇ ಇಚ್ಚಾ ಶಕ್ತಿ, ತನ್ನ ಇಚ್ಛೆಯಂತೆ ನಿನ್ನನ್ನ ಕಿರುಬೆರಳಿನಲ್ಲಿಯೇ ಕುಣಿಸುತ್ತಾಳೆ. ಮದುವೆಯಲ್ಲಿ ಸಪ್ತಪದಿ ಹಾಕುವಾಗ ನಿನ್ನ ಕಿರುಬೆರಳು ಹಿಡಿದಳಲ್ಲ ಆ ನಿನ್ನ ಮಡದಿ, ಅವಳೇ ನಿನ್ನ ಜ್ಞಾನ-ಶಕ್ತಿ; ರೀ, ನಿಮ್ಮಮ್ಮನ ಮಾತು ಕೇಳ್ಬೇಡಿ, ಹಾಗೆ-ಹೀಗೆ ಅಂತ ನಿಂಗೆ ಜ್ಞಾನ ತುಂಬುತಾಳೆ. ಇನ್ನು "ಒಂಬತ್ತು ತಿಂಗಳು ಹೆತ್ತು-ಹೊತ್ತು ಸಾಕಿಲ್ವ, ಮಗ ಮಾಡಲಿ/ತಂದುಕೊಡಲಿ ಬಿಡು" ಅಂತ ಕಿವಿ ಕಚ್ಚುವರ ಮಾತನ್ನು ಕೇಳಿ-ಕೇಳಿ, ನಿನ್ನ ಪುಸಲಾಯಿಸಿ, ಅದೂ-ಇದೂ ಅಂತ ಕೇಳಿ, ಊರ ಕೆಲಸ ಎಲ್ಲ ನಿನ್ನ ಕೈಯ್ಯಲ್ಲಿ ಮಾಡಿಸ್ತಾರಲ್ಲ, ಆ ನಿನ್ನ ಅಮ್ಮ, ಅವರೇ ಕ್ರಿಯಾ-ಶಕ್ತಿ.

ಅರೆ, ಹೌದಲ್ಲಾ, ಅಂತ ಯೋಚಿಸಕ್ಕೆ ಶುರು ಮಾಡ್ದಾಗ, ನಮ್ಮ ಶಿವ ಮುಂದುವರೆದು, ನನ್ನಿಂದ ಹೊರಬಂದ ಆ ಪರಾಶಕ್ತಿ, ಇಡೀ ವಿಶ್ವವನ್ನೇ ತನ್ನ ಮಾಯೆಯಿಂದ ನಿರ್ಮಾಣ ಮಾಡಿ, ಒಂದರಿಂದ ಮೂರಾಗಿ, ಮೂರರಿಂದ ಎಂಟಾಗಿ, ಅರವತ್ತನಾಲ್ಕಾಗಿ, ಅರವತ್ನಾಲ್ಕು ಕೋಟಿಗಳಾಗಿ, ಅನಂತಾನಂತ ಜೀವಗಳಾಗಿ "ಜಗಜ್ಜನನಿ" (ಮದರ್ ನೇಚರ್) ಅಂತ ಕರೆಸಿಕೊಂಡಿಲ್ವೇನು? ಇನ್ನು, ಅವಳದೇ ತದ್ರೂಪವಾದ ಪ್ರತಿ ಹೆಣ್ಣೂ ಹುಟ್ಟುತ್ತಲೇ ಒಂದು ನಿರ್ಧಿಷ್ಟ ಅಂಡಾಶಯವನ್ನು ಹೊಂದಿದ ಮಾತೃವೇ ಅಲ್ಲವೇನು? ಆ ಶಕ್ತಿ ಸ್ವರೂಪಿಣಿ ಹೆಣ್ಣು, ಮಗಳಾಗಿ, ಹೆಂಡತಿಯಾಗಿ, ಅಮ್ಮನಾಗಿ, ಅತ್ತೆಯಾಗಿ ಬೇರೆ-ಬೇರೆ ಸ್ಥಾನದಲ್ಲಿ ಅದಕ್ಕೆ ತಕ್ಕಂತೆ ವರ್ತಿಸಿದರೆ ಆಶ್ಚರ್ಯವೇನು ನಿನಗೆ?

ಶಿವಾ.... ಅಂತ ಸಾಷ್ಟಾಂಗ ನಮಸ್ಕಾರ ಮಾಡಿದೆ, ಜ್ಞಾನೋದಯ ಆಯ್ತು ಅನ್ನೋ ಅರ್ಥದಲ್ಲಿ... ಅಷ್ಟರಲ್ಲಿ...ರೀ, ರೀ, ಕಾಫಿ ತೊಗೊಳ್ರಿ, ಅಂತ ತಿವಿದು-ತಿವಿದು ಎಬ್ಬಿಸಿ, ನಿಮ್ಮ ಫ್ರೆಂಡ್ ಭಾಸ್ಕರ ಫೋನ್ ಮಾಡಿದ್ರು, ಅದೇನೋ ಕಥೆ ಬರೀತೀನಿ ಅಂದಿದ್ದರಂತಲ್ಲ, ನೆನಪಿಸಲಿಕ್ಕೆ ಹೇಳುದ್ರು ಅಂದಳು ನನ್ನ ನಿಜವಾದ ಶಕ್ತಿ!. ಅಲ್ಲ ರೀ, ನಾನು ಬೆಳಗ್ಗೆ ಇಂದ, ಪಾತ್ರೆ ಡಿಶ್-ವಾಷರ್ ಗೆ ಹಾಕಿ ಅಂತ ಬಡ್ಕೊಂಡ್ರೂ, ತೆಪ್ಪಗೆ ಮಲಗ್ಬಿಟ್ರಿ; ಮಕ್ಕಳಿಗೆ ಸಮ್ಮರ್ ಕ್ಯಾಂಪ್ ಬಗ್ಗೆ ವಿಚಾರಿಸಿ ಅಂದ್ರೆ ಯೋಚನೇನೇ ಮಾಡ್ತಿಲ್ಲ; ಇನ್ನ ನಿಮ್ಮ ಅಮ್ಮ ಬೇರೆ ಇಂಡಿಯಾಗೆ ಬರ್ಬೇಕಾದ್ರೆ ಅವರ್ಯಾರಿಗೋ ಏನೋ ತಂದುಕೊಡು ಅಂತ ಕೆಲಸ ಹಚ್ಚಕ್ಕೆ ಫೋನ್ ಮಾಡಿದ್ರು. ನೀವು ನೋಡಿದ್ರೆ ಕಥೆ ಬರೀತೀನಿ ಅಂತ ಕೊಚ್ಕೊಂಡಿದೀರಲ್ಲ? ನನ್ನ "ಕರ್ಮ" ಅಂದಳು. ಎಲಾ ಇವಳಾ, ಎಲ್ಲ ಸ್ವರೂಪವನ್ನು ಒಟ್ಟಿಗೇ ತೋರಿಸಿ ಪರಾಶಕ್ತಿ ಆಗ್ಬಿಟ್ಟಳಲ್ಲ ಅಂತ ಗೊಣಗಿಕೊಂಡು ಕಸ-ಮುಸುರೆ ಮಾಡ್ಲಿಕ್ಕೆ ಶುರು ಮಾಡ್ದೆ!

ಬೆಳಗಾದರೆ ಮಾತೃ-ದಿನ (ma-thr's day). ನೀವುಗಳೂ ಎಲ್ಲಾ, ನಿಮ್ಮ-ನಿಮ್ಮ ಜೀವನದಲ್ಲಿರೋ ಎಲ್ಲಾ ಶಕ್ತಿ ಸ್ವರೂಪಿಣಿಯರನ್ನು ಅರಿತು ತಗ್ಗಿ-ಬಗ್ಗಿ ನಡೆದರೆ ಒಳಿತು... ●


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಕಥೆ

## "ಐದು ರೂಪಾಯಿಯ ಋಣ"



ಸರಿತಾ ನವಲಿ

"**ಹೇ** ಪುಟ್ಟಾ , ಏಳಪ್ಪಾ. ಆಗ್ಲೇ ಗಂಟೆ ಏಳಾಯಿತು. ಎಂಟು ಗಂಟೆ ಅಷ್ಟೊತ್ತಿಗೆ ರೆಡಿಯಾಗಲೇಬೇಕು. ಇಲ್ಲಾಂದ್ರೆ ಸ್ಕೂಲ್ ಬಸ್ ಮಿಸ್ ಆಗುತ್ತೆ ನೋಡು" ಎಂದು ಶುಭಾ ಮಕ್ಕಳ ಕೋಣೆಯ ಹೊರಗೆ ನಿಂತು ಕೂಗಿದಳು. ಅರ್ಜುನ್ ಹಾಸಿಗೆಯಲ್ಲಿ ಮಗ್ಗಲು ಬದಲಾಯಿಸುತ್ತ "Two minutes ಅಮ್ಮ" ಎಂದು ಮುಸುಕೆಳೆದುಕೊಂಡ. ಅವನ ಅಕ್ಕ ಅಂಜಲಿ ಹಾಸಿಗೆಯಿಂದ ಎದ್ದು ತಮ್ಮನಿಗಿಂತ ಮೊದಲು ತಾನು ರೆಡಿ ಆಗಬೇಕೆಂದು ಬಾತ್ ರೂಮಿನತ್ತ ಓಡಿದ್ದಳು. ಅದು ಅಮೆರಿಕದ ನ್ಯೂ ಜರ್ಸಿಯಲ್ಲಿ ಸೆಪ್ಟೆಂಬರಿನ ಸಮಯ. ಎರಡುವರೆ ತಿಂಗಳ ದೀರ್ಘಕಾಲದ ಬೇಸಿಗೆ ರಜೆಯ ನಂತರ ಶಾಲೆಗಳು ಪ್ರಾರಂಭವಾಗಿದ್ದವು. ಅಂಜಲಿ ಮತ್ತು ಅರ್ಜುನ್ ಬೇಸಿಗೆ ರಜೆಯನ್ನು ಮಜವಾಗಿ ಕಳೆದಿದ್ದರು. ಈ ಸುದೀರ್ಘ ರಜೆಯ ಸವಿನೆನಪುಗಳನ್ನು ಒಟ್ಟುಗೂಡಿಸಿಕೊಂಡು ಶಾಲೆಗೆ ಮರಳಿದ್ದರು. ಅದೇ ಜುಲೈ ತಿಂಗಳಲ್ಲಿ ಅಪ್ಪ-ಅಮ್ಮರನ್ನು ನೋಡಿಕೊಂಡು ಬರಲು ಮಕ್ಕಳೊಂದಿಗೆ ಬೆಂಗಳೂರಿಗೆ ಹೋಗಿದ್ದ ಶುಭಾ, ಬರುವಾಗ ಜೊತೆಯಲ್ಲಿ ಬ್ಯಾಗಿನ ತುಂಬ ಕನ್ನಡ ಸಾಹಿತ್ಯದ ಪುಸ್ತಕಗಳನ್ನು ತಂದಿದ್ದಳು. ಅವುಗಳನ್ನೆಲ್ಲ ಓದಿ ಮುಗಿಸುವ ಹಂಬಲ ಅವಳಿಗೆ. ಮಕ್ಕಳ ರಜೆ ಮುಗಿದು ಶಾಲೆ ಪ್ರಾರಂಭವಾದ ನಂತರ ಓದಿದರಾಯಿತು ಎಂದುಕೊಳ್ಳುವುದರಲ್ಲಿಯೇ ಶಾಲೆ ಶುರುವಾಗಿ ಎರಡು ವಾರಗಳು ಕಳೆದುಹೋಗಿದ್ದವು. ಆ ದಿನ ಮನೆಯ ಹತ್ತಿರದಲ್ಲಿದ್ದ ಶಾಲೆಯ ಬಸ್ಸಿನ ಸ್ಟಾಪಿಗೆ ಹೋಗಿ, ಮಕ್ಕಳಿಬ್ಬರನ್ನು ಬಸ್ ಹತ್ತಿಸಿ, ಅವಸರದಲ್ಲಿಯೇ ಮನೆಗೆ ಬಂದ ಶುಭಾ ಗಂಡನ ಲಂಚ್ ಬಾಕ್ಸ ರೆಡಿ ಮಾಡಲು ಅಡುಗೆ ಮನೆಗೆ ನುಗ್ಗಿದ್ದಳು. ಆ ದಿನವಾದರೂ ಬೇಗನೇ ಅಡುಗೆ ಕೆಲಸ ಮುಗಿಸಿ, ಒಂದೊಳ್ಳೆ ಕಥೆ ಪುಸ್ತಕ ಓದಲೇಬೇಕೆಂದು ಆಕೆ ನಿರ್ಧರಿಸಿದ್ದಳು. ಅಕ್ಕಿ-ಬೇಳೆ ತೊಳೆದು, ಪಾತ್ರೆಗಳನ್ನು ಕುಕ್ಕರಿನಲ್ಲಿಟ್ಟು, ಗ್ಯಾಸ್ ಸ್ಟೋವನ್ನು ಆನ್ ಮಾಡಿ, ತರಕಾರಿಗಳನ್ನು ಹೊರತೆಗೆದಿಡಲು ತನ್ನ ಬೆನ್ನ ಹಿಂದೆಯೇ ಇದ್ದ ದೊಡ್ಡದಾದ ಫ್ರಿಡ್ಜಿನ ಬಾಗಿಲನ್ನು ತೆರೆದಳು. ಅಲ್ಲಿ ಬೆಂಗಳೂರಿನಿಂದ ತಂದಿದ್ದ ತಿಂಡಿ ಪೊಟ್ಟಣಗಳು, ಸಾಂಬಾರ್ ಪುಡಿ, ಚಟ್ನೀಪುಡಿಯ ಪ್ಯಾಕೆಟ್ ಗಳು ಕಣ್ಣಿಗೆ ಬಿದ್ದಾಗ, ಮನಸ್ಸು ಬೆಂಗಳೂರಿನತ್ತ ಓಡಿ, ಈ ಬಾರಿಯ ಇಂಡಿಯಾ ಟ್ರಿಪ್ಪಿನ ಬಗ್ಗೆ ಯೋಚಿಸುತ್ತಿರುವಾಗಲೇ ಕುಕ್ಕರ್ ಕೂಗಿ ಶುಭಾಳನ್ನು ಎಚ್ಚರಿಸಿ, ಅಡುಗೆ ಮುಂದುವರೆಸುವಂತೆ ಮಾಡಿತ್ತು. ಆದರೂ ಈ ಸಲ ಬೆಂಗಳೂರಿಗೆ ಹೋದಾಗ, ಅಮ್ಮನ ಮನೆಯ ಟಿ.ವಿ.ಯ ಕನ್ನಡ ಚಾನೆಲ್ ಗಳಲ್ಲಿ ಪ್ರಸಾರವಾಗುತ್ತಿದ್ದ ಧಾರವಾಹಿಗಳ ಶೀರ್ಷಿಕೆ ಗೀತೆಗಳನ್ನು ನೆನಪಿಸಿಕೊಂಡು, "ಪುಟ್ಟಗೌರಿಯ ಮದುವೆ, ಇದು ಪುಟ್ಟಗೌರಿ ಮದುವೆ", "ಬಾರಮ್ಮ, ಬಾರಮ್ಮ.. ಲಕ್ಷ್ಮೀ ಬಾರಮ್ಮ" ಎಂದು ಒಂದೊಂದಾಗಿ ಹಾಡುಗಳನ್ನು ಗುನುಗುನಿಸುತ್ತ ಅಡುಗೆ ಮುಂದುವರೆಸಿದ್ದಳು. ಮನಸ್ಸೀಗ ತಾನು ಬೆಂಗಳೂರಿನಲ್ಲಿದ್ದಾಗ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಕನ್ನಡ ಧಾರಾವಾಹಿಗಳ ಗೀತೆಗಳನ್ನು ನೆನಪಿಸಿಕೊಂಡಿತ್ತು. "ಡೆನ್ನಾನಾ, ಡೆನ್ನಾನಾ .. ಕರುನಾಡ ಸೀಮೇಡೂ, ಕಮರೊಟ್ಟು ಗ್ರಾಮೋಡು, ಗುಡ್ಡೇಡು ಭೂತ ಉಂಡು ಡೇ....ಯೇ.. , "ರೆಂಬೆ, ಕೊಂಬೆಯ ಮ್ಯಾಲೆ ಗೂಡು ಕಟ್ಟುತಾವ ರೆಕ್ಕಿ ಬಲಿತ ಹಕ್ಕಿ...." , " ಕೈಯ ಮುಗಿಯುವೆ, ನಾ ಕೈಯ ಮುಗಿಯುವೆ... "ಎಂದು ಹಾಡಿಕೊಂಡಳು. ತರಕಾರಿ ಹೆಚ್ಚುತ್ತ ತನ್ನ ಹಾಡುಗಾರಿಕೆಯನ್ನು ಮುಂದುವರೆಸಿ ಹಲವಾರು ಹಾಡುಗಳನ್ನು ಹೇಳಿಕೊಂಡಳು. ಐದಾರು ಹಾಡುಗಳೊಂದಿಗೆ ತಾನು ಹಾಡಿದ ಆ ಒಂದು ಗೀತೆ ಅವಳಿಗೇ ಅಚ್ಚರಿ ಮೂಡಿಸಿತು."ಹೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ, ಹೆಣ್ಣಲ್ಲವೆ ನಮ್ಮನ್ನೆಲ್ಲ ಪೊರೆವವಳು....". ಅರೆ, ಇದು ದೂರದರ್ಶನದಲ್ಲಿ ಪ್ರಸಾರವಾಗುತ್ತಿತ್ತಲ್ಲ! ಅದೇಕೆ ನೆನಪಿನಲ್ಲಿ ಸುಳಿಯಿತು ಎಂದು ಅಂದುಕೊಂಡು, ಆ ಹಾಡಿನ ದೃಶ್ಯವನ್ನು ನೆನಪಿಸಿಕೊಂಡಳು. ಹೆರಿಗೆ ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿದ್ದ ಬಾಣಂತಿಯೊಬ್ಬಳು, ಮಗುವನ್ನು ನೋಡಲು ಬಂದ ತನ್ನ ಗಂಡನಿಗೆ ಅದೇನೋ ನೋವಿನಿಂದ "ಹೆಣ್ಣು ಮಗು" ಅಂತ ಹೇಳಿದಾಗ, ಆತ ತನ್ನನ್ನು ಹೆತ್ತ ತಾಯಿಯನ್ನು, ಅನಾರೋಗ್ಯದಲ್ಲಿ ಉಪಚರಿಸಿದ ಹೆಂಡತಿಯನ್ನೂ ನೆನಪಿಸಿಕೊಳ್ಳುತ್ತಾ, ತನ್ನ ಈ ಪುಟ್ಟ ಹೆಣ್ಣು ಮಗುವನ್ನು ಎತ್ತಿಕೊಂಡು, ಮುದ್ದಿಸುತ್ತಾನೆ. ಆ ದೃಶ್ಯದ ಹಿನ್ನೆಲೆಯಲ್ಲಿ ಈ ಹಾಡು ಪ್ರಸಾರವಾಗುತ್ತಿತ್ತು ಎಂದು ನೆನಪಿಸಿಕೊಂಡಳು ಶುಭಾ. ತಾಯಿಯಾಗಿ, ಹೆಂಡತಿಯಾಗಿ ಹೆಣ್ಣನ್ನು ಒಪ್ಪಿಕೊಳ್ಳುವ ಈ ಸಮಾಜ, ಮಗಳಾಗಿ ಹೆಣ್ಣು ಮಗುವನ್ನು ಒಪ್ಪಿಕೊಳ್ಳಲು ಅಷ್ಟು ಸುಲಭವಾಗಿ ತಯಾರಾಗುವುದಿಲ್ಲವೆಂದು ಎಂದು ಯೋಚಿಸಿ ಕೋಪಗೊಂಡಳು. ಒಂದು ಹೆಣ್ಣು, ಹೆಂಡತಿಯಾಗಿ ಅಥವಾ ತಾಯಿಯಾಗಿ ಈ ಸಮಾಜದಲ್ಲಿರಬೇಕೆಂದರೆ, ಮೊದಲು ಹೆಣ್ಣು ಮಗುವಾಗಿ ಹುಟ್ಟಿ, ಬೆಳೆದು, ಒಳ್ಳೆಯ ಜೀವನ ಪಡೆಯಬೇಕು ಎನ್ನುವ ಬಗ್ಗೆ ಹೆಚ್ಚಿನ ಜನರು ಯೋಚಿಸುವುದಿಲ್ಲ ಎಂದು ತನ್ನ ಯೋಚನಾಲಹರಿಯನ್ನು ಎತ್ತೆತ್ತಲೋ ಹಾಯಿಸಿ, ಅಡುಗೆ ಮಾಡಿ ಮುಗಿಸಿದ್ದಳು.



ಕಿರಣ್ ಆಫೀಸಿಗೆಂದು ಹೊರಟ ನಂತರ ಒಂದು ಲೋಟ ಕಾಫಿಯೊಂದಿಗೆ ಸೆಪ್ಟೆಂಬರಿನ ಸುಂದರ ಮುಂಜಾನೆಯನ್ನು ಆಸ್ವಾದಿಸುತ್ತ 'ನೇಮಿಚಂದ್ರರ ಕತೆಗಳು' ಪುಸ್ತಕವನ್ನೆತ್ತಿಕೊಂಡಳು. ತನ್ನ ಕಾಲೇಜಿನ ದಿನಗಳಲ್ಲಿ 'ಸುಧಾ', 'ತರಂಗ' ವಾರಪತ್ರಿಕೆಗಳಲ್ಲಿ ಆಗಾಗ ನೇಮಿಚಂದ್ರರ ಕಥೆಗಳನ್ನು ಓದುತ್ತಿದುದು ನೆನಪಾಗಿ ಮನಸ್ಸಿನಲ್ಲೊಂದು ಸುಂದರ ಭಾವನೆ ಮೂಡಿತ್ತು. ಶಾಲಾ-ಕಾಲೇಜು ದಿನಗಳಲ್ಲಿ ವಾರಪತ್ರಿಕೆಗಳನ್ನಾಗಲಿ, ಕನ್ನಡ ಪುಸ್ತಕಗಳನ್ನಾಗಲಿ ಓದುತ್ತ ಕುಳಿತಿರುವಾಗ ತನ್ನನ್ನೇ ಮರೆತಂತಿರುತ್ತಿದ್ದ ಶುಭಾಳಿಗೆ ಈಗ ಪುಸ್ತಕ ಹಿಡಿದಾಗ ಪಕ್ಕದಲ್ಲೇ ಇದ್ದ ಫೋನಿನಲ್ಲಿ 'ವಾಟ್ಸ್ಯಾಪ್' ಸಂದೇಶಗಳು ನೀರಿನಲ್ಲೇಳುವ ಗುಳ್ಳೆಗಳಂತೆ ಪುಳಕ್, ಪುಳಕ್ಕೆಂದು ಗೋಚರಿಸುತ್ತಿದ್ದುದನ್ನು ನೋಡಿ ಕಿರಿಕಿರಿಯೆನಿಸಿತ್ತು. ಮಕ್ಕಳು ಮನೆಗೆ ಬರುವಷ್ಟರಲ್ಲಿ ಮೂರ್ನಾಲ್ಕು ಕಥೆಗಳನ್ನು ಓದಿಮುಗಿಸಿಬೇಕೆಂದು ಫೋನನ್ನು ಬೋರಲಾಗಿಸಿಟ್ಟು ಪುಸ್ತಕದಲ್ಲಿ ದೃಷ್ಟಿನೆಟ್ಟಳು. ಸಮಯ ಸರಿದದ್ದೇ ಗೊತ್ತಾಗಲಿಲ್ಲ. ಅದೆಷ್ಟೋ ಸಮಯದ ನಂತರ ಗಂಟೆ ಎಷ್ಟಾಗಿರಬಹುದೆಂದು ನೋಡಲು ಫೋನಿನ ಬಟನ್ ಒತ್ತಿದಾಗ, ಪಕ್ಕದ ಮನೆಯಲ್ಲಿದ್ದ ಸ್ನೇಹಿತೆ ಆರತಿ ಕಳಿಸಿದ್ದ ಸಂದೇಶವೊಂದು ಕಣ್ಣಿಗೆ ಬಿದ್ದಿತ್ತು. ಅವಳು ನ್ಯೂ ಜರ್ಸಿಯ ಸಂಸ್ಥೆಯೊಂದರ ಬಗ್ಗೆ ಬರೆದಿದ್ದಳು. ಶಾಲಾ ಪ್ರಾರಂಭದ ದಿನಗಳಾಗಿರುವುದರಿಂದ ಆ ಸಂಸ್ಥೆ ಅನಾಥಾಶ್ರಮ ಮತ್ತು ನಿರಾಶ್ರಿತರ ಶಿಬಿರಗಳಲ್ಲಿನ ಮಕ್ಕಳಿಗೆಂದು ನಾಜೂಕಾಗಿ ಬಳಸಿದ ಪೆನ್ಸಿಲ್ಲು, ಬಣ್ಣದ ಮಾರ್ಕರ್, ಕ್ರೆಯಾನ್, ಕಥೆ ಪುಸ್ತಕಗಳನ್ನು ಸಂಗ್ರಹಿಸುತ್ತಿತ್ತು. ಅದರಲ್ಲಿ ನಾವೆಲ್ಲರೂ ಪಾಲ್ಗೊಳ್ಳಬಹುದು. ನಮ್ಮಲ್ಲಿನ ಬಳಸದೇ ಇರುವ, ಬಳಸಿ ಬಿಟ್ಟಿರುವ ಶಾಲಾ ಸಾಮಗ್ರಿಗಳನ್ನು ಆ ಸಂಸ್ಥೆಗೆ ಕೊಡಬಹುದೆಂದು ಬರೆದಿದ್ದಳು. ಸರಿ, ಮಕ್ಕಳು ಮನೆಗೆ ಬಂದ ನಂತರ ಅವರೊಂದಿಗೆ ಜೊತೆಯಾಗಿ ಮನೆಯಲ್ಲಿರುವ ಹೆಚ್ಚಿನ ಶಾಲಾ ಸಾಮಗ್ರಿಗಳನ್ನೆಲ್ಲ ಒಟ್ಟುಗೂಡಿಸಿದರಾಯಿತು ಎಂದುಕೊಂಡಳು ಶುಭಾ.

ಶಾಲೆಯ ಬಸ್ಸಿನಿಂದ ಕೆಳಗಿಳಿಯುತ್ತಲೇ ಅರ್ಜುನ್ ತನಗೆ ಕಾರಿನಂತೆ ಕಾಣುವ ಪೆನ್ನು ಮತ್ತು ಮೊಬೈಲ್ ಫೋನಿನಂತಿರುವ ಎರೇಸರ್ ಬೇಕೆಂದು ಹಟಮಾಡಲು ಪ್ರಾರಂಭಿಸಿದ್ದ. ಅವನ ಶಾಲೆಯ ಗೆಳೆಯನ ಹತ್ತಿರವಿದ್ದ ಆ ಸಾಮಾನುಗಳು ಇವನಿಗೂ ಬೇಕಾಗಿದ್ದವು. ಮಗನ ಮೊಂಡುತನದ ಅರಿವಿದ್ದ ಶುಭಾ ಅವನ್ನೆಲ್ಲ ಕೊಡಿಸುವುದಾಗಿ ಒಪ್ಪಿಕೊಂಡಳು. ಇದೇ ಅವಕಾಶವನ್ನು ಕಾಯುತ್ತಿದ್ದಂತೆ ಕಂಡ ಅಂಜಲಿ ತನ್ನ ಬೇಡಿಕೆಯ ಪಟ್ಟಿಯನ್ನೂ ಅಮ್ಮನ ಮುಂದಿಟ್ಟಳು.

(ಮುಂದಿನ ಪುಟಕ್ಕೆ...)



Copyright © KCO – Brindavana

## "ಐದು ರೂಪಾಯಿಯ ಋಣ"

(...ಹಿಂದಿನ ಪುಟದಿಂದ)

ಮಕ್ಕಳ ಬೇಡಿಕೆಗಳಿಗೆ ಶುಭಾ ಇಲ್ಲವೆನ್ನಲಿಲ್ಲ. ಹಾಗೆಯೇ ಅವರಿಬ್ಬರಿಗೂ ತಮ್ಮ,ತಮ್ಮ ಹಳೆಯ, ಬಳಸದೇ ಇರುವ ಪುಸ್ತಕ,ಪೆನ್ಸಿಲ್, ಬಣ್ಣಗಳ ಡಬ್ಬಿಯನ್ನು ಅವಶ್ಯಕತೆಯಿರುವ, ಕೊಂಡುಕೊಳ್ಳಲು ಆಗದಿರುವ ಮಕ್ಕಳಿಗೆ ಕೊಡಬೇಕೆಂದು ಹೇಳಿದಳು. ತಮಗೆ ಹೊಸ ಪೆನ್ನು, ಪೆನ್ಸಿಲ್ ಸಿಗುವುದೆಂಬ ಸಂತೋಷದಿಂದ ಮಕ್ಕಳೂ ಒಪ್ಪಿಕೊಂಡರು. ಅದರೊಂದಿಗೆ ಶುಭಾ ಮಕ್ಕಳಿಬ್ಬರಿಗೂ "Help Someone in Need" ಎಂದು ಅವರ ಶಾಲೆಯಲ್ಲಿ ಹೇಳಿದ್ದು, ಮಕ್ಕಳು ಕಥೆಗಳಲ್ಲಿ ಓದಿದ್ದು, ಕ್ರಿಸ್ ಮಸ್ ಸಮಯದಲ್ಲಿ ನೀಡುವ ಚಾರಿಟಿ ಅಲ್ಲದೇ ಬೇಸಿಗೆ ರಜೆಯಲ್ಲಿ ಮಕ್ಕಳೆಲ್ಲ ಸೇರಿಕೊಂಡು 'Lemonade' ಮಾರಿ ಹಣ ಸಂಗ್ರಹಿಸಿ ದೇಣಿಗೆ ನೀಡಿದ್ದನ್ನು ನೆನಪಿಸಿದಳು.

ಆ ದಿನ ಸಂಜೆ ಶುಭಾಳೊಂದಿಗೆ ಮಕ್ಕಳಿಬ್ಬರೂ ಸೇರಿ ತಮ್ಮ ಕೋಣೆಯಲ್ಲಿ ಸಂಗ್ರಹಗೊಂಡಿದ್ದ ಕಥೆ ಪುಸ್ತಕಗಳನ್ನು, ಸ್ಟೋರೇಜ್ ಡಬ್ಬಿಗಳಲ್ಲಿ ತುಂಬಿಟ್ಟಿದ್ದ ಪೆನ್ನು, ಪೆನ್ಸಿಲ್ ಗಳನ್ನು ಹೊರತೆಗೆದು ಜೋಡಿಸಲು ಪ್ರಾರಂಭಿಸಿದರು. ಒಂದೊಂದೇ ವಸ್ತುಗಳನ್ನು ಹೊರತೆಗೆದಾಗಲೂ ಮಕ್ಕಳಿಬ್ಬರೂ ಅದನ್ನು ಖರೀದಿಸಿದ ನೆನಪಿನೊಂದಿಗೆ, ತಾವಿಬ್ಬರೂ ಚಿತ್ರ ಬರೆದುದನ್ನು, ಜೊತೆಯಾಗಿ ಓದಿದ ಕಥೆಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಮಕ್ಕಳು ನೆನಪಿಸಿಕೊಳ್ಳುತ್ತಿದ್ದ ವಿಷಯಗಳಲ್ಲಿ ತನ್ನನ್ನೂ ಭಾಗಿಯಾಗಿಸಿಕೊಂಡ ಶುಭಾಗೆ ಬೆಳಿಗ್ಗೆ ಓದಿದ್ದ 'ನೇಮಿಚಂದ್ರ'ರ ಕಥೆಯೊಂದರ ಸಾಲುಗಳು ನೆನಪಿನಲ್ಲಿ ಸುಳಿದಿದ್ದವು. "ಮನುಷ್ಯ ಅಂದರೆ ಅವನ ವ್ಯಕ್ತಿತ್ವ, ಬುದ್ಧಿ, ಆಸ್ತಿ, ಅಂತಸ್ತು, ಡಿಗ್ರಿ, ಹುದ್ದೆ ಏನೇನೋ ಅಂದುಕೊಳ್ಳುತ್ತೇವೆ. ಮನುಷ್ಯ ಎಂದರೆ ನೆನಪುಗಳು. ಹಿಡಿ ಹಿಡಿ ನೆನಪುಗಳು, 'ನಾನಾರೆಂಬ' ನೆನಪುಗಳು.' ನೀನಾರೆಂಬ' ನೆನಪುಗಳು. ನೆನಪುಗಳಿಲ್ಲದ ಜೀವನ ಬರೀ ತೊಗಲ ಚೀಲ". ಎಷ್ಟೊಂದು ಅರ್ಥಪೂರ್ಣ ಸಾಲುಗಳು ಎಂದುಕೊಳ್ಳುತ್ತಿರುವಾಗಲೇ ಶುಭಾಳಿಗೆ ಪಕ್ಕದಲ್ಲಿದ್ದ ಪೆಟ್ಟಿಗೆಯೊಂದರಲ್ಲಿ ತಾನು ಮಾಡಿದ ಕೆಲವು ಪೇಂಟಿಂಗ್ ಗಳು, ಪುಸ್ತಕಗಳು ಕಂಡವು. ಪೆಟ್ಟಿಗೆಯನ್ನೊಮ್ಮೆ ತಡಕಾಡಿದಾಗ, ಪುಸ್ತಕಗಳ ಸಂದಿಯಲ್ಲಿ ಅವಿತುಕೊಂಡಿದ್ದ ಪುಟ್ಟ ಡೈರಿ(ಅಡ್ರೆಸ್ ಬುಕ್)ಕಂಡಿತ್ತು. ಕಂದು ಬಣ್ಣದ ಗಟ್ಟಿ ಕವರಿನ ಡೈರಿಯನ್ನು ಹೊರತೆಗೆದಾಗ ಶುಭಾಳ ನೆನಪುಗಳು ದಿಕ್ಕು ಬದಲಿಸಿ ಎರಡು ದಶಕಗಳಷ್ಟು ಹಿಂದೆ ಓಡಿದ್ದವು.ಇಪ್ಪತ್ತು ವರ್ಷಗಳ ಹಿಂದೆ ಪುಟ್ಟದೊಂದು ಅಡ್ರೆಸ್ ಬುಕ್ಕಿನಲ್ಲಿ ಪರಿಚಿತರ ವಿಳಾಸ ಮತ್ತು ಫೋನ್ ನಂಬರಗಳನ್ನು ಬರೆದುಕೊಂಡು ಯಾವಾಗಲೂ ಪರ್ಸಿನಲ್ಲಿಟ್ಟುಕೊಂಡಿರುತ್ತಿದ್ದ ಶುಭಾಳಿಗೆ ಆ ಕಂದು ಬಣ್ಣದ ಗಟ್ಟಿ ಕವರಿನ ಪುಟ್ಟ ಡೈರಿಯನ್ನು ತೆರೆದಾಗ, ಮೊದಲ ಪುಟದ ಮಧ್ಯಭಾಗಲ್ಲಿ ಬರೆದಿದ್ದ "ಶ್ರೀ" ಮತ್ತು ಬಲಭಾಗದ ಅಂಚಿನಲ್ಲಿ ಕನ್ನಡದಲ್ಲಿ ತನ್ನ ಹೆಸರನ್ನು ಬರೆದದ್ದು ಕಂಡಿತ್ತು. ಪುಟದ ಮಧ್ಯಭಾಗದಲ್ಲಿ ತೊಂಬತ್ತರ ದಶಕದ ಪ್ರಖ್ಯಾತ, ತನ್ನ ನೆಚ್ಚಿನ ಕರ್ನಾಟಕದ ಕ್ರಿಕೆಟಿಗನ ಹಸ್ತಾಕ್ಷರ ಕಂಡಿದ್ದವು. ಆಟೋಗ್ರಾಫ್ ಕೇಳಿದಾಗ ಇಂಗ್ಲೀಷಿನಲ್ಲಿ ಸಹಿಹಾಕಿದ ಆಟಗಾರನಿಗೆ "ಕನ್ನಡದಲ್ಲಿ ಬರೀತೀರಾ?"ಅಂತ ಪ್ರಶ್ನಿಸಿದ್ದು ನೆನಪಾಯಿತು. ಮುಖದಲ್ಲಿ ಸಣ್ಣದೊಂದು ನಗುಮೂಡಿಸಿ ಆತ ಕನ್ನಡದಲ್ಲಿ ತನ್ನ ಹೆಸರನ್ನು ಬರೆದುಕೊಟ್ಟಾಗ ಧನ್ಯವಾದ ತಿಳಿಸಿ ಪುಟದ ಅಂಚಿನಲ್ಲಿ ಅಂದಿನ ದಿನಾಂಕವನ್ನು ನಮೂದಿಸಿದ್ದಳು ಶುಭಾ, 'ನವೆಂಬರ್ ೧, ೧೯೯೭'. ಅಂದಿಗೂ, ಇಂದಿಗೂ ಬದಲಾಗದ ತನ್ನ ಕನ್ನಡಾಭಿಮಾನವನ್ನು ನೆನೆದು ಶುಭಾಳ ಮುಖದಲ್ಲಿ ನಗು ಮೂಡಿತ್ತು.ಮುಂದಿನ ಪುಟಗಳನ್ನು ತಿರುಗಿಸುತ್ತಾ ಹೋದಂತೆ ಮನದಲ್ಲಿ ಮೂಡುತ್ತಿದ್ದ ನೆನಪುಗಳೊಂದಿಗೆ ಹಲವಾರು ಯೋಚನೆಗಳು ಸೇರಿಕೊಂಡವು.ಈಗ ಸಂಪರ್ಕದಲ್ಲಿರದ ಸ್ನೇಹಿತರು, ಕಾಲಾಂತರದಲ್ಲಿ ಮುಚ್ಚಿಹೋದ ಕಂಪೆನಿಗಳು,




ಕಣ್ಮರೆಯಾದ ಹಿರಿಯರು, ಸಡಿಲಗೊಂಡ ಸಂಬಂಧದ ಎಳೆಗಳು, ಹೀಗೆ ಅದೆಷ್ಟೋ ಯೋಚನೆಗಳು, ನೆನಪುಗಳೊಂದಿಗೆ ಬಿಡಿ,ಬಿಡಿಯಾಗಿ ತೆರೆದಿಟ್ಟುಕೊಂಡವು. ಹಾಗೆಯೇ ಕೊನೆಯ ಪುಟ ತೆರೆದು ನೋಡಿದಾಗ ಪುಟದ ಮೇಲ್ಭಾಗದಲ್ಲಿ ಯಾವುದೇ ಕಂಪೆನಿಯ ವಿಳಾಸ ಕಂಡಿತ್ತು. ಪುಟದ ಕೆಳಭಾಗದ ಅಂಚಿನಲ್ಲಿ ಸಣ್ಣ ಅಕ್ಷರಗಳಲ್ಲಿ, "ಬ್ಯಾಂಕ್ ಮ್ಯಾನೇಜರ್ ರಿಗೆ 5 ರೂ. ಕೊಡಬೇಕು." ಎಂದು ಬರೆಯಲಾಗಿತ್ತು. "ಮರೆತು ಬಿಡಬಾರದೆಂದು ಬರೆದಿಟ್ಟುಕೊಂಡಿದ್ದು" ಎಂದು ತನ್ನಷ್ಟಕ್ಕೇ ಹೇಳಿಕೊಂಡ ಶುಭಾಳಿಗೆ ಇಪ್ಪತ್ತು ವರ್ಷಗಳ ಹಿಂದೆ ಧಾರವಾಡದಲ್ಲಿ ನಡೆದಿದ್ದ ಘಟನೆಗಳೆಲ್ಲ ಕಣ್ಣಮುಂದೆ ಸುಳಿದವು.

1997 ರ ಜನವರಿಯಲ್ಲಿ ಸಂಕ್ರಾಂತಿ ಹಬ್ಬವಾದ ಎರಡು ದಿನಗಳ ನಂತರ ಇದ್ದಕ್ಕಿದಂತೆ ಶುಭಾಳ ಅಮ್ಮ ಸುಮಿತ್ರಾರ ಆರೋಗ್ಯದಲ್ಲಿ ತೊಂದರೆ ಕಾಣಿಸಿಕೊಂಡಾಗ ಮನೆಯವರೆಲ್ಲ ಒಂದು ಘಳಿಗೆ ಗಾಬರಿಗೊಂಡಿದ್ದರು. ಸುಮಿತ್ರಾರನ್ನು ಡಾಕ್ಟರ್ ಬಳಿಗೆ ಕರೆದೊಯ್ದು ತಪಾಸಣೆ ಮಾಡಿಸಲಾಯಿತು. ಆದರೆ ಆ ಡಾಕ್ಟರ್ ತೋರಿದ ನಿರ್ಲಕ್ಷ ಮತ್ತು ರಿಪೋರ್ಟಿನ ಬಗ್ಗೆ ಮಾಡಿದ ತಪ್ಪುಗ್ರಹಿಕೆಯಿಂದ ಒಂದು ತಿಂಗಳಾಗುವಷ್ಟರಲ್ಲಿ ಸುಮಿತ್ರಾರ ಆರೋಗ್ಯದಲ್ಲಿ ಇನ್ನೂ ಹೆಚ್ಚಿನ ತೊಂದರೆ ಕಂಡುಬಂದು ಅದು ಮನೆಮಂದಿಗೆಲ್ಲ ಭಯ ಮೂಡಿಸಿತ್ತು. ಪಕ್ಕದಲ್ಲೇ ಇದ್ದ ಹುಬ್ಬಳ್ಳಿಯ ಆಸ್ಪತ್ರೆಯೂ ಬೇಡವೆಂದುಕೊಂಡು, ಆಗಿಂದಾಗ್ಗೆ ದೂರದ ಬೆಂಗಳೂರಿನಲ್ಲಿ ಡಾಕ್ಟರಾಗಿದ್ದ ಶುಭಾಳ ಚಿಕ್ಕಮ್ಮ, ಚಿಕ್ಕಪ್ಪರಲ್ಲಿ ತಪಾಸಣೆ ಮಾಡಿಸುವುದೆಂದು ನಿರ್ಧರಿಸಿದ ಶುಭಾಳ ಅಪ್ಪ ಗೋಪಾಲರಾವ, ಸುಮಿತ್ರಾರೊಂದಿಗೆ ಬೆಂಗಳೂರಿನ ಬಸ್ಸನ್ನೇರಿದ್ದರು. ಸಮಿತ್ರಾರ ರಿಪೋರ್ಟ ನೋಡಿದ ಅವರ ತಂಗಿ ಇನ್ನು ತಡಮಾಡುವುದು ಬೇಡವೆಂದುಕೊಂಡು ಮುಂದಿನ ಎರಡು ದಿನಗಳಲ್ಲೇ ಆಪರೇಷನ್ ಮಾಡಬೇಕೆಂದು ನಿರ್ಧರಿಸಿದರು. ಅದಕ್ಕೆ ತಯಾರಿಯನ್ನು ಮಾಡಿಕೊಳ್ಳತೊಡಗಿದರು.ಆಪರೇಷನ್ನಿನ ಹಿಂದಿನ ದಿನ ರಾತ್ರಿ ಮನೆಗೆ ಫೋನ್ ಮಾಡಿದ ಗೋಪಾಲರಾವ ತಮ್ಮ ತಾಯಿ ಸೀತಾಬಾಯಿಯವರಿಗೆ ಸುಮಿತ್ರಾರ ಆರೋಗ್ಯದ ಬಗ್ಗೆ ವಿವರಿಸಿದರು. ಶುಭಾಳೊಂದಿಗೂ ಮಾತನಾಡಿದ ಗೋಪಾಲರಾವ, ಚಿಕ್ಕಮ್ಮ ಮತ್ತು ಚಿಕ್ಕಪ್ಪ ಸದ್ಯದ ಆಸ್ಪತ್ರೆಯ ಖರ್ಚನ್ನು ನೋಡಿಕೊಂಡಿದ್ದಾರೆ. ಆದ್ದರಿಂದ ಶುಭಾ ತಮ್ಮ ಬ್ಯಾಂಕ್ ಅಕೌಂಟಿನಿಂದ ಮೂವತ್ತು ಸಾವಿರ ರೂಪಾಯಿಗಳ ಡಿಮ್ಯಾಂಡ್ ಡ್ರಾಫ್ಟನ್ನು ಡಾಕ್ಟರ್ ಚಿಕ್ಕಪ್ಪನ ಹೆಸರಿನಲ್ಲಿ ಮಾಡಿಸಿಕೊಂಡು ಮರುದಿನ ರಾತ್ರಿಯ ಬಸ್ಸಿಗೇ ಬೆಂಗಳೂರಿಗೆ ಹೊರಟು ಬರಬೇಕೆಂದು ಹೇಳಿದರು. ಅಮ್ಮನಿಗೆ ಹಿಸ್ಟ್ರಕ್ಟಮಿ ಮಾಡಲಿದ್ದಾರೆ ಎನ್ನುವುದನ್ನು ನೆನೆದು ಸ್ವಲ್ಪಮಟ್ಟಿಗೆ ಹೆದರಿದಳು ಶುಭಾ. ಐದು ತಿಂಗಳ ಹಿಂದೆಯಷ್ಟೇ ಅಕ್ಕ ವಿಭಾಳ ಹೆರಿಗೆ ಆಗಿ ಪುಟ್ಟ ಮಗುವೊಂದು ಮನೆಗೆ ಬಂದ ಸಂಭ್ರಮವನ್ನು ನೋಡಿದ್ದ ಶುಭಾಗೆ ನಾಳೆ ಅಮ್ಮನಿಗೆ ಗರ್ಭಕೋಶ ತೆಗೆದುಬಿಡಲಾಗುತ್ತದೆ ಎನ್ನುವುದು ವಿಪರ್ಯಾಸವಾಗಿ ಕಂಡಿತ್ತು. ಬೆಳಗಾಗುವುದನ್ನೇ ಕಾಯುತ್ತಿದ್ದ ಶುಭಾ, ಬೆಂಗಳೂರಿಗೆ ಹೊರಡುವಾಗ ಅಪ್ಪ ಖರ್ಚಿಗೆಂದು ಕೊಟ್ಟಿದ್ದ ದುಡ್ಡಿನಲ್ಲಿ ಸ್ವಲ್ಪ ಹಣವನ್ನು ಪರ್ಸಿಗಿಳಿಸಿ ಬಸ್ ನಿಲ್ದಾಣ ತಲುಪಿ ರಾತ್ರಿ ಬೆಂಗಳೂರಿಗೆ ಹೊರಡುವ ಬಸ್ಸಿಗೆ ಟಿಕೆಟ್ ತೆಗೆದುಕೊಂಡು ಬ್ಯಾಂಕಿನತ್ತ ಹೋಗುತ್ತಿದ್ದ ಕಲ್ಯಾಣನಗರದ ಸಿಟಿ ಬಸ್ಸನ್ನೇರಿದ್ದಳು. ಎಂ.ಎ. ಮುಗಿಸಿ ಕೆಲಸದ ಹುಡುಕಾಟದಲ್ಲಿದ್ದ ಶುಭಾಳಿಗೆ ತನ್ನ ಮನೆಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚೆನ್ನಾಗಿಯೇ ತಿಳಿದಿತ್ತು.ಸರಕಾರಿ ನೌಕರಿಯಲ್ಲಿದ್ದ ಅಪ್ಪ, ಮುಂಬಯಿಯಲ್ಲಿ ಖಾಸಗಿ ನೌಕರಿಯಲ್ಲಿದ್ದ ಅಣ್ಣ ವಿವೇಕನ ದುಡಿಮೆಯಲ್ಲಿ

(ಮುಂದಿನ ಪುಟಕ್ಕೆ...)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## "ಐದು ರೂಪಾಯಿಯ ಋಣ"

(...ಹಿಂದಿನ ಪುಟದಿಂದ)

ಎರಡು ವರ್ಷದ ಹಿಂದೆಯಷ್ಟೇ ಅಕ್ಕ ವಿಭಾಳ ಮದುವೆ ಮಾಡಿದ್ದರು.ಈಗ ಸುಮಿತ್ರಾರ ಆಪರೇಷನ್ನಿನ ಖರ್ಚುವೆಚ್ಚಗಳ ಬಗ್ಗೆಯೇ ಶುಭಾ ಯೋಚಿಸಿದ್ದಳು. ಬೇಗನೇ ತಾನೊಂದು ನೌಕರಿ ಹಿಡಿದು ಮನೆಗೆ ತನ್ನ ಕೈಲಾದ ಹಣಕಾಸಿನ ಸಹಾಯ ಮಾಡುವಂತಾಗಬೇಕು ಎಂದುಕೊಳ್ಳುತ್ತಲೇ ಬ್ಯಾಂಕನ್ನು ತಲುಪಿದ್ದಳು. ಅಪ್ಪ ಹೇಳಿದಂತೆ ಮೂವತ್ತು ಸಾವಿರ ರೂಪಾಯಿಗಳ ಡಿಮ್ಯಾಂಡ್ ಡ್ರಾಫ್ಟನ್ನು (ಡಿ.ಡಿ) ಪಡೆಯಬೇಕೆಂದಾಗ ಅಕೌಂಟಿನಲ್ಲಿ ಇದ್ದದ್ದೇ ರೂ 30,100 ಎಂದು ತಿಳಿದಿತ್ತು. ಎರಡು ತಿಂಗಳ ಹಿಂದೆ ಮೊಮ್ಮಗಳ ನಾಮಕರಣವನ್ನು ಮಾಡಿದಾಗ, ಸುಮಿತ್ರಾ ಮೊಮ್ಮಗುವಿಗೆಂದು ಚಿನ್ನದ ಸರ, ಬಳೆ ಮಾಡಿಸಿದ್ದರು. ಆಗ ಬ್ಯಾಕಿನಿಂದ ರೂ 10,000 ತೆಗೆದಿದ್ದನ್ನು ಪಾಸ್ ಬುಕ್ಕಿನಲ್ಲಿ ಎಂಟ್ರಿ ಮಾಡಿಸಲು ಗೋಪಾಲರಾಯರು ಮರೆತಿದ್ದರು. ಅಕೌಂಟಿನಲ್ಲಿ ಇಡಲೇಬೇಕಾಗಿದ್ದ ನೂರು ರೂಪಾಯಿಯ ಕನಿಷ್ಟ ಮೊತ್ತವನ್ನು ಉಳಿಸಿ ಶುಭಾ ತುಂಬಿಕೊಟ್ಟ ಫಾರಮ್ಮಿನಂತೆ ಡಿ.ಡಿ ತಯಾರಿಸಿದ ಕ್ಲರ್ಕ ಡಿ.ಡಿ. ಚಾರ್ಜ ಕೊಡಬೇಕೆಂದಾಗ, ಪರ್ಸ ತೆಗೆದು ಹಣ ಕೊಡಲು ಮುಂದಾದ ಶುಭಾಳಿಗೆ ಐದು ರೂಪಾಯಿ ಕಡಿಮೆಯಿದೆ ಎಂದು ತಿಳಿದಿತ್ತು. ಪರ್ಸನ್ನೆಲ್ಲ ಹುಡುಕಿದಾಗ ಶುಭಾಳಿಗೆ ಸಿಕ್ಕಿದ್ದು ಎರಡು ರೂಪಾಯಿಯಷ್ಟು ಚಿಲ್ಲರೆ ನಾಣ್ಯಗಳು. ಇದು ತಾನಾಗೇ ತಂದಿಟ್ಟುಕೊಂಡ ಅವಸ್ಥೆಯೆಂದು ಶುಭಾಳಿಗೆ ತಿಳಿದಿತ್ತು. ಮನೆಯಿಂದ ಹೊರಟು ಬೆಂಗಳೂರಿನ ಬಸ್ಸಿಗೆ ಟಿಕೆಟ್ ಕೊಂಡು, ಕಲ್ಯಾಣನಗರದ ಸಿಟಿಬಸ್ಸು ಹತ್ತಿ ಬ್ಯಾಂಕಿನಿಂದ ಸ್ವಲ್ಪ ದೂರದಲ್ಲಿದ್ದ ಬಸ್ಟಾಪಿನಲ್ಲಿಳಿದು ನಡೆದುಕೊಂಡು ಬರುವಾಗ ದಾರಿಯಲ್ಲಿ ಮೆಡಿಕಲ್ ಷಾಪ್ ಕಂಡಿತ್ತು. ತಾನೂ ಊರಿಗೆ ಹೋದರೆ ಪುಟ್ಟ ಮಗುವಿನೊಂದಿಗೆ ತನ್ನ ಅಕ್ಕ ಪರದಾಡುವುದು ಬೇಡವೆಂದು ಯೋಚಿಸಿ ಮಗುವಿಗೆಂದು ಸಿರಿಲ್ಯಾಕ್, ವಿಟಾಮಿನ್ ಸಿರಪ್, ಅಜ್ಜಿಯ ಬಿ.ಪಿ. ಮಾತ್ರೆಗಳನ್ನು ಖರೀದಿಸಿಕೊಂಡು ಬಂದಿದ್ದಳು ಶುಭಾ. ಈಗ ಡಿ.ಡಿ ಚಾರ್ಜ ಕೊಡಲು ಐದು ರೂಪಾಯಿ ಕಡಿಮೆಯಿತ್ತು. ಮನೆ ತಲುಪಲು ಬಸ್ಸಿಗೆ ಚಿಲ್ಲರೆ ನಾಣ್ಯಗಳಿದ್ದವು. ಆದರೆ ಡಿಮ್ಯಾಂಡ್ ಡ್ರಾಫ್ಟನ್ನು ಪಡೆಯುವುದು ಹೇಗೆ? ಶುಭಾಳ ಕಣ್ಣಲ್ಲಿ ನೀರು ತುಂಬಿತ್ತು. ತನ್ನ ಅಸಹಾಯಕತೆಯನ್ನು ಬ್ಯಾಂಕಿನ ಸಿಬ್ಬಂದಿಗಳಲ್ಲಿ ಹೇಳಿಕೊಳ್ಳಬೇಕೆಂದುಕೊಂಡು ಒದ್ದೆ ಕಣ್ಣುಗಳಿಂದ ಕೌಂಟರುಗಳನ್ನೊಮ್ಮೆ ನೋಡಿದಳು. ಅದೇನೋ ಯಾವಾಗಲೂ ಬ್ಯಾಂಕಿನ ಸಿಬ್ಬಂದಿಗಳು ಮುಖ ಸಿಂಡರಿಸಿಕೊಂಡೇ ಇರುತ್ತಾರೆಂಬ ಮಾತು ಶುಭಾಳಿಗೂ ಆಗ ಮನವರಿಕೆಯಾಗಿತ್ತು. ಇವಳಿಗೆ ಡಿ.ಡಿ. ಮಾಡಿಕೊಟ್ಟ ಕ್ಲರ್ಕಿನತ್ತ ನೋಡಿದರೆ ಆತ ತನ್ನ ಸೀಟಿನಲ್ಲೇ ಇರಲಿಲ್ಲ. ಈಗ ನೆಲೆಸಿರುವ ಅಮೆರಿಕಾದಲ್ಲಿನ ಪದ್ಧತಿಯಂತೆ ಮೆಡಿಕಲ್ ಸ್ಟೋರಿಗೆ ಹೋಗಿ ಒಂದೆರಡು ಸಾಮಾನುಗಳನ್ನು ಹಿಂದಿರುಗಿಸಿ ಹಣ ವಾಪಸು ಪಡೆಯುವಂತಿದ್ದರೆ ಎಷ್ಟು ಸುಲಭವಾಗಿರುತ್ತಿತ್ತೆಂದು ಆ ಹಳೆಯ ನೆನಪುಗಳ ನಡುವೆಯೂ ಅಂದುಕೊಂಡಳು ಶುಭಾ. ಆದರೆ ಈ ಸೌಲಭ್ಯ ನಮ್ಮಲ್ಲಿ ಆಗಲೂ ಇರಲಿಲ್ಲ , ಈಗಲೂ ಇಲ್ಲ ಅಲ್ಲವೇ?




ಶುಭಾಳ ನೆನಪುಗಳು ಮುಂದುವರೆದಿದ್ದವು. ಮನೆ ಹತ್ತಿರದ ಅಂಗಡಿಯಲ್ಲಿ ಸಾಮಾನು ತೊಗೋಬಹುದಿತ್ತು, ಅವಸರಿಸಿದೆ ಎಂದು ತನ್ನನ್ನೇ ಬೈದುಕೊಂಡಳು.ಕೆಲವು ಕ್ಷಣ ಏನೂ ತೋಚದಂತಾಗಿ ನಿಂತವಳಿಗೆ ಇನ್ನೇನು ಕೆಲವು ಗಂಟೆಗಳಲ್ಲಿ ಆಪರೇಷನ್ನಿಗೆ ಒಳಪಡಲಿರುವ ಅಮ್ಮನ ಮುಖ ಕಣ್ಮುಂದೆ ಸುಳಿದಿತ್ತು. ಕೇವಲ ಐದು ರೂಪಾಯಿಗಳಿಗಾಗಿ ಇದೆಂಥ ಅಸಹಾಯಕತೆ ಬಂದೊದಗಿತಲ್ಲ ಅನಿಸಿತ್ತು ಶುಭಾಳಿಗೆ. ತಟ್ಟನೇ ಏನೋ ಯೋಚಿಸಿದವಳಂತೆ ನಾಲ್ಕು ಹೆಜ್ಜೆ ನಡೆದು ಬ್ಯಾಂಕ್ ಮ್ಯಾನೇಜರ್ ಅವರ ಕ್ಯಾಬಿನ್ನಿನ ಬಾಗಿಲು ತಟ್ಟಿ, "ಸರ್, ನಾನು ಒಳಗೆ ಬರಬಹುದೇ?" ಎಂದು ಕೇಳಿದಳು.ಮ್ಯಾನೇಜರ್ ಕುಲಕರ್ಣಿಯವರು ನಗುಮೊಗದಿಂದಲೇ ಸ್ವಾಗತಿಸಿದಾಗ ಶುಭಾಗೆ ಸ್ವಲ್ಪ ಸಮಾಧಾನವೆನಿಸಿತು. ಅವರ ಎದುರಿನ ಕುರ್ಚಿಯಲ್ಲಿ ಕುಳಿತು ತನ್ನ ಪರಿಸ್ಥಿತಿಯನ್ನು ವಿವರಿಸುವಷ್ಟರಲ್ಲಿ ಶುಭಾಳ ಕಣ್ಣುಗಳಲ್ಲಿ ನೀರು ಜಿನುಗಿತ್ತು."ಯಾಕಮ್ಮ ಅಳ್ತೀಯಾ? ನಿಮ್ಮ ತಾಯಿಯವರಿಗೆ ಏನೂ ಆಗಂಗಿಲ್ಲ, ಆರಾಮಾಗಿ ಬರ್ತಾರ ನೋಡು" ಎಂದು ಸಮಾಧಾನ ಹೇಳಿ ಅಟೆಂಡರ್ ನನ್ನು ಕರೆಸಿ ತಮ್ಮ ಪರ್ಸಿನಿಂದ ಐದು ರೂಪಾಯಿ ತೆಗೆದುಕೊಟ್ಟು ಬ್ಯಾಂಕಿನ ಗುಮಾಸ್ತನಿಂದ ಡಿ.ಡಿ. ತೆಗೆದುಕೊಂಡು ಬರಲು ಹೇಳಿದರು. ಡಿ.ಡಿ. ಪಡೆದು ಧನ್ಯವಾದ ಹೇಳಿ ಸಾಮಾನುಗಳಿದ್ದ ಕೈಚೀಲವನ್ನು ಎತ್ತಿಕೊಂಡು ಅವಸರದಿಂದ ಹೊರಟವಳಿಗೆ, "ಸಾವಕಾಶ ಆಗಿ ಹೋಗಮ್ಮ" ಎಂದ ಕುಲಕರ್ಣಿಯವರ ಧ್ವನಿಯಲ್ಲಿ ಕಾಳಜಿಯಿದ್ದುದನ್ನು ಗುರುತಿಸಿದ್ದಳು ಶುಭಾ.

ಬಸ್ಸು ಹಿಡಿದು ಮನೆಗೆ ಬಂದ ಶುಭಾಳಿಗೆ ಅಜ್ಜಿ ಸೀತಾಬಾಯಿ ಸ್ವಲ್ಪ ಹೊತ್ತಿನ ಮುಂಚೆ ಪೋಸ್ಟಮ್ಯಾನ್ ಕೊಟ್ಟು ಹೋಗಿದ್ದ ಪತ್ರಗಳನ್ನು ಕೊಟ್ಟರು. ಗೋಪಾಲರಾವ ಹೆಸರಿಗೆ ಬಂದ ಮದುವೆ ಕರೆಯೋಲೆ, ಅಕ್ಕ ವಿಭಾಳಿಗೆ ಭಾವ ಬರೆದಿದ್ದ ಪತ್ರಗಳೊಂದಿಗೆ ತನ್ನ ಹೆಸರು ಬರೆದಿದ್ದ ಕವರನ್ನು ನೋಡಿ ಅಚ್ಚರಿಯಾಗಿತ್ತು. ತೆರೆದು ನೋಡಿದಾಗ ಒಂದು ತಿಂಗಳ ಹಿಂದೆ ಅರ್ಜಿ ಹಾಕಿ, ಇಪ್ಪತ್ತು ದಿನಗಳ ಹಿಂದೆ ಇಂಟರವ್ಯೂಗೆ ಹೋಗಿಬಂದಿದ್ದ ಖಾಸಗಿ ಶಾಲೆಯೊಂದರಲ್ಲಿ ಟೀಚರ್ ಕೆಲಸಕ್ಕೆ ಆಯ್ಕೆಯಾಗಿ, ಮುಂದಿನವಾರದಿಂದ ಕೆಲಸಕ್ಕೆ ಬರಬೇಕೆಂದು ಬರೆದಿತ್ತು. ಹಲವಾರು ತಿಂಗಳುಗಳಿಂದ ಕೆಲಸಕ್ಕಾಗಿ ಪ್ರಯತ್ನಿಸುತ್ತಿದ್ದ ಶುಭಾಳಿಗೆ ಸುಮಿತ್ರಾರನ್ನು ಕರೆದುಕೊಂಡು ಸ್ಕ್ಯಾನಿಂಗ್, ಚೆಕ್ ಅಪ್ ಎಂದು ಓಡಾಡುವುದರ ನಡುವೆಯೇ ಟೀಚರ್ ಕೆಲಸದ ಇಂಟರವ್ಯೂಗೆ ಹೋಗಿ ಬಂದಿದ್ದು ಮರೆತೇ ಹೋಗಿತ್ತು. ರಾತ್ರಿ ಬಸ್ಸಿಗೆ ಬೆಂಗಳೂರಿಗೆ ಹೊರಟು ನಿಂತ ಶುಭಾಗೆ ಈ ಪತ್ರ ಕೈ ಸೇರಿತ್ತು! ವೈದ್ಯರ ತಪ್ಪುಗ್ರಹಿಕೆಯಿಂದ ಹಠಾತ್ತಾಗಿ ಹದಗೆಟ್ಟ ಅಮ್ಮನ ಆರೋಗ್ಯ, ಬೆಳಿಗ್ಗೆ ಬ್ಯಾಂಕಿನಲ್ಲಿ ಐದು ರೂಪಾಯಿಗಾಗಿ ಅನುಭವಿಸಿದ ಅಸಹಾಯಕತೆ, ಕೆಲಸ ಹುಡುಕಿ ಅಲೆದಾಡಿದ್ದು, ಈಗ ಕೈಯಲ್ಲಿರುವ ಅಪಾಯಿಂಟಮೆಂಟ್ ಲೆಟರ್, ಎಲ್ಲವನ್ನೂ ನೆನೆದ ಶುಭಾಳಿಗೆ ದುಃಖ ತಡೆಯಲಾಗಲಿಲ್ಲ. ಅಜ್ಜಿಯ ಕೈಹಿಡಿದು ಅತ್ತುಬಿಟ್ಟಳು. ಸೊಸೆಯ ಆರೋಗ್ಯದ ಕಾಳಜಿಯಲ್ಲಿದ್ದ ಸೀತಾಬಾಯಿ, "ಪುಟ್ಟಿ, ಸಮಾಧಾನ ಮಾಡ್ಕೋಳವಾ, ಸುಮಿತ್ರಾಗ ಏನೂ ಆಗಂಗಿಲ್ಲ. ಮನಿ, ಮಕ್ಕಳು ಅಂತ ತನ್ನ ಜೀವಾನ ತೇಯ್ದ್ಯಾಳ, ಇನ್ನೂ ನಿನ್ನ ಲಗ್ನ, ಮಗನ ಲಗ್ನ ಮಾಡೂದದಲ್ಲ ಆಕಿಗೆ? ಆರಾಮ ಆಗ್ತಾಳೇಳು. ಅಳಬ್ಯಾಡ, ಕೈಕಾಲು ಮಾರಿ ತೊಳಕೊಂಡು ಊಟ ಮಾಡು" ಎಂದರು. "ಹೌದಲ್ಲ, ನಾನ್ಯಾಕೆ ಇಷ್ಟು ಭಾವುಕಳಾದೆ? ಮೂರು ಮಕ್ಕಳನ್ನು ತನ್ನ ಒಡಲಿನಲ್ಲಿ ಬೆಳೆಸಿ, ಜನ್ಮಕೊಟ್ಟು, ಸಾಕಿ ಸಲಹಿದ ತಾಯಿ, ಇವತ್ತು ಅದೇ ತಾಯ್ತನದ ಅಂಗವನ್ನು ಕಳೆದುಕೊಳ್ಳುತ್ತಿದ್ದಾಳಲ್ಲ? ಅಮ್ಮನಿಗಾಗಿ ಇಷ್ಟನ್ನೂ ಮಾಡಲಾರೆನೇ? ಅಮ್ಮ ಆರಾಮಾದ ನಂತರ ಮತ್ತೆ ನೌಕರಿ ಹುಡುಕಿಕೊಂಡರಾಯಿತು" ಎಂದುಕೊಂಡ ಶುಭಾಗೆ ಬ್ಯಾಂಕಿನಲ್ಲಾದ ಅನುಭವ ಮತ್ತೆ ನೆನಪಾಗಿ, ಪರ್ಸಿನಿಂದ ಪುಟ್ಟ ಡೈರಿ ಹೊರತೆಗೆದು, ಕೊನೆಯ ಪುಟದ ಅಂಚಿನಲ್ಲಿ ಸಣ್ಣ ಅಕ್ಷರಗಳಲ್ಲಿ "ಬ್ಯಾಂಕ್ ಮ್ಯಾನೇಜರ್ ಗೆ 5 ರೂ ಕೊಡಬೇಕು" ಎಂದು ಬರೆದಿಟ್ಟುಕೊಂಡು ರಾತ್ರಿ ಬೆಂಗಳೂರಿಗೆ ಹೊರಡುವ ತಯಾರಿ ನಡೆಸಿದಳು.ಸುಮಿತ್ರಾರ ಆಪರೇಷನ್ನಾದ ನಂತರದ ದಿನಗಳಲ್ಲಿ ಶುಭಾ ತನ್ನ ಅಮ್ಮನಿಗೇ ಅಮ್ಮನಂತಾಗಿದ್ದಳು. ಅವಳ ಆರೈಕೆಯಲ್ಲಿ ಸುಮಿತ್ರಾ ತಕ್ಕಮಟ್ಟಿಗೆ ಚೇತರಿಸಿಕೊಂಡಿದ್ದರು.ಆದರೆ ಹಠಾತ್ತನೆ ತನ್ನ ಆರೋಗ್ಯದಲ್ಲಾದ ಏರುಪೇರಿನಿಂದ ಹೆದರಿದಂತಿದ್ದ ಸುಮಿತ್ರಾ ಬೆಂಗಳೂರಿನಿಂದ ಬಂದಾಗಿನಿಂದ ಮುಂಬಯಿಯಲ್ಲಿದ್ದ ಮಗನಿಗೆ ಮದುವೆ ಮಾಡಿಬಿಡಬೇಕೆಂದು ಗೋಪಾಲರಾಯರನ್ನು ಒತ್ತಾಯಿಸಲು ಪ್ರಾರಂಭಿಸಿದರು.

(ಮುಂದಿನ ಪುಟಕ್ಕೆ...)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## *"ಐದು ರೂಪಾಯಿಯ ಋಣ"*

(.. ಹಿಂದಿನ ಪುಟದಿಂದ)

ಗೋಪಾಲರಾವ್ ಮತ್ತು ಸೀತಾಬಾಯಿಯ ಅಭಿಪ್ರಾಯವೂ ಅದೇ ಆಗಿತ್ತು. ಮುಂದಿನ ಎರಡು ತಿಂಗಳಲ್ಲಿ ವಿವೇಕನ ಮದುವೆ ಮಾಡಲಾಯಿತು. ಅಣ್ಣನ ಮದುವೆಯ ಸಾಕಷ್ಟು ಜವಾಬ್ದಾರಿಗಳನ್ನು ನಿಭಾಯಿಸುತ್ತ ಓಡಾಡಿಕೊಂಡಿದ್ದ ಶುಭಾಳಿಗೆ ಆರತಕ್ಷತೆಗೆ ಬಂದ ಬ್ಯಾಂಕ್ ಮ್ಯಾನೇಜರ್ ಕುಲಕರ್ಣಿ ಕಾಣಿಸಿದ್ದರು. ಅವರನ್ನು ಮಾತನಾಡಿಸಬೇಕೆಂದು ಶುಭಾ ಸ್ಟೇಜ್ ಹತ್ತಿರ ಬಂದಾಗ, ಕುಲಕರ್ಣಿಯವರು ವಧು-ವರರಿಗೆ ಶುಭಕೋರಿ ಊಟದ ಮನೆಯತ್ತ ಹೊರಟಿದ್ದರು. ಊಟ ಎಂದೊಡನೆ ಅಮ್ಮನಿಗೆ ಊಟಕ್ಕಿಂತ ಮೊದಲು ಮಾತ್ರೆಯೊಂದನ್ನು ಕೊಡಬೇಕೆಂಬುದು ನೆನಪಾಗಿ ಕೋಣೆಯತ್ತ ನಡೆದಳು ಶುಭಾ. ಮುಂದಿನ ಎರಡು ವಾರಗಳಲ್ಲಿ ಮನೆಯಲ್ಲಿನ ಪೂಜೆ, ಸಂಭ್ರಮಗಳಲ್ಲಿ, ಮುಂಬಯಿಗೆ ಹೊರಡಲಿದ್ದ ಅಣ್ಣ-ಅತ್ತಿಗೆಗೆ ಪ್ಯಾಕಿಂಗಿನಲ್ಲಿ ನೆರವಾಗುವುದರಲ್ಲಿ ತೊಡಗಿಕೊಂಡಳು ಶುಭಾ. ಮುಂದೊಂದು ದಿನ ಬ್ಯಾಂಕಿಗೆ ಹೋಗಿಬಂದ ಗೋಪಾಲರಾವ್ ಸುದ್ದಿಯೊಂದನ್ನು ತಂದಿದ್ದರು. "ಮ್ಯಾನೇಜರ್ ಕುಲಕರ್ಣಿಯವರಿಗೆ ದೆಹಲಿಗೆ ಟ್ರಾನ್ಸಫರ್ ಆಗಿ, ಕುಟುಂಬದವರನ್ನು ತಮ್ಮ ಊರಿನ್ಯಾಗೇ ಬಿಟ್ಟು, ಒಬ್ಬರೇ ದೆಹಲಿಗೆ ಹೋಗಿದ್ದರಂತ.ಒಂದು ವಾರದ ಹಿಂದೆ ರಾತ್ರಿ ಹೊತ್ತಿನ್ಯಾಗ ಮ್ಯಾಸಿವ್ ಹಾರ್ಟ್ ಅಟ್ಯಾಕ್ ಆಗಿ ತೀರಿಕೊಂಡರಂತ, ಮರುದಿವ್ಸ ಮುಂಜಾನೆ ಬಂದ ಹಾಲಿನವನು ನೋಡಿದ ಮ್ಯಾಲೆ ಗೊತ್ತಾಯಿತಂತ, ಪಾಪ. ಒಳ್ಳೇ ಮನುಷ್ಯ, ಹೆಂಗಾತು ನೋಡು" ಎಂದರು. "ಅಯ್ಯೋ, ನಾನು ಅವರಿಗೆ ಐದು ರೂಪಾಯಿ ಕೊಡಬೇಕಾಗಿತ್ತು. ಡೈರಿಯೊಳಗೂ ಬರೆದಿಟ್ಟುಕೊಂಡಿದ್ದೆ" ಎಂದ ಶುಭಾ ಆ ದಿನ ತನಗೆ ಸಹಾಯ ಮಾಡಿದ ವ್ಯಕ್ತಿಗೆ ಅವಶ್ಯಕತೆಯಿದ್ದಾಗ ಸಹಾಯ ಮಾಡಲು ಯಾರೂ ಇರಲಿಲ್ಲವಲ್ಲ ಎಂದು ಮರುಗಿದಳು.

ಪುಟ್ಟ ಡೈರಿಯನ್ನು ಕೈಯಲ್ಲಿ ಹಿಡಿದು ನೆನಪುಗಳಲ್ಲಿ ತನ್ನನ್ನು ಮರೆತಂತಿದ್ದ ಶುಭಾಳನ್ನು ಮಕ್ಕಳ ಕೂಗು ಎಚ್ಚರಿಸಿತ್ತು. ಮಕ್ಕಳಿಬ್ಬರೂ ಸಂಸ್ಥೆಗೆ ಕೊಡಲು ಶಾಲಾ ಸಾಮಗ್ರಿಗಳನ್ನು ಜೋಡಿಸಿಟ್ಟು ಆಟವಾಡಲು ಹೋಗುತ್ತೇವೆಂದು ಹೇಳಿ ಹೊರಗೋಡಿದರು. ಮಕ್ಕಳು ಅತ್ತಹೋದ ನಂತರ ಶುಭಾಳ ಯೋಚನೆ ಬೇರೊಂದು ನಿಟ್ಟಿನಲ್ಲಿ ಮುಂದುವರೆಯಿತು. ಇಪ್ಪತ್ತು ವರ್ಷಗಳ ನಂತರವೂ ಕುಲಕರ್ಣಿಯವರಿಗೆ ಹಿಂದಿರುಗಿಸಲಾಗದ ಐದು ರೂಪಾಯಿ, ತೀರಿಸಲಾಗದ ಋಣವಾಗಿಹೋಯಿತೇ? ಋಣದ ಭಾರ ಹೆಚ್ಚಿನದಲ್ಲವೇ? ಅವಶ್ಯಕತೆಯಿದ್ದವರಿಗೆ ಕೈಲಾದ ಸಹಾಯ ಮಾಡಿದರೆ ಈ ಋಣವನ್ನು ತೀರಿಸಿದಂತಾಗುವುದೇ? ಹೀಗೆ ತನ್ನನ್ನೇ ಪ್ರಶ್ನಿಸಿಕೊಂಡ ಶುಭಾ ತಾನೇ ಉತ್ತರವನ್ನು ಕಂಡುಕೊಂಡಂತೆ ಗೆಳತಿ ಆರತಿಗೆ ಫೋನ್ ಮಾಡಿ,"ಅನಾಥಾಶ್ರಮದ ಮಕ್ಕಳಿಗೆ ಇನ್ನೂ ಹೆಚ್ಚಿನ ಅವಶ್ಯಕತೆಯೇನಾದರೂ ಇದ್ದರೆ ನಾನು ಸಹಾಯ ಮಾಡುತ್ತೇನೆ" ಎಂದಳು.

ಶುಭಾಳ ಈ ನಿರ್ಧಾರದಿಂದ ನನ್ನಲ್ಲಿ ಹಲವಾರು ಪ್ರಶ್ನೆಗಳು ಮೂಡಿದ್ದವು. ಶುಭಾ, ಐದು ರೂಪಾಯಿಯ ಈ ಋಣವನ್ನು ಸುಮಿತ್ರಾ ಮತ್ತು ಗೋಪಾಲರಾಯರ ಮಗಳಾಗಿ ತೀರಿಸಿದ್ದಳೋ? ಅಥವಾ ಅಂಜಲಿ ಮತ್ತು ಅರ್ಜುನ್ ರ ಅಮ್ಮನಾಗಿ ತೀರಿಸಿದ್ದಳೋ? ಇಂದಿಗೂ ಹೆತ್ತವರ ಋಣವನ್ನು ತೀರಿಸಲು ಗಂಡು ಮಕ್ಕಳಿಂದ ಮಾತ್ರ ಸಾಧ್ಯವೆಂದು ಅಭಿಪ್ರಾಯಪಡುವ, ಯಾವುದೇ ಪರಿಸ್ಥಿತಿಯಿದ್ದರೂ ಮಗನಾದ ವಿವೇಕನ ಪರವಹಿಸಿ ಮಾತನಾಡುವ ಗೋಪಾಲರಾವ್ ಮತ್ತು ಸುಮಿತ್ರಾರಿಗೆ ಶುಭಾ ನೀಡಿದ ಉತ್ತರವಾಗಿತ್ತೇ ಇದು ಎಂದು ಅಂದುಕೊಂಡೆ. ಆ ಮನೆಯ ಮಗಳಾಗಿ ತನ್ನ ಕುಟುಂಬದವರ ಬಗ್ಗೆ ವಹಿಸಿದ ಕಾಳಜಿ, ಬ್ಯಾಂಕಿನಲ್ಲಿ ಎದುರಿಸಿದ ಅಸಹಾಯಕತೆ, ಅಮ್ಮನನ್ನು ಕರೆದುಕೊಂಡು ಆಸ್ಪತ್ರೆಗಳಿಗೆ ಓಡಾಡಲು ನೀಡಿದ ತನ್ನ ಸಮಯ ಜೊತೆಗೆ, ತನಗೆ ದೊರೆತಿದ್ದ ನೌಕರಿಯ ಅವಕಾಶವನ್ನು ಬಿಟ್ಟುಕೊಟ್ಟು ಅಮ್ಮನಿಗೆ ಅಮ್ಮನಾಗಿ ಆರೈಕೆ ಮಾಡುವುದರೊಂದಿಗೆ ಶುಭಾ ತನ್ನ ಋಣವನ್ನು ಅಂದೇ ತೀರಿಸಿದ್ದಳಲ್ಲವೇ? ಎನಿಸಿತ್ತು. ಇದರೊಂದಿಗೆ, ಅವಶ್ಯಕತೆಯಿದ್ದವರಿಗೆ ಹೆಚ್ಚಿನ ಸಹಾಯ ಮಾಡಿದರೆ ಮಾತ್ರ ಆ ಐದು ರೂಪಾಯಿಯ ಋಣವನ್ನು ತೀರಿಸಿದಂತಾಗುತ್ತದೆಯೇ? ಎಂದು ನನ್ನನ್ನೇ ಪ್ರಶ್ನಿಸಿಕೊಂಡಾಗ, ತನಗಾದ ಜೀವನಾನುಭವದಿಂದ "Help Someone in Need" ಎನ್ನುವುದನ್ನು ತನ್ನ ಮಕ್ಕಳಿಗೂ ಕಲಿಸಿಕೊಡುವ ಪ್ರಯತ್ನವನ್ನು ಶುಭಾ ಮಾಡಿದಳೇ? ಇರಬಹುದೇನೋ ಎಂದುಕೊಳ್ಳುತ್ತಾ ನಾನೂ ನನ್ನಷ್ಟಕ್ಕೇ ಹಾಡೊಂದನ್ನು ಹೇಳಿಕೊಂಡಿದ್ದೆ. "ಹೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ, ಹೆಣ್ಣಲ್ಲವೆ ನಮ್ಮನ್ನೆಲ್ಲ ಪೊರೆವವಳು....".

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana